ACC no. 913
1932
ಗ್ರಂಥಾಲಯ

ಶಿವಾನುಭವ ಗ್ರಂಥಮಾಲಾ ನಂ॥ ೩೪

# ಹರಿಹರನ ರಗಳೆಗಳು.

ಭಾಗ ೧.

SHRI SHIDDHESHWAR LIBRARY BIJAPUR

ಸಂಪಾದಕರು.

**ರಾ॥ ಸಾ॥ ಫ. ಗು. ಹಳಕಟ್ಟಿ.**

ಬಿ. ಏ. ಎಲ್. ಎಲ್. ಬಿ. ವಿಜಾಪುರ.

ACC NO
042

೧೯೩೨

**ಬೆಲೆ ೯ ಆಣೆ.**

[ಈ ಗ್ರಂಥದ ಎಲ್ಲ ಹಕ್ಕುಗಳನ್ನು ಗ್ರಂಥಕರ್ತರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ.]

B/121 B/121

A C No 23

Acc No 042

ಗ್ರಂಥಾಲಯ

033:155 Har
Hal

# ಪ್ರಸ್ತಾವನೆ.

ಕರ್ನಾಟಕ ಕವಿಧುರಂಧರನಾದ ಹರಿಹರನು ಗಿರಿಜಾಕಲ್ಯಾಣವಲ್ಲದೆ ೬೪ ಪುರಾತನರು ಮತ್ತು ಶಿವಶರಣರು ಇವರ ಚರಿತ್ರೆಗಳನ್ನು ರಗಳೆಗಳ ರೂಪದಿಂದ ಬರೆದಿರುವನು. ಇವನ ಕೃತಿಗಳಲ್ಲಿ ಈ ರಗಳೆಗಳು ಇನ್ನೂ ಅಷ್ಟು ಪ್ರಚುರವಾಗಿರುವದಿಲ್ಲ. ಇವುಗಳಾದರೂ ಕನ್ನಡ ವಾಙ್ಮಯದಲ್ಲಿ ಅತ್ಯಂತ ಮಹತ್ವದ ಕಾವ್ಯಗಳಾಗಿವೆ. ಇವುಗಳು ಶಿವಾನುಭವ ಪತ್ರಿಕೆಯಲ್ಲಿ ಮೊದಲು ಪ್ರಕಟಿಸಲ್ಪಟ್ಟವು. ಹೀಗೆ ಈ ವರೆಗೆ ಏಳು ರಗಳೆಗಳು ಪ್ರಸಿದ್ಧವಾಗಿವೆ ಅವುಗಳನ್ನೇ ನಾವು ಈಗ ಸ್ವತಂತ್ರ ಗ್ರಂಥವಾಗಿ ಅಚ್ಚುಗೊಳಿಸಿದ್ದೇವೆ.

ಇವುಗಳಲ್ಲಿ ಪುಷ್ಪದ ರಗಳೆ ಮತ್ತು ಲಿಂಗಾರ್ಚನೆಯ ರಗಳೆ ಇವುಗಳನ್ನು ಬಿಟ್ಟು ಉಳಿದ ರಗಳೆಗಳು ಮೂರು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಶುದ್ಧೀಕರಿಸಿ ಇದರಲ್ಲಿ ಅಚ್ಚುಹಾಕಿದ್ದೇವೆ. ಈ ಗ್ರಂಥಗಳಲ್ಲಿ ೧ ನೆಯದು ಮೈಸೂರು ಓರಿಎಂಟಲ್ ಲೈಬ್ರರಿಯಲ್ಲಿ ದೊರಕಿದ್ದು ೨ ನೆಯದು ಶ್ರೀ ಕಲ್ಲಿನಾಥಾರ್ಯರು ಮು. ದಂಡಿನಶಿವರ ಜಿ॥ ತುಮಕೂರು ಇವರು ಕಳುಹಿಸಿದ್ದು ೩ ನೆಯದು ಶಿ। ಮೂ॥ ಶಿವಮೂರ್ತಿ ಶಾಸ್ತ್ರಿಗಳು ಹುಲಕುಂಟೆಮಠ-ಕೀರ್ತನಕೇಸರಿ-ಮು॥ ತುಮಕೂರು ಇವರು ಶೋಧಿಸಿ ಕಳುಹಿಸಿದ್ದು. ಈ ಮೂರು ಗ್ರಂಥಗಳ ಸಹಾಯದಿಂದ ಈ ರಗಳೆಗಳು ಸಿದ್ಧಗೊಳಿಸಲ್ಪಟ್ಟವೆ. ಆದರೆ ಮೊದಲಿನ ೨ ರಗಳೆಗಳು ನಂ॥ ೨ ನೇ ಗ್ರಂಥದ ಸಹಾಯದಿಂದ ಮಾತ್ರ ಸಿದ್ಧಗೊಳಿಸಲ್ಪಟ್ಟಿದೆ. ಈ ಗ್ರಂಥಗಳನ್ನು ನಮ್ಮ ಕಡೆಗೆ ಕಳುಹಿಸಿದ್ದಕ್ಕಾಗಿ ನಾವು ಮೇಲ್ಕಂಡ ಎಲ್ಲ ಮಹನೀಯರಿಗೆ ಅತ್ಯಂತ ಆಭಾರಿಯಾಗಿರುವೆವು.

ವಿಜಾಪುರ
ತಾ॥೨೪-೧೨-೩೨.

ಫ. ಗು. ಹಳಕಟ್ಟಿ
ಸಂಪಾದಕ.

## ಅನುಕ್ರಮಣಿಕೆ.


| | | ಪುಟ. |
|---|---|---|
| ೧ | ಪುಷ್ಪದ ರಗಳೆ | ೧ |
| ೨ | ಲಿಂಗಾರ್ಚನೆಯ ರಗಳೆ | ೯ |
| ೩ | ತಿರುನೀಲಕಂಠ ಮಹಾತ್ಮೆ | ೧೫ |
| ೪ | ಕಣ್ಣಪ್ಪನ ಮಹಾತ್ಮೆ | ೨೬ |
| ೫ | ಅನಾಯನಾರ ಭಕ್ತರ ಮಹಾತ್ಮೆ | ೫೭ |
| ೬ | ಚನ್ನಯ್ಯಗಳ ಮಹಾತ್ಮೆ | ೬೩ |
| ೭ | ಯಳೆಯಾಂಡ ಗುಡಿಮಾರರ ಮಹಾತ್ಮೆ | ೭೬ |


# ಹಂಪೆಯ ಹರಿಹರಾಚಾರ್ಯರ
# ಪುಷ್ಪದ ರಗಳೆ.

ಕಂದ॥ ಲೀಲೆಯೊಳೋಲೈಪೆಂ ಮಧು-
ರಾಲಾಪದೆ ಪುಷ್ಪರಗಳೆಯೆಂಬೀ ಪೊಸಪೂ-
ಮಾಲೆಯನವಧರಿಸಗಜಾ
ಲೋಲಸುಧಾಶೀಲ ಹಂಪೆಯ ವಿರೂಪಾಕ್ಷ॥

## ಲಲಿತ ರಗಳೆ.

ಶ್ರೀಸಕಲ ಸುರಮುಕುಟನಿಕಟ ರಂಜಿತ ಚರಣ
ಭಾಸುರಾದಿತ್ಯಕೋಟಿಪ್ರಭಾ ಸಮ ಕಿರಣ॥
ಹರುಷದಿಂ ಬೇಡುವೆಂ ನಿಮ್ಮನುತ್ಸವದಿಂದೆ
ಕರುಣಿಸುದು ಹಂಪೆಯ ವಿರೂಪಾಕ್ಷ ದಯೆಯಿಂದೆ॥
ಪೊಚ್ಚ ಪೊಸ ಪೂಗಳಿಂದರ್ಚಿಸುವದಂ ದೇವ।
ಅಚ್ಚರಿಯೊಳಿತ್ತು ಕರುಣಿಸುವದಿಂದೆಲೆ ದೇವ॥
ಇಂದು ಹಂಪೆಯ ಪುರದೊಳಿಂತಿದಂ ಕೊಂಡಾಡಿ।
ಮುಂದೆ ಜಾವದೊಳೆ ಭಸಿತೋದ್ಧೂಳನವ ಮಾಡಿ॥
ಪರಿಮಳ ಪೊಸರದಂತೆ ಬಿಗಿದು ನೈಯ್ದಪ್ಪಿರ್ದ।
ಹರಿವರಿಯ ಕರಡಿಗೆಯನಾಂತುಕೊಂಡೆಸೆದಿರ್ದ॥
ನಿನ್ನ ಗೀತಂಗಳಂ ಹರುಷದಿಂ ಪಾಡುತಂ।
ನಿನ್ನ ಪದ್ಯಂಗಳಂ ಪುಳುಕಿಸುತ್ತೋದುತಂ॥
ನಿನ್ನವರ ಕೀರ್ತಿಯಂ ಕೈವಾರಿಸುತೆ ಬರುತೆ।
ನಿನ್ನವರ ಮೂರ್ತಿಯಂ ನೆನೆದು ಕರಗುತೆ ಬರುತೆ॥
ಪರಿಮಳದ ಸುಗ್ಗಿ ಸೌರಭದ ಸಂದಣಿ ಯೆನಿಪ।
ಸುರಚಿರಾಮೋದದ ರಸಾಂಭೋಧಿ ಯೆಂದೆನಿಪ॥

ಉರುವಣಿಸ ಕಂಪಿನ ಪರಮ ಸೀಮೆ ಯೆಂದೆನಿಪ ।
ಸುರತರು ಸುಗಂಧದ ತವರ್ಮನೆ ಯಿದೆಂದೆನಿಪ ॥

ಪೂದೋಟಮಂ ದೂರದಿಂ ಕಂಡು ಸೊಂಪೇರಿ ।
ಆದ ಪರಮಾನಂದದಿಂದೊಲಿದು ನಲವೇರಿ ॥

ಪುಟನೇಳುತಡ್ಡಮುಂ ತ್ರಿಗುಟಮುಂ ಪರಿದಾಡಿ ।
ನಟನಂತಿರುಗ್ಗಡಿಸಿ ಕುಣಿಕುಣಿದು ಕೊಂಡಾಡಿ ॥

ಬೆಲ್ಲ ಪತ್ರಮನುತ್ತರಣಿಯನುನ್ಮತ್ತಮಂ ।
ಪಲ್ಲವಿಪ ಕಕ್ಕೆ ಬಿಳಿಯೆಕ್ಕೆಗಳ ಮೊತ್ತಮಂ

ರುದ್ರಜಟೆಯಂ ತುಂಬೆಯಂ ಕಂಚಿವಾಳಮಂ ।
ಭದ್ರಮುಖಿ ಮೊದಲಾದ ನವಪತ್ರಜಾಲಮಂ ॥

ಕಂಡು ಕಂಡಾ ಪತ್ರಗಳ್ಗೈದೆ ಶರಣೆನುತ ।
ಕಂಡೆಂ ಫಲಂ ಪಿರಿದದಂತಿರುವ ನೀವೆನುತ ॥

ಬಗೆಯೆ ಪೂವಂ ಕಂಡು ನಿಗೆ ಶರಣು ನಿಮಗೆನುತೆ ।
ನಗುತಲ್ಲಿ ದೊಡ್ಡ ಪತ್ರಕೆ ನಮೋನ್ನಮೊಯೆನುತೆ ॥

ಬರವರಲ್ಮಂಗುಡಿಯ ಕಂಪು ಕರದಿಂ ತೀಡೆ ।
ಹರಹರ ವಿರೂಪಾಕ್ಷ ನಿಮಗೆನುತ್ತಂ ಕೂಡೆ ॥

ಮನದಿಂದೆ ಕೈಕೊಳ್ಪ ಮುನ್ನವೀ ಗಂಧಮಂ ।
ನಿನಗೆ ಬಳಿಕೀವೆನುತ್ತಮ ಕುಸುಮ ವೃಂದಮಂ ॥

ಎಂದರ್ಪಿಸುತ್ತೆ ಪೂದೋಟಮಂ ಕೈಮಿಕ್ಕು ।
ಬಂದು ಪುಳುಕಿಸುತೆ ಪರಮಾನಂದದಿಂ ಮೊಕ್ಕು ॥

ಕೂಗಾಡುತೊಲೆದಾಡುತಾಹಾ ವಿರೂಪಾಕ್ಷ ।
ಪೂಗಳಂ ನಡೆನೋಡುತಾಹಾ ವಿರೂಪಾಕ್ಷ ॥

ಎಂದೆನುತೆ ಹಿಗ್ಗಿ ಹೊಗಳುತ್ತೊಲೆದು ನಲಿವುತ್ತೆ ।
ಚಂದ ಚಂದದ ಕುಸುಮ ವೃಂದಮಂ ನೋಡುತ್ತೆ ॥

ಎನಗಿಂತು ಕರುಣಿಸಿದನೇ ಸದಾಶಿವ ಯೆನುತ ।
ಮನದೊಳಗೆ ಹರುಷದಿಂ ನಲಿನಲಿದು ನೋಡುತ್ತ ॥



ಅಳಿ ಯೊರಗದನಿಲಸಲುಗದ ರವಿಕರಂ ಪುಗದ ।
ಬೆಳಿಬೆಳೆದು ಸಳನಳಿಸಿ ಮಘಮಘಿಸುತವಲರಿದು ॥

ಇರವಂತಿ ಇರ ಕಂಡು ನೋಡಲಮ್ಮದೆ ನಿಂದು ।
ಪರಶಿವಂಗೋಲ್ಪೈಪ ಪೂವ ನೀಡೌ ಯೆಂದು ॥

ನನೆ ಮುಗುಳ್ ಕೊನೆಮುಗುಳ್ಬಿರಿದಿರೆ ಮುಗುಳ್ಗಳಂ ।
ತನಿಗಂಪು ತೀವಿರ್ದ ಪೊಚ್ಚ ಪೊಸ ಪೂಗಳಂ ॥

ಕೊಂಡು ಕುಕಿಲಿರಿವುತಂ ಕುಣಿವುತಂ ನಡೆತಂದು ।
ಕಂಡು ಸಂಪಿಗೆಯ ಮರನಿರ್ಪೆಡೆಗೆ ಪರಿತಂದು ॥

ಏನಪ್ಪ ಸಂಪಿಗೆಯೆ ಶಿವನ ಸಿರಿ ಮುಡಿಗೆಂದು ।
ನೀನೀವ ಪೊಸ ಕುಸುಮಮಂ ನೀಡು ನೀಡೆಂದು ॥

ಅಳಿಮನದ ಪರಿಯೆಂದು ಬಗೆಯದಿರ್ನೀನೆನುತ ।
ತಿಳಿದು ಪೊಸಪೂಗಳಂ ನೀಡಪ್ಪ ನೀನೆನುತ ॥

ಆನಂದದಿಂದೆ ಶಿವಲಿಂಗಕರ್ಪಿಸೆನುತೆ ।
ಏನಪ್ಪ ನೀಡು ಬಿರಿ ಮುಗುಳ ಸಂಪಿಗೆ ಯೆನುತೆ ॥

ಅಂತದಂ ಕೊಂಡು ಸೇವಂತಿಯಲ್ಲಿಗೆ ಬಂದು ।
ಮುಂತೆ ಕುಂಕುಮದ ತಾರಗೆಗಳಂತಿರೆ ನಿಂದು ॥

ಎಲೆಲೆ ಪರಿಮಳದ ತಣ್ಪಂಗರೆಯು ಬಾರಪ್ಪ ।
ಕುಲಪತಿಯ ಜಡೆಗಳ್ಗೆ ಪೂಗಳಂ ತಾರಪ್ಪ ॥

ದೇವಂಗೆ ದೇವರ ಶಿಖಾಮಣಿಯ ಜಡೆಮುಡಿಗೆ ।
ಸೇವಂತಿ ನಿನ್ನಯಾ ಪೂವನೀಯೌ ಎನಗೆ ॥

ಎಂದಲ್ಲಿ ಪನ್ನೀರ ಪರಿಮಳದ ಪೂಗೊಂಡು ॥
ಮುಂದೆ ತೋರುತ್ತಿರ್ಪ ಪೂಗಿಡುಗಳಂ ಕಂಡು ॥

ಇದೆ ಮಲ್ಲಿಕಾಲತೆ ವಿರೂಪಾಕ್ಷ ನಿನಗೆನುತೆ ।
ಅದೆ ಮಾಧವೀಲತೆ ವಿರೂಪಾಕ್ಷ ನಿನಗೆನುತೆ ॥

ಮಲ್ಲಿಗೆಯ ಮುಂದಕ್ಕೆ ಮಲೆಯುತಂ ನಡೆತಂದು ।
ಸಲ್ಲೀಲೆ ಪೆರ್ಚೆ ಕಂಪಿನ ನಿಧಿ ಯಿರಲ್ಕಿಂದು ॥

ಹಸುರಳಿದು ಬೆಳ್ಪುಳಿದು ನನೆಯೇರಿ ಹೊದೆದೋರಿ ।
ಹೊಸಪರಿಯ ಬಿರಿಮುಗುಳ್ಗಳಿರೆ ಬೀಗಿ ನಲವೇರಿ ॥

ಮಲ್ಲಿಗೆಯರಳ್ಗಳಂ ಮನವಾರೆ ತಿರಿಯುತಂ ।
ಮೆಲ್ಲಮೆಲ್ಲನೆ ನೋಡುತಲ್ಲಲ್ಲಿ ಕುಣಿವುತಂ ॥

ಏನಮ್ಮ ಅದ್ರುಗಂಚಿ ತುಂಬಿ ತುಳುಕದ ಮುನ್ನ ।
ಆನಂದನಿಧಿ ಶಿವಂಗಳ್ಕರಿಂದಂ ನಿನ್ನ ॥

ಸುಖದ ಸದ್ಗಂಧ ಮೀಸಲನೀಯು ನೀಯೆನುತ ।
ಮುಖ್ಯವೈದ್ರಿಂಗೆ ಸಂದೊಡೆ ಬರ್ದುಂಕುವೆನೆನುತ ॥

ಪೊಸಪೂವನಲ್ಲಿ ಕೊಂಡಾಡುತಂ ನಡೆತಂದು ।
ಎಸೆವ ಜಾತಿಯ ಸಮೀಪಕ್ಕೆ ಮನಮಂ ತಂದು ॥

ಜಾತಿ ನೀನೇ ಸಕಲ ಪುಷ್ಪ ಜಾತಿಗೆ ಜಾತಿ ।
ಭೂತೇಶ್ವರನ ಜಡೆಯ ಮುಡಿಗೇರಿಪೊಡೆ ಜಾತಿ ॥

ಎಂದು ಪೊಗಳುತ್ತಲ್ಲಿ ಪೊಸ ಕುಸುಮಮಂ ಕೊಂಡು ।
ಮುಂದೆ ಕೇತಕಿಯ ಕುಸುಮಂಗಳಂ ಕೈಕೊಂಡು ॥

ಹೊರಗೆ ಮುಳ್ಳೊಳಗೆ ಕಂಪಕ್ಕಕ್ಕ ನಿನ್ನ ಪರಿ ।
ಹೆರೆ ಸೂಡಿದನ ಗುಪ್ತನಂತಿರ್ಪ ನಿನ್ನ ಪರಿ ॥

ಅಲ್ಲಿಂದಲೈತಂದು ಮುಡಿವಾಳದೊಳ್ನಿಂದು ।
ಬೀರರಿತವರ್ಗೆ ನೀನೆಲೆದೋರಲೇಕೆಂದು ॥

ಪರಿಮಳದ ಬೇರ್ಗಳಂ ಕೊಂಡು ನಲಿದಾಡುತಂ ।
ದವನವೇ ಶಿವನ ಪರಿಮಳದ ಹಬ್ಬಂ ಬಾರ ॥

ಭುವನದೊಳ್ನಿನಗೆ ಸರಿಯಿಲ್ಲ ಸೌರಭಸಾರ ।
ಅಲ್ಲಿಂದ ಬಂದು ಸುರಹೊನ್ನೆಯಲ್ಲಿಗೆ ನಿಂದು ॥

ಏನೆನ್ನ ಹೊನ್ನೆ ಸುರಹೊನ್ನೆ ಪರಿಮಳದರಿಸಿ ।
ನೀಮುನ್ನ ಪುಲಿಗೆರೆಯ ಸೋಮಯ್ಯನಂ ಒರಸಿ ॥

ಕೊಂಡ ಸದ್ಭಕ್ತಿ ಪರಿಯುಂಟೆ ಬಾ ನಿನಗೆನುತೆ ।
ಅಲ್ಲಿಂದ ಬಂದು ಪೊಸ ಪೂಗಳಂ ಗೈದುತ್ತೆ ॥



ಕಮಲವೇ ಹರಿಗೆ ಚಕ್ರವನಿತ್ತ ಶಿವನ ಪದ ।
ಕಮಲಕ್ಕೆ ಸಾರ್ವುದುಚಿತಂ ನಿನಗೆ ಪರಮಪದ ॥

ಮೀತೆಂದು ಹತ್ತೆ ಸಾರ್ದಂಬುಜಮನೆತ್ತುತಂ ।
ನೆಯ್ದಿಲೆಯೆ ಶಿವನಲ್ಲಿಗೈಯ್ದಲೇ ಬಗೆದಪ್ಪೆ ॥

ಒಯ್ಯೊಡೆನ್ನಂ ಲಂಚ ನೀವೆ ನೀನುಳಿದಪ್ಪೆ ।
ಚೆಂಗಣಿಗಿಲೇ ಬಾರ ಲಿಂಗದೊಲವೇ ಯೆನುತೆ ॥

ಸಿಂಗರಿಸಬೇಕು ಶಿವನಂಘ್ರಿಯುಂಗಳನೆನುತೆ ।
ಹಿಂಗದೆ ಕೊಳಂಗಳ ಜಲಂಗಳೊಳ್ ಪೋಗಿರ್ದು ॥

ಮಂಗಳವೆನಿಪ್ಪ ಪೂವಂ ಕೊಂಡು ನಿಂದಿರ್ದು ।
ಪೆಸರರಿಯದೇವೆನೇ ಕಂಪುಳ್ಳ ಪೂಗಳಂ ॥

ಕಂಡರಿಯದೇವೆನೊ ಪರಿಮಳವ ಸಾಲ್ಗೆಂದು ।
ಒಂದೊಂದು ನಿರ್ಮಳ ಸ್ಥಾನವಂ ನೆರೆ ನೋಡಿ ॥

ಇಂದುಧರ ಶರಣೆನುತ ಬಾಲ ಚೂತದ ಕೆಳಗೆ ।
ಚಂದ್ರಕಾಂತದ ಶಿಲೆಯ ಮೇಲೆಯ್ದೆ ಕುಳ್ಳಿರ್ದು ॥

ಚಂದದಿಂ ಬಾಳೆಲೆಗಳಂ ಪಾಸಿ ಸುರಿದಿರ್ದು ।
ಚಂದುಳ್ಳ ಪೂಮಾಲಿಕೆಯ ಗೈದು ಸಡಗರಿಸಿ ॥

ಅಲ್ಲಿಂದ ತೆರಳ್ದು ಶಿವನರಮನೆಗೆ ಮುಂತಾಗಿ ।
ಮೆಲ್ಲನಲುಗದೆ ಪುಷ್ಪ ವೊಂದದಿರದಂತಾಗಿ ॥

ಶಿವನ ಮನೆಗಂ ಬಂದು ಬಾಗಿಲೊಳಗಂ ನಿಂದು ।
ಶಿವನುಪ್ಪವಡಿಸುವನ್ನಂ ಬರಂ ಕಾಯ್ದಿರ್ದು ॥

ಏನೆನ್ನ ತಂದೆ ಯುಪ್ಪವಡಿಸಿದಾ ತಂದೆ ।
ಏನಯ್ಯ ತಳುವಿರ್ದನೆನುತಲಿದಾ ತಂದೆ ॥

ಅಳಿಗಳೆರಗದ ಗಂಧವಹ ನಲುಗದಲಿರ್ಗಳಂ ।
ಎಳಸಿ ತಂದೆಂ ತಂದೆ ದೇವ ಪೊಸ ಪೂಗಳಂ ॥

ಎಂದು ಬಿನ್ನೈಸುತ್ತೆ ಹತ್ತೆ ಸಾರ್ದೊಲವಿಂದೆ ।
ತಂದ ಪೊಸ ಸೇವಂತಿಯರಲ ಪನ್ನೀರಿಂದೆ ॥

ಎಸೆಯ ಮೊಗಪ್ರಕ್ಷಾಲನಕ್ಕೆರೆದು ಹಿಗ್ಗುತಂ ।
ಪೊಸ ಪರಾಗದ ವಿಭೂತಿಯ ತಿಲಕನೀವುತಂ ॥

ಮಿಗೆ ನೇಹದಿಂ ನೋಡಿ ಮನದೊಳಗೆ ತೂಪಿರಿದು ।
ಮಘಮಘಿಪ ಕೇತಕಿಯ ಸುಣ್ಣೆಸಳ್ಗಳಂ ಪಿಡಿದು ॥

ಸಿರಿಮುಡಿಯನೊಯ್ಯನೆ ಸಡಿಲ್ಚಿ ನಯವಿಂಡೊರಿಸಿ ।
ಸರಿಸರಿಯ ನಿಂದ ಕೆಂಜೆಡೆಗಳನಲಂಕರಿಸಿ ॥

ಎಳೆಯ ಶಶಿಕಳೆ ನೋಯದಂತೆ ಮೆಲ್ಲನೆ ಪಿಕ್ಕಿ ।
ಹೊಳೆವ ಸುರನದಿ ತುಳ್ಕದಂತೆ ಮೆಲ್ಲಗೆ ಸಿಕ್ಕಿ ॥

ಪೊಸ ಪಡ್ಡಳಿಯ ಪರಿಮಳದ ಕತ್ತುರಿಯನಿಕ್ಕಿ ।
ಶಸಿನಿಳಿವ ಜಡೆಗಳಂ ತಣ್ಪಿನೊಳಗಂಟಿಕ್ಕಿ ॥

ಇರವಂತಿಯಂ ತಂದು ಸಿರಿಮುಡಿಯೊಳಗೆ ತುರುಬಿ ।
ಬೆರಸಿ ಯವರೆಡೆಗಡೆಗೆ ಸೇವಂತಿಗಳ ತುರುಬಿ ॥

ಮಲ್ಲಿಗೆಯ ಪರಿಮಳದ ಚಂದನವನಣ್ಪಿಕ್ಕಿ ।
ಮೊಲ್ಲೆಯ ಮುಗುಳ್ಗಳಂ ನಾಗಕುಂಡಲವಿಕ್ಕಿ ॥

ಸಾದರದಿ ಮಾಧವಿಯ ಮುದ್ರಿಕೆಯನೊಸೆದಿತ್ತು ।
ಕಮಲಂಗಳಂ ಚರಣಕಮಲದೊಳ್ ಕೈಗೊಳಿಸಿ ॥

ಕುಮುದಂಗಳಂ ಕೂಡೆ ಕೆಲದೊಳಂ ಸಿಂಗರಿಸಿ ।
ರಸಧೂಪ ಧೂಮದೊಡನೆಸೆಯಲಾರತಿ ಯೆತ್ತಿ ॥

ಸವೆದ ದೇವಾನ್ನಮಂ ದಿವ್ಯಾನ್ನ ತತಿಗಳಂ ।
ಕ್ರಮದಿಂದಲಿತ್ತು ಕರ್ಪೂರ ವೀಟಿಕೆ ಗೊಟ್ಟು ॥

ಹೆರೆಸಾರ್ದು ಕರುಣ ಪ್ರಸಾದಮಂ ಕೈಕೊಂಡು ।
ತೆರಹಿಲ್ಲದುಗ್ಗಡದ ಶಿವಸುಖವು ನೆಡೆಗೊಂಡು ॥

ನೇಹದಿಂ ನೋಡುತಂ ಲಲ್ಲೆಯಂ ನೀಡುತಂ ।
ದೇವ ಸುಕುಮಾರ ಶಶಿಶೇಖರ ವಿರೂಪಾಕ್ಷ ॥

ದೇವ ಪರಿಮಳ ವೃಂದ ಸೇವಿತ ವಿರೂಪಾಕ್ಷ ।
ದೇವ ಎನ್ನಾಳ್ದ ಸುಖಮೂರ್ತಿಯೆ ವಿರೂಪಾಕ್ಷ ॥



ದೇವ ಎನ್ನಯ್ಯ ಎನ್ನಾಳ್ದನೆ ವಿರೂಪಾಕ್ಷ ।
ಎಂದು ಹೊಗಳುತ್ತೆ ಹೊಂಗುತ್ತೆ ಹಾಡಿ ಮೆಚ್ಚುತ್ತೆ ॥

ನಿಂದು ನಲಿದಾಡಿ ಮಲೆದಾಡಿ ವೈವೆಚ್ಚುತ್ತೆ ।
ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ ॥

ಮುಕ್ತಿ ಸುಖದಿಂದಧಿಕ ವಿದಕೆ ಪಡಿಯಿಲ್ಲೆನಿಸಿ ।
ಪರುಷವಂ ಬಿಸುಡೆಂಬ ಸುರಭಿಯಂ ತೆಗೆಯೆಂಬ ॥

ಸುರತರುವನೊಲ್ಲೆನೆಂಬ ಮೃತವಂ ಚೆಲ್ಲೆಂಬ
ನಿಧಿಗಳಂ ನೂಂಕು ಚಿಂತಾಮಣಿಯನಿಡುಕೆಂಬ ॥

ಉರವಣಿಪ ಪರಮ ಬಕುತಿಯ ಸೊಕ್ಕು ತಲೆಗೇರಿ ।
ಹರ ನಿನ್ನ ಮೂರ್ತಿ ಕರಣಂಗಳೊಳ್ಕಾಲೂರಿ ॥

ಪರವಶಂ ಮೆಯ್ಯಿಕ್ಕಿ ನಿಂದಿರ್ದರುಂ ಮರೆದು ।
ಹರಹರ ನಮಶ್ಶಿವಾಯೆಂಬ ಕಳವಳ ಪಿಡಿದು ॥

ತನೆ ಗದ್ಗದವು ಮುಣ್ಮೆ ಪೊಣ್ಮೆ ಕರಗುತೆ ನಿಂದು ।
ವೀವಿ-ರೂ ರೂ ಪಾಕ್ಷಕ್ಷ ವೆನುತ್ತೆ ಮರವಂದು ॥

ಪೆಸರ್ಗೊಳುವ ಮೊದಲಕ್ಕರದೊಳೆ ಹರುಷಂ ಮೂಡಿ ।
ಮಿಸುಗುವೆರಡನೆಯಕ್ಕರದೊಳು ಸುಖವಕ್ಕಾಡಿ ॥

ಮೂರನೆಯ ವರ್ಣದೊಳ್ಮರೆದು ಪುಳಕಂ ನೆಗೆದು ।
ಮೀರಿ ನಾಲ್ಕನೆಯಕ್ಕರದೊಳೆ ಮನಮವನೊಳಿರಿಸಿ ॥

ಏನೆನ್ನ ನಚ್ಚ ಶಿವಭಕ್ತಿ ಪೆರ್ಚಲ್ಕಂದು ।
ಆನಂದ ರಸದೆ ನಾಲ್ಕಕ್ಕರಂ ತಾನೆಂದು ॥

ನಾಲಗೆಯ ಮೇಲೆ ಹೊರಳುತ್ತೆ ಸಡಿಲುತ್ತ ಮಿರೆ ।
ಲೀಲೆಯಿಂದಾನಂದದಾಶ್ರು ಪುಳಕಂ ನೆಗೆದು ॥

ಮುತ್ತಿದರಿಷಡ್ವರ್ಗವತ್ತ ಸಾರುತ್ತಮಿರೆ ।
ಹತ್ತಿರ್ದ ತಾಪತ್ರಯಂ ತಣ್ಣನಾಗುತಿರೆ ॥

ಮನವು ನಿವೃತ್ತಿಗೆರಗಿ ಬುದ್ಧಿಯದು ತರ್ಕೈಸಿ ।
ನೆನಹು ನಿಮ್ಮೊಳು ಪುಗಲು ಚಿತ್ತವೆರಡಿಲ್ಲೆನಿಸಿ ॥

ನಿನ್ನ ನಿಜವೆನ್ನ ಜೀವವನಿಂಬುಗೊಂಡಿರಲು ।
ನಿನ್ನ ರೂಪೆನ್ನ ಕಣ್ಗಳನಿಂಬುಗೊಂಡಿರಲು ॥

ನಿನ್ನ ನುತಿಯೆನ್ನ ಜಿಹ್ವೆಯನಿಂಬುಗೊಂಡಿರಲು ।
ನಿನ್ನ ಜಪವೆನ್ನ ಕರ್ಣವನಿಂಬುಗೊಂಡಿರಲು ॥

ನಿನ್ನಂಗವೆನ್ನ ಸರ್ವಾಂಗವಂ ಪಬೀರಲು ।
ನಿನ್ನ ನೆನಹೆನ್ನೆದೆಯೊಳೊಚ್ಚತಂಗೊಂಡಿರಲು ॥

ಇಂತು ನೀವೆನ್ನನೊಚ್ಚತವಾಗಿ ಕೈಕೊಂಡು ।
ಸಂತಸದೊಳಾ ನಿನ್ನನಗಲದೆ ಮನಂಗೊಂಡು ॥

ಅರ್ಚಿಸುತ್ತಿರ್ಪುದಂ ಕರುಣಿಸುವದೆಲೆ ದೇವ ।
ನಚ್ಚಿ ನಲಿದಿರ್ಪುದಂ ಕರುಣಿಸುವದೆಲೆ ದೇವ ॥

ಮಚ್ಚಿ ಮರೆದಿರ್ಪುದಂ ಕರುಣಿಸುವದೆಲೆ ದೇವ ।
ದೇವ ಬೋಳೆಯರರಸ ದೇವ ಕರುಣಿಗಳರಸ ॥

ದೇವ ದಾನಿಗಳರಸ ದೇವ ಮಾನಿಗಳರಸ ।
ಹೆಂಪಿಡಿದಮರ ವೃಕ್ಷ ಹಂಪೆಯ ವಿರೂಪಾಕ್ಷ ॥

ಬೇಡುವೆನಿದಂ ದೇವ ಮಾಡುವುದಿದಂ ದೇವ ।
ಶಿಶುವೆಂದು ನೋಡುವದು ಪಶುವೆಂದು ಕೂಡುವದು ॥

ವಿಷಯದಿಂ ನೊಂದಪೆಂ ಪಸಿವಿಂದ ಬೆಂದಪೆಂ ।
ಕಾಮದೊಳ್ಕಂದಿಪೆಂ ತಾಮಸದೊಳೊಂದಿದೆಂ ॥

ಮೋಹದಿಂ ಮುಗ್ಗಿದೆಂ ದೇಹದಿಂ ತಗ್ಗಿದೆಂ ।
ಏಮೆಂ ಮಹಾದೇವ ಕಾವುದು ಮಹಾದೇವ ॥

ಆರನೆಂಬೆಂ ದೇವ ಆರುಂಟು ಎಲೆ ದೇವ ।
ಎನಗೆ ಹೊನ್ನುಂ ನೀನೆ ಎನಗೆ ಚೆನ್ನುಂ ನೀನೆ ॥

ಎನಗೆ ಕುಲವುಂ ನೀನೆ ಎನಗೆ ಬಲವುಂ ನೀನೆ ।
ಎನಗೆ ಸರ್ವಂ ನೀನೆ ಎನಗೆ ಗರ್ವಂ ನೀನೆ ॥

ಎನಗೆ ಮಾತೆಯುಂ ನೀನೆ ಎನಗೆ ಪಿತನುಂ ನೀನೆ ।
ಭವಭವಾಂತರದೊಳಂ ನಿನ್ನನರ್ಚಿಸುತಿರ್ಪ ॥



ತವೆಚನ್ನ ಭಕ್ತಿಯಂ ಕರುಣಿ ಕರುಣಿಸು ಬೊಪ್ಪ ।
ರಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರೂಪಾಕ್ಷ ॥
ದಯೆಗೆಯ್ವಿರೂಪಾಕ್ಷ ಭಯಹರ ವಿರೂಪಾಕ್ಷ ।
ಜಯ ಜಯ ವಿರೂಪಾಕ್ಷ ನಮಸ್ತೇನಮಃ ॥

ಕಂದ॥ ಅಕ್ಷಮನಳಿಪಂ ಮಾಯಾ ।
ಪಕ್ಷನು ನಾಂ ನಿಮ್ಮನೊಲ್ದು ಪೊರ್ದಿದೆನಭವಾ ॥

ರಕ್ಷಿಸು ರಕ್ಷಿಸು ರಕ್ಷಿಸು
ರಕ್ಷಿಸು ಹೋ ದೇವ ಹಂಪೆಯ ವಿರೂಪಾಕ್ಷ

### ಹರಿಹರಾಚಾರ್ಯರ ಕೃತ.

## ಲಿಂಗಾರ್ಚನೆಯ ರಗಳೆ.

ಕಂದ॥ ಇಂದುಧರ ನಿಮ್ಮ ಚರಣ ।
ದ್ವಂದ್ವ ಮನನವರತವರ್ಚಿಸುತ್ತಿಹ ಸುಖಮಂ ।
ತಂದೆ ಭವಭವದೊಳೀವುದು ।
ಕಂದರ್ಪಮದಾರಿ ಹಂಪೆಯ ವಿರೂಪಾಕ್ಷಾ ॥

### ಲಲಿತ ರಗಳೆ.

ಶ್ರೀಗುರುವೆ ಹಂಪೆಯ ವಿರೂಪಾಕ್ಷ ಕೇಳಯ್ಯ ।
ನಾಗಭೂಷಣ ನಿಮ್ಮ ವೇಳೆಯಾಳೆನಯ್ಯ ॥

ಸಲುಗೆಯಿಂ ಬಿನ್ನಪಂ ಗೈಯ್ದಪೆಂ ನಾನಯ್ಯ ।
ಒಲವಿಂದೆನಗೆ ವಿರೂಪಾಕ್ಷ ಕರುಣಿಪುದಯ್ಯ ॥

ಧರೆಯೊಳಗೆ ನಿಮ್ಮ ತೊಳ್ತೆಂದು ಸಲಹುವದಯ್ಯ ।
ಪರಮ ಭಕ್ತರ ಪದಕ್ಕೆನ್ನ ಸಲಿಸುವದಯ್ಯ ॥

ಆಗಲದೆ ನಿರಂತರಂ ನಿಮ್ಮನರ್ಚಿಸುವುದಂ ।
ಮಿಗೆ ಮೆಚ್ಚಿ ಮನವುಕ್ಕಿ ಬಂದು ಪುಳಕಿಸುವುದಂ ॥

ತುಂಗಭದ್ರಾನದಿಯ ಸಲಿಲಮಂ ಪೊಗತಂದು
ಲಿಂಗ ನಿಮಗಾನೆ ಮನವಾರೆ ಮಜ್ಜನಕೆಂದು ॥

ಘಮಘಮಿಪ ಚಂದನವನುದ್ವರ್ತನಂ ಮಾಡಿ।
ಅಗಿಲು ಕರ್ದಮಗಳಂ ನಿಮ್ಮ ಮೈಯೊಳ್ತೀಡಿ॥

ಅರೆವಿರಿದ ಸುರಗಿ ಸುರಹೊನ್ನೆ ಸಂಪಗೆಗಳಂ।
ಪರಿಮಳವ ಸೂಸುತಿಹ ಮಲ್ಲಿಗೆಯರಲ್ಗಳಂ॥

ತನಿಗಂಪನೀವ ಮಲ್ಲಿಗೆ ಜಾಜಿ ಪೂಗಳಂ।
ಭರದಿಂದ ತಂದು ಪೂಮಾಲೆಯಂಗಳ ನೆಸಗಿ॥

ಪೆಂಪೆಸೆವ ಶಿವ ನಿಮ್ಮ ಸಿರಿಮುಡಿಯೊಳಗೆ ಸುತ್ತಿ।
ಕಮನೀಯವೆನಿಪ ಗುಗ್ಗಳದ ಧೂಪವನೆತ್ತಿ।
ರಮಣೀಯವೆನಿಪ ಪೊಳೆವಾರತಿಗಳನ್ನೆತ್ತಿ॥

ಸಂತೋಷವಿಂದೆ ಮಾಣಿಕದ ಪರಿಯಾಣಮಂ।
ಮುಂತಿರಿಸಿ ಧಾವಳ್ಯಮಪ್ಪವೋಗರವ ನಿಂಬಪ್ಪ॥

ದಿವ್ಯಾನ್ನವ ಘೃತಾನ್ನ ದೇವಾನ್ನವಂ ಬಡಿಸಿ।
ನವ್ಯ ಸೌರಭ ಶಾಕಪಾಕಂಗಳಂ ಬಡಿಸಿ॥

ಹರುಷದಿಂ ಮನವುಕ್ಕಿ ಕರಗಳಂ ಮುಗಿಮುಗಿದು।
ಹರನೆ ಕೈಕೊಳ್ಳೆಂದು ಭಕ್ತಿಯಿಂದಗಿದಗಿದು॥

ಚೆನ್ನಯ್ಯ ನಿಕ್ಕಿದಂಬಲಿಯಿದಾರೈಸಯ್ಯ।
ಕನ್ನೆ ನಿಮಗೆರೆದ ಹಾಲೆಂದು ಹಾರೈಸಯ್ಯ॥

ಜೋಳಿಯಕ್ಕನ ಬಾಯ ತುತ್ತೆಂದು ಕೊಳ್ಳಯ್ಯ।
ಜೋಳನಿಮಗಿತ್ತನ್ನವೆಂದು ಕೈಕೊಳ್ಳಯ್ಯ॥

ಕಣ್ಣಪ್ಪನಣುಗನೆಂದೆನಗೆ ಕರುಣಿಪುದಯ್ಯ।
ಉಣ್ಣದಿರಬಾರದೆಂಬುದನರಿದೆ ನುಣ್ಣಯ್ಯ॥

ಯಳೆಯಾಂಡ ಗುಡಿಯ ಮಾರನರಸುತ ನಾನಯ್ಯ।
ಛಳಿಸಿದೇವಾನ್ನ ವಿಕ್ಕಿದ ಸುತನು ನಾನಯ್ಯ॥

ಒಕ್ಕಲಿಗ ಮುದ್ದಯ್ಯನಕ್ಕರಿನ ಸುತನಯ್ಯ।
ಚೆಕ್ಕನುಣ್ಣದೊಡೆ ನಿಮ್ಮಣುಗ ಸುತನಾನೈಯ್ಯ॥



ಎಂದು ಭಕ್ತಿಯ ಮನದೊಳಾನೆ ನಿಮಗುಣಲಿತ್ತು।
ಸಂದ ಶರಣರ ವರ ನಿಧಾನ ನಿಮಗುಣಲಿತ್ತು॥

ಪನ್ನೀರ ಅಗ್ಗಣಿಯ ತಂದು ಹಸ್ತಕ್ಕೆರೆದು।
ಪನ್ನಗಧರಗೆ ಕೈಘಟ್ಟಿಯಂ ಕೊಟ್ಟಿರ್ದು॥

ಕರ್ಪೂರ ವೀಳೆಯವನೊಸೆದಳ್ತಿಯಿಂ ಕೊಟ್ಟು।
ಸರ್ಪಭೂಷಣ ನಿಮ್ಮ ಚರಣಕ್ಕೆ ಪೊಡಮಟ್ಟು॥

ಹೆರೆ ಸಾರ್ದು ನಿಮ್ಮ ಪೂಜೆಯನಕ್ಕರಿಂ ನೋಡಿ।
ಕರಿಕಂಠ ಶರಣೆಂದು ಸದ್ಭಕ್ತಿಯಂ ಬೇಡಿ॥

ಮನವುಕ್ಕಿ ಪೊಗಳಲುದ್ಯುತನಾಗಿ ನಿಂದಿರ್ದು।
ತನಿನೇಹ ಮೊತ್ತರಿಸಿ ನಿಮ್ಮ ಹತ್ತಿರೆ ಸಾರ್ದು॥
ದೇವ ಮಮಹೃತ್ಕಮಲಮಂಡಿತ ವಿರೂಪಾಕ್ಷ।
ದೇವ ಪ್ರಮಥನಿಚಯ ಪರಿವೃತ ವಿರೂಪಾಕ್ಷ॥
ದೇವ ನೃಕರೋಟಿಮಾಲಾಧರ ವಿರೂಪಾಕ್ಷ।
ದೇವ ಕೋಟ್ಯರ್ಕ ತೇಜೋಮಯ ವಿರೂಪಾಕ್ಷ॥
ದೇವ ಗಂಗಾಮಕುಟ ರಂಜಿತ ವಿರೂಪಾಕ್ಷ।
ದೇವ ಭೃಂಗೀಶ ನಾಟ್ಯಪ್ರಿಯ ವಿರೂಪಾಕ್ಷ॥
ದೇವ ಹರಹರ ಮನ್ಮನೋಹರ ವಿರೂಪಾಕ್ಷ।
ದೇವ ಶಿವಶಿವ ಸದಾಶಿವ ಶಿವ ವಿರೂಪಾಕ್ಷ॥

ಎಂದಿಂತು ಪೊಗಳ್ದು ತಣಿವೈಯ್ದದೇ ಬಾಯ್ಬಿಟ್ಟು।
ನಿಂದೊಮ್ಮೆ ಹಾಡಿ ನೋಡುವೆನೆಂದು ಮನನಟ್ಟು॥

ಲಲಿತ ಬಂಗಾಳದಿಂದೊಲಿದು ನಿಮ್ಮಂ ಹಾಡಿ।
ಮಲಹರಿವರಾಳಿಯಿಂದೊಲಿದು ನಿಮ್ಮಂ ಹಾಡಿ॥

ರೇಶಿ ಗುಜ್ಜರಿಗಳಿಂದೀಶ ನಿಮ್ಮಂ ಹಾಡಿ।
ದೇಶಾಕ್ಷಿ ಗೌಳದೆ ಮಹೇಶ ನಿಮ್ಮಂ ಹಾಡಿ॥

ಭತ್ತೀಸರಾಗದಿಂ ತರ್ತು ನಿಮ್ಮಂ ಹಾಡಿ।
ಚಿತ್ತದೊಡೆಯನೆ ಮತ್ತೆ ಮತ್ತೆ ನಿಮ್ಮಂ ಹಾಡಿ॥

ಚನ್ನಯ್ಯನಂ ಹಾಡಿ ಹೊನ್ನಯ್ಯನಂ ಹಾಡಿ।
ಕಿನ್ನರಿಯ ಬೊಮ್ಮಿ ತಂದೆಯನೊಪ್ಪದಿಂ ಹಾಡಿ॥

ಕಕ್ಕಯ್ಯನಂ ಹಾಡಿ ಚಿಕ್ಕಯ್ಯನಂ ಹಾಡಿ ।
ಅಕ್ಕರಿಂ ನಿಜಲಿಂಗ ಚಿಕ್ಕಯ್ಯನಂ ಹಾಡಿ ॥

ಬಂಕಯ್ಯನಂ ಹಾಡಿ ಬಂಕಯ್ಯನಂ ಹಾಡಿ ।
ಲೆಂಕ ಮಂಚಣ್ಣನಂ ಕಲಿಕೇತನಂ ಹಾಡಿ ॥

ಬಸವರಾಜನ ಮಳೆಯರಾಜನೋಹಿಲಯ್ಯನಂ ।
ಮುಸುಟೇಯ ಚೌಡರಾಯನನುದ್ಭಟಯ್ಯನಂ ॥

ಕೇಶಿರಾಜನ ದುಗ್ಗಳವೆ ದಾಸಿಮಯ್ಯನಂ ।
ಬಾಷೆಗೀಶನ ತಂದ ಮಿಸುಪಾದಿಮಯ್ಯನಂ ॥

ಸಿದ್ಧರಾಮನನಲ್ಲಮನ ಮಲುಹಣಯ್ಯನಂ ।
ರುದ್ರಪಶುಪತಿ ಹಲಾಯುಧಮಯೂರಯ್ಯನಂ ॥

ಸಾಮವೇದಿಗಳಿಗೊಪ್ಪುವ ಶ್ವಪಚದೇವನಂ ।
ಕಾಮಿತವನೀವ ಸಿರಿಯಾಳ ಚಂಗಳೆಯರಂ ॥

ನಂಬಿಯಣ್ಣನ ನಿಂಬಿಯಕ್ಕ ಸತ್ಯಕ್ಕನಂ ।
ಕೆಂಭಾವಿಯೊಳ್ಮೆರೆದ ಭಂಗ ಭೋಗಯ್ಯನಂ ॥

ಕೊಂಡುಗೂಳಿಯ ಕೇಶಿರಾಜ ತೆಲುಗೇಶನಂ ।
ಪಂಡಿತಾರಾಧ್ಯ ನಿಂಡೆಯ ಶಾಂತಿಮಯ್ಯನಂ ॥

ಚೋಳಜೇರನು ಗೊಲ್ಲಳರ ಬಿಬ್ಬಿಬಾಚನಂ ।
ಕೋಳೂರ ಕೊಡಗೂಸು ಮಹದೇವಿಯಕ್ಕನಂ ॥

ಕಾಳಿದಾಸನ ಕಣ್ಣಪನ ಚೆನ್ನಬಸವನಂ ।
ಮೋಳಿಗೆಯ ಮಾರಿತಂಡೆಯ ಮಾದಿರಾಜನಂ ॥

ಅಮ್ಮವ್ವೆ ರೆಮ್ಮವ್ವೆ ಕದಿರೆ ರೆಮ್ಮವ್ವೆಯಂ ।
ನಿರ್ಮಳ ಜ್ಞಾನಿ ಕಮಳವ್ವೆ ಬಾಚವ್ವೆಯಂ ॥

ಗುರುಭಕ್ತ ಜಗದೇವ ಮೊಲ್ಲೆಬೊಮ್ಮಯ್ಯನಂ ।
ಪರದೈವರಹಿತ ಶಂಕರ ದಾಸಿಮಯ್ಯನಂ ॥

ನಚ್ಚಿನರುವತ್ತು ಮೂವರನ ಸಂಖ್ಯಾತರಂ ।
ಅಚ್ಚರಿಯೊಳೆಸೆವ ಭಕ್ತಾಂಗನೆಯರೆಲ್ಲರಂ ॥



ಭಕ್ತಿಯಿಂದಿಂತು ಪಾಡಲ್ಕೊಸೆದು ಪೆಚ್ಚಾಗಿ ।
ಯುಕ್ತಿಯಂ ಮೀರಿದರಸಂ ನಿಮ್ಮ ನಚ್ಚಾಗಿ ॥

ಇಂತು ಮಹಲಿಂಗಮಂ ಕಂಗಳೊಳಗೊತ್ತುತಂ ।
ಮುಂದೆ ಹಾಹಾಯೆಂದು ವಿಷಯಕ್ಕೆಯಳ್ಕುತಂ ॥

ಭೃಂಗಿಯ ಪದಂಗಳಂ ನೆನೆನೆನೆದು ನೆನೆನೆನೆದು ।
ಭಗಿಯಿಂ ಕೋಡಗಾಟವನಾಡಿ ನಲಿದಾಡಿ ॥

ಗತಿವಾದ್ಯಗತಿಗಳಿಂ ಕುಣಿಕುಣಿದು ಕುಣಿದಾಡಿ ।
ಅತಿಶಯಾನುಬೋಧೆಯಿಂ ಭಕ್ತಿಗೆ ಮನಂದಣಿದು ॥

ಏನುಮಂ ತಾನರಿಯದಾನಂದದಿಂ ನಿಂದು ।
ಮೌನವೇ ಗತಿಮತಿಯದಾಗಿ ನೆರೆ ಸಲೆಸಂದು ॥

ಪೊಗಳ್ವಕ್ಕರಂ ನಲಿದು ನಾಲಿಗೆಯ ಮೇಲಿರಲು ।
ಬಗೆಯ ಭಾವಂ ಬಲಿದು ಮನವನೆಡೆಗೊಂಡಿರಲು ॥

ಕೈಕಂಪನವ ಭೀತಿ ಮೈಬೆವರುಯಿರದೇಳೆ ।
ಬಾಯಿ ತೊದಳುಬ್ಬರಿಸೆ ಸುಯ್ಯು ನಿನ್ನೊಳಗಿರಿಸೆ ॥

ಎನೆನ್ನ ಶಂಭುವೆ ಸದಾಶಿವ ಮಹಾದೇವ ।
ಎನೆನ್ನ ಕಾರುಣ್ಯ ಸಿಂಧುವೆ ಮಹಾದೇವ ॥

ಎನೆನ್ನ ನಚ್ಚಿನಧಿದೈವವೆ ಮಹಾದೇವ ।
ಎನೆನ್ನ ಮಚ್ಚಿನ ಮಹಾಸುಧೆಯ ಮಹಾದೇವ ॥

ಎನೆನ್ನ ನಲಿದು ಪೊರೆವಾಳ್ದನೆ ಮಹಾದೇವ ।
ಎನೆನ್ನ ನೊಲಿವ ಕುಲದೈವವೆ ವಿರೂಪಾಕ್ಷ ॥

ಎಂದೀ ತೆರದಿ ನಿಮ್ಮನಪ್ಪಿ ಸುಖವಡೆವುದಂ ।
ತಂದೆ ಕರುಣಿಸುದಯ್ಯ ಸದ್ಭಕ್ತನಪ್ಪುದಂ ॥

ಆವಜಾತಿಗಳೊಳಗೆ ಹುಟ್ಟಿಸಿದೊಡೆಲೆ ದೇವ ।
ನೀವಲ್ಲದರಿಯದಂತಿರಿಸೆನ್ನನೆಲೆದೇವ ॥

ಇಳಿಕೈಯ್ಯದೀ ಸುಖವನೆನಗೆ ಕರುಣಿಸುದಯ್ಯ ।
ಬಳವಳಿಯ ತೊತ್ತೆಂದು ಬಡಿದು ಕಲಿಸುವುದಯ್ಯ ॥

ಬೇರೊಂದ ನೊಲಿವನಲ್ಲೆಂಬುದನರಿವುದಯ್ಯ ।
ಸಾರಿ ಪೊರೆಯಿಟ್ಟೆನೆನ್ನಂ ದಯದಿ ನೋಡಯ್ಯ ॥

ಆವ ತೆರದಿಂದಾದೊಡಂ ಗುರು ವಿರೂಪಾಕ್ಷ ।
ದೇವ ಕರುಣಿಪುದಯ್ಯ ಹಂಪೆಯ ವಿರೂಪಾಕ್ಷ ॥

ಆಳಿನಪಮಾನವಾಳ್ದಂಗಯ್ಯ ಕಾಯಯ್ಯ ।
ಜಾಳಿಸಿದ ಪಾಪಾತ್ಮವಿದನಿನ್ನು ನೀಗೈಯ್ಯ ॥

ಮಾಡುವವನುಂ ನೀನೆ ನೋಡುವವನುಂ ನೀನೆ ।
ಬೇಡುವವನುಂ ನೀನೆ ನುಡಿಸುವವನುಂ ನೀನೆ ॥

ತೊತ್ತಿಂಗದೇನಯ್ಯ ಭೃತ್ಯಂಗದೇನಯ್ಯ ।
ದೀನಂಗದೇನಯ್ಯ ಮೌನವೇ ನಿಮಗಯ್ಯ ॥

ಈಕ್ಷಿಸು ವಿರೂಪಾಕ್ಷ ರಕ್ಷಿಸು ವಿರೂಪಾಕ್ಷ ।
ವಯಗೈಯ್ವಿರೂಪಾಕ್ಷ ಭಯಹರ ವಿರೂಪಾಕ್ಷ ।
ಜಯಜಯ ವಿರೂಪಾಕ್ಷ ಜಯನಮೋಸ್ತುತೇ ॥

ಕಂದ॥ ಕೇಳಯ್ಯ ವಿರೂಪಾಕ್ಷ ಕೈ ।
ಪಾಳುವೆ ನಿಮ್ಮಡಿಯ ತೊತ್ತುತೊತ್ತಿನ ಭೃತ್ಯಂ ॥
ಗಾಳಾಳಿನಾಳಗಾಳಾ ।
ಳ್ಗೀಳುಂ ಭವದಲ್ಲಿ ಹಂಪೆಯ ವಿರೂಪಾಕ್ಷಂ ॥



# ತಿರುನೀಲಕಂಠ ಮಹಾತ್ಮೆ

ಕಂದ॥ ಧರೆಯರಿಯೆ ತನುಪೆರಸಿಯೆ ನೆರೆಸಂದರುವತ್ತು ಮೂವರೋ
ಳ್ಮೊದಲಾ ಮಹೇಶ್ವರನು ॥ ತಿರುನೀಲಕಂಠರ ಚರಿತವನವ
ಧಾರು ಹಂಪೆಯ ವಿರೂಪಾಕ್ಷಾ ॥

## ರಗಳೆ

ಶ್ರೀ ಚೋಳದೇಶವೊಪ್ಪಿಪ್ಪುದು ಧರಾತಳಕೆ
ವಾಚಾಮಗೋಚರವದರ ವಿಸ್ತರಂ ಜಗಕೆ
ಆದೊಡಂ ನಾನದಂ ಬಲ್ಲಂತೆ ಬಣ್ಣಿಪೆಂ
ಸಾದರಂ ಕಡು ನೇಹದಿಂದಿಂತು ಬಣ್ಣಿಪೆಂ
ಲೋಕಪಾವನವೆನಿಸಿ ಪರಿವ ಕಾವೇರಿಯಿಂ
ನಾಕಮಂ ನಗುವ ನಗರಂಗಳಿಪ್ಪೋಜೆಯಿಂ
ಎವೆ ಇಕ್ಕಲಿಂಬಿಲ್ಲದಿಪ್ಪ ಶಿವಭವನದಿಂ
ತವಕದಿಂ ಮಿಗೆ ಮೆರೆವ ತಿರುನಾಳ್ಗಳೊಪ್ಪದಿಂ
ಸರ್ವ ದೆಸೆಗಂ ಪರಿದು ಪರಿವ ಪಾಕಾಲ್ಗಳಿಂ
ಸರ್ವರ್ತುಕೋದ್ಯಾನ ವೆನಿಸಿದ ಬನಂಗಳಿಂ
ಎಳನೀರ್ಗಳಿಂ ಬೆಳೆವ ಕರ್ಬುದೋಂಟಂಗಳಿಂ
ಫಳರಸದೆ ಬೆಳೆವ ನವಶಾಲಿಯ ವನಂಗಳಿಂ
ತೆನೆವಾಲನುಂಡು ಬಳೆವರಗಿಳಿಗಳುಕ್ಕಿನಿಂ
ಕೊನರಂ ಕರ್ದುಂಕಿ ಕೂಗುವ ಪಿಕದ ಸೊರ್ಕ್ಕಿನಿಂ
ಕುಸುಮಕುಳಮಂ ಮುತ್ತಿ ಝೇಂಕರಿಪ ತುಂಬಿಯಿಂ
ಪೊಸ ಕೊಳಂಗಳೊಳೊಲಿದು ನಲಿವಂಚೆ ಇಕ್ಕೆಯಿಂ
ಇಂತೊಪ್ಪುವಾ ದೇಶದೊಳಗೆ ಮೆರೆವುದು ಕರಂ
ಸಂತತಂ ಪೊನ್ನಾಂಬಲಂ ಧರೆಗೆ ಶಿವಪುರಂ

ಆ ಪುರದ ವಿಸ್ತರವನೇನೆಂಬೆನೀ ಧರೆಗೆ
ಕಾಪಾಲಿ ಸಂತತಂ ನೆಲಸಿರ್ಪನದರೊಳಗೆ

ಶಿವನ ನಿಷ್ಠೆಯೆ ಕೋಟೆಯಾಗಿರ್ಪುದಾ ಪುರಕೆ
ಭವನ ಭಕ್ತಿಯೆ ಸಂದ ಕಾಹು ನೋಡಾ ಪುರಕೆ
ಗುಣ್ಪಿರಿಯ ಬಾರದಾಚಾರದಗಳಂ ಪುರಕೆ
ಬಿಣ್ಪನಿಂದೊಪ್ಪವಾಗಮವೆ ಯಾಳ್ಪೇರಿಯುದಕೆ
ಶಿವನಾಗಮವೆ ನೆಗಳ್ದ ಬಿರುದಿನಟ್ಟಣೆಯದಕೆ
ಶಿವಪುರಾಣಂ ಸಮೆದ ಬಾಗಿಲ್ಗಳಾ ಪುರಕೆ
ಮೇಲೆ ಸೋಮಸೂರ್ಯ ವೀಧಿಗಳೆಲ್ಲವಾ ಪುರಕೆ
ಸಲೆಸಂದ ಹರವೀಧಿ ಶಿವವೀಧಿಯಾಪುರಕೆ
ಎಸೆವ ಪಂಚಾಕ್ಷರಿಯೆ ಪರಮನರಮನೆ ನೋಡ
ಪಸರಿಸುವ ಪುಣ್ಯಂಗಳೊಪ್ಪುವ ಮುಗಿಲ್ನೋಡ
ಸತ್ಯಂಗಳುಕ್ಕಡಂ ಶರ್ವನರಮನೆಯೊಳಗೆ
ನಿತ್ಯಂಗಳೆಚ್ಚರಿಕೆ ಶಂಕರನ ಸಭೆಯೊಳಗೆ
ಇಂತೆಸೆವ ಶಿವನ ಸೊಂಪಿನ ಸೊಬಗನೊಳಕೊಂಡು
ಕಂತುಹರನಿಪ್ಪ ಸೆಜ್ಜೆಯ ಸೊಬಗನೊಳಕೊಂಡು
ಎಸೆವ ಪುರದೊಳಗೆಲ್ಲ ಹರಮಯಂ ಶಿವಮಯಂ
ಎಸೆವ ಕೇರಿಗಳೊಳಗೆ ಶಿವನ ಭಕ್ತರ ಮಯಂ
ಶಿವನ ಪೂಜಾಸಂಭ್ರಮಂ ಮನೆಮನೆಗಳೊಳಗೆ
ಶಿವನ ಪದದಂದುಗೆಯ ದನಿ ಮನೆಮನೆಗಳೊಳಗೆ
ದಿನವು ಬೇರಿಲ್ಲ ತಿರುನಾಳೆ ದಿನವಾ ಪುರಕೆ
ಮನವು ಬೇರಿಲ್ಲ ಶಿವಭಕ್ತಿ ನೋಡಾ ಪುರಕೆ
ಕೊಂಕಣನ ಕೊಡೆ ನೋಡೆ ನೋಡೆ ಹಾರಿದುದಲ್ಲಿ
ಬಿಂಕದಿಂದೇರಿರ್ದ ಪೆರ್ಬುಲಿ ಮಡಿದುದಲ್ಲಿ
ಕರುಣದಿಂ ಶಶಿಧರಂ ನಾಟ್ಯವಾಡಿದನಲ್ಲಿ
ಹರುಷದಿಂದಂ ವ್ಯಾಘ್ರಪಾದ ನೋಡಿದನಲ್ಲಿ
ಕೈಲಾಸವದಕೆ ಪುರುಡಿಸುತಿಪ್ಪುದು ನೋಡೆ
ಶೈಲಜಾಪತಿಯಲ್ಲಿ ನೆಲಸಿಪ್ಪನುಂ ನೋಡೆ
ಇಂತು ಶಿವಸಂಪದವನೊಳಕೊಂಡ ಶಿವಪುರಂ
ಸಂತತಂ ರಂಜಿಸುದು ಪೊನ್ನಂಬಲದ ಪುರಂ

ಎಸೆವ ಪುರದೊಳಗೊರ್ವ ಭಕ್ತನಿಪ್ಪಂ ನೋಡೆ
ಪೆಸರೆಸೆವ ತಿರುನೀಲಕಂಠಕುಶವನೋಡೆ



ಅವರರಸಿ ಮುತ್ತೈದೆ ಎಂಬ ನಾಮದ ವನಿತೆ
ಅವರ್ಗಳಿರ್ಬರ್ಗೆ ಹದಿನಾರರ ಹರೆಯವನಿತೆ
ಆ ಯೌವನದೊಳವರ ಚರಿತಂ ಕರಂ ಸೊಸತು
ಮಾಯೆಗುಬ್ಬಸದ ಶಿವಭಕ್ತಿ ಮನದೊಳ್ಪಲಿತು
ನಡೆನುಡಿಯುಭವನೆಂದೆನಿಸಪ್ಪನಾ ಪುರಕೆ
ವೃಷಮೂರ್ತಿ ಎಂದೆನಿಸಿಕೊಂಡಿಪ್ಪನಾಪುರಕೆ

ಇಂತಿರುತೆ ನಿತ್ಯಲಿಂಗಾರ್ಚನೆಗೆ ನಡೆತಂದು
ಸಂತಸಂಬಡುತೆ ಹರನಾಲಯಕ್ಕೈತಂದು
ಕರಗುತೆ ವಿಭೂತಿಯಿಂದುದ್ಧೂಳನಂ ಮಾಡಿ
ಹರುಷದಿಂ ಪಾಡುತಂ ರುದ್ರಾಕ್ಷಿಯಂ ಸೂಡಿ
ಬಲವರಲು ಮನವಾಗಿ ನಲವಿಂದೆ ನಿಂದಿರುತೆ
ನಲಿದಕ್ಕರುಬ್ಬರಿಸ ಚರಣದಿಂಪಡಿಇಡುತೆ
ಅಲ್ಲಲ್ಲಿ ಶಿವಪುರಾಣಂಗಳಂ ಕೇಳುತಂ
ಸಲ್ಲೀಲೆ ಪೆರ್ಚಿ ನಯನಾಶ್ರುವಂ ಸೂಸುತಂ
ನುಡಿಗೊಮ್ಮೆ ಪುಳಕವೇರುತ್ತೆ ದಡದಡಿಸುತ್ತೆ
ಅಡಿಗಡಿಗೆ ಜೊಲ್ದು ಭಿತ್ತಿಗಳನಾರೆ ಮಲಗುತ್ತೆ
ಏಳುತ್ತ ವೇಳುತ್ತ ಅಡಿಗಡಿಗೆ ಕುಳ್ಳಿರುತೆ
ಕೇಳುತ್ತ ಕೇಳುತ್ತ ಕಣ್ಮುಚ್ಚಿ ಕರಗುತ್ತೆ
ಒಳಗೆ ಶಿವಮೂರ್ತಿಯಂ ತಳೆದು ಮೆಲ್ಲಡಿ ಇಡುತೆ
ಗಳಿಗೆಗೊಂದೊಂದಡಿಯನೊಯ್ಯ ನೊಯ್ಯನೆ ಇಡುತೆ
ಲೀಲೆಯಿಂದಿಂತಿಂತು ಎಂತಕ್ಕೆ ಬಲವಂದು
ಲಾಲಿಸುತ ರಂಗಮಂಟಪದ ಮಧ್ಯದೊಳಂದು
ಮೆಲ್ಲಮೆಲ್ಲನೆ ಹತ್ತೆ ಸಾರ್ದು ನೋಡುತೆ ನೆಚ್ಚಿ
ಸಲ್ಲೀಲೆಯಿಂ ಪೂಜಿಸಲ್ಕೆಂದು ಮೈಮೆಚ್ಚಿ
ಪೂವಿನಿಂದೊಮ್ಮೆ ಪೊಸಪುಳಕದಿಂದೊಮ್ಮೊಮ್ಮೆ
ಭಾವದಿಂದೊಮ್ಮೆ ಭರಿತಾಶ್ರುವಿಂದೊಮ್ಮೊಮ್ಮೆ
ತೊದಳಿಂದಲೊಮ್ಮೆ ಗದುಗದುಕೆಯಿಂದೊಮ್ಮೊಮ್ಮೆ

ಮುದದಿಂದಲೊಮ್ಮೆ ಮುಗ್ಧತೆಯಿಂದಲೊಮ್ಮೊಮ್ಮೆ
ಧ್ಯಾನದಿಂದೊಮ್ಮೆ ಹರವಸದಿಂದಲೊಮ್ಮೊಮ್ಮೆ
ಮಾನ್ಯದಿಂದೊಮ್ಮೆ ಮನವೇಗದಿಂದೊಮ್ಮೊಮ್ಮೆ
ಆಕ್ರಮದೊಳೊಮ್ಮೆ ಪರಿವಿಡಿಯಿಂದಲೊಮ್ಮೊಮ್ಮೆ
ಆಕ್ರಮಣೆಯಿಂದೊಮ್ಮೆ ಕರಗುತ್ತಲೊಮ್ಮೊಮ್ಮೆ
ಅರ್ಚಿಸುತ್ತರ್ಚಿಸುತ್ತಾಡುತ್ತ ಬೊಬ್ಬಿಡುತೆ
ಮಚ್ಚಿಸುತೆ ಮೆಚ್ಚಿಸುತೆ ತೆಗೆದು ಮುಂಡಾಡುತ್ತ
ಪಾಡುತ್ತೆ ಪೊಗಳುತ್ತೆ ಬಾಯ್ಗೆ ಬಂದುದನೆಂದು
ನೋಡುತ್ತೆ ಯಾಡುತ್ತೆ ನಲಿದು ವಿಸಟಂಬರಿದು
ಕುಂಬಿಕ್ಕಿ ಕುಣಿಕುಣಿದು ನಡೆಗೆಟ್ಟ ಕುಳ್ಳಿರ್ದು
ಅಂಬಳಿಕಿ ವೈಯ್ಯಿಕ್ಕಿ ಲಲ್ಲೆಗರೆವುತ್ತಿರ್ದು
ಏನೆಯ್ಯ ಏನಭವ ಏನೆನ್ನ ಮನದೊಲವೆ
ಏನೆಯ್ಯ ಏನೆನ್ನ ಪೊನ್ನಾಂಬಲದ ನಲಿವೆ
ಏನೆನ್ನ ಶಂಕರನೆ ಏನೆನ್ನ ಶಶಿಧರನೆ
ಏನೆನ್ನ ಸುಖಮಯನೆ ಏನೆನ್ನ ಮೃತಮಯನೆ
ಎಂದು ಕೊಂಡಾಡಿ ಬೋಳೈಸಿ ಹಾರೈಸುತಂ
ನಿಂದು ನೋಡುತೆ ಮತ್ತೆ ಮತ್ತೆ ಕೊಂಡಾಡುತಂ
ಪೋಗಲಾರದೆ ತಿರುಗಿ ತಿರುಗಿ ಕೊಂಡಾಡುತಂ
ರಾಗದಿಂದಗ್ಗನಿಸಿ ಹಿಗ್ಗಿ ಪೊರೆಯೇರುತಂ
ನಡುವಗಲ್ತೊಡಗಿ ಮಧ್ಯಮ ರಾತ್ರೆ ಪರಿಯಂತ
ಎಡೆವಿಡದ ಈ ಪರಿಯೊಳರ್ಚಿಸುತೆ ಸಂತತಂ
ಇರ್ದಿದ್ದುದೆಂತಕ್ಕೆಯುಭವನಂ ಬೀಳ್ಕೊಂಡು
ಸಾರ್ದ ಹರವರಿಯ ಹರುಷಾಂಬುಧಿಯನೊಳಕೊಂಡು
ಪೊರಮಟ್ಟನಚ್ಚ ಶಿವಲಿಂಗಾರ್ಚಕಂ ನೋಡೆ
ನೆರೆ ತೀವಿ ಪುರದೊಳಗೆ ಧೂಪ ಧೂಮ್ರಂ ಕೂಡೆ
ಹರನನರ್ಚಿಸಿದ ಪರಿಯಂ ನೆನೆದು ಪದವಿಡುತೆ

ತಿರುಗಿ ತನ್ನರಮನೆಗೆ ಎಂದಿನಂದದಿ ಬರುತೆ
ಬರೆ ಪುರದ ವೀಧಿಯೊಂದುಪ್ಪರಿಗೆಯೊಳ್ನಿಂದು



ಹರನೋಲಗದ ನಾಯಿಕಿಯು ವಿಳಾಸಿನೆಯೊಂದು
ತೊಳೆದ ಪರಿಯಾಣದುದಕವನಲ್ಲಿ ಚಲ್ಲುತಿರೆ
ಕೆಳಗೆ ತಿರುನೀಲಕಂಠರ ಮೇಲೆ ಚಿಮ್ಮುತಿರೆ
ತಿರುನೀಲಕಂಠ ತಿರುನೀಲಕಂಠರು ಎಂದ
ಸರವನೊಳಗಿರ್ದ ನಾಯಕಿ ಕೇಳಿ ಭಯದಿಂದ
ಎಳ್ದು ಗಡಗಡನೆ ನಡಗುತ ಬಂದು ಸೈಗೆಡೆದು
ಬಿಳ್ದು ತಿರುನೀಲಕಂಠರ ಚರಣವಂ ಪಿಡಿದು
ಕರುಣಿಪುದು ಸರ್ವಾಪರಾಧಿ ಮರುಳಾನೆಂದು
ಚರಿತದಿಂ ಮನೆಗೆ ಬಿಜಯಂಗೈಸಿ ಕರೆತಂದು
ಪರಿಮಳೋದಕದಿಂದೆ ಮಹಮಜ್ಜನಕ್ಕೆರೆದು
ವರ ದುಕೂಲವನುಡಿಸಿ ಆದರಿಸುತುಂ ನಲಿದು
ದಿವ್ಯಗಂಧಂಗಳಿಂದನುಲೇಪನಂ ಮಾಡಿ
ನವ್ಯಕುಸುಮಂಗಳಂ ಸಿರಿಮುಡಿಯೊಳಗೆ ಸೂಡಿ
ಕಪ್ಪುರದ ವಿಳ್ಯೆಯಮನಾದರಂ ಮಿಗೆ ಕೊಟ್ಟು
ತಪ್ಪಂ ಮರೆವುದೆಂದು ಭಕ್ತಿಯಿಂ ಪೊಡಮಟ್ಟು
ದೇವ ಬಿಜಯಂಗೈವುದೆಂದು ಸಂತಸ ಬಟ್ಟು
ದೇವ ತಿರುನೀಲಕಂಠರು ತಿರುಗಿ ಪೊರಮಟ್ಟು
ಬರಲೊಸರ್ವ ಸೌರಭಂ ಕೇರಿಯೊಳ್ಪರಿವುತಿರೆ
ಪರಿಮಳಂ ಪಟ್ಟಣದ ನಾಲ್ದೆಸೆಗೆ ಸೂಸುತಿರೆ

ಬಂದು ಮನೆಯೊಳಗೆ ಪೊಸ ಕಂಪು ಕವಿದಿರೆ ಕಂಡು
ಎಂದಿನಂತಲ್ಲದೆ ನವೀನವಾಗಿರೆ ಕಂಡು
ಮನದೊಳಗೆ ಮುತ್ತೈದೆ ಮುಳಿದು ಸಿಡಿಮಿಡಿಗೊಂಡು
ಎನಲಮ್ಮದೊಳಗೊಳಗೆ ಜಿನುಗಿ ಗುಜುಗುಜುಗೊಂಡು
ನಯನದೊಳಗಕ್ಕೆಯಂ ನೋಟದೊಳು ಮುನಿಸುಮಂ
ಬಯಕೆಯೊಳು ಬರನುಮಂ ಮೌನದೊಳು ನುಡಿಯುಮಂ
ಮನದೊಳಗೆ ಚಿಂತೆಯಂ ನೇಹದೊಳು ಕೋಪಮಂ
ನೆನಹಿನೊಳು ಬೆರಗುಮಂ ತನುವಿನೊಳು ಬಿಸುಪುಮಂ
ಬಯ್ತಿಡುತೆ ಬಂದು ಮಾನಿನಿ ಪತಿಯ ಕಾಲ್ದೊಳೆದು

ಸಯ್ತ್ರಾಗಲೆಡೆಮಾಡಿ ಬೋನಂಗಳಂ ಪಿಡಿದು
ಅರ್ಪಿಸಲಿಕ್ಕಿ ತಾಂಬೂಲಾದಿಗಳನಿತ್ತು
ದೂರಿಸುತ್ತಂ ಪ್ರಸಾದವ ಸವಿದು ಭಯವೆತ್ತು
ಸಿರಿಮಂಚವನು ಪಚ್ಚಡಿಸಿ ಕೊಟ್ಟು ಸುಯ್ಯುತಂ
ತಿರುನೀಲಕಂಠ ಕುಶವರ ಕೆಲದೊಳೊಪ್ಪುತಂ
ಬಾಡಿರ್ದ ಲತೆಯಂತೆ ಬೆಂಬಿದ್ದು ಪಟ್ಟಿರಲು
ನಾಡೆ ಚಿಂತೆಯೊಳಗಾಳುತ್ತೆ ಮುಳುಗುತ್ತಿರಲು
ರತಿಯಾರ್ಥದಿಂ ನೆಗೆದ ಪುಷ್ಪಧನುವಂಕೊಂಡು
ಸತಿಯನಲ್ಲಾಡೆ ಮನದೊಳಗೆ ಸಲೆ ಭಯಂಗೊಂಡು
ಕಾಮಾನುರಾಗದಿಂ ತಮ್ಮರಸಿಯರ ಮೇಲೆ
ನೇಮಕ್ಕೆ ಕೈಯ್ಯಿಕ್ಕಿ ಸಿಡಿಮಿಡಿಗೊಳುತ ಬಾಲೆ
ಮುಟ್ಟಿದೊಡೆ ಶಿವನಾಣೆ ಎನುತೆ ಕೈಯ್ಯಂ ನೂಂಕೆ
ತೊಟ್ಟನೆ ಬೆದರಿ ಕೋಡಿ ಕರಗಿ ನೋವುತಲಾಕೆ
ಎಂದುವುಂ ಕೇಳದಕ್ಕರ ತನ್ನ ಕಿವಿದಾಗೆ
ನೊಂದು ಪವ್ವನೆ ಪಾರಿ ಕರಗಿ ಕೊರಗುತ್ತ ಮಿಗೆ
ಅಳುಕಿ ಬಾಯಳಿದು ಬಸವಳಿದು ಕುಗ್ಗಿದಿಗೊಂಡು
ಬಳುಕಿ ಬೆದಬೆದಬೆಂದು ಕುದಿದು ಕೋಟಲೆಗೊಂಡು
ಆಣೆ ಎಂಬಲಗು ನೇರಾಗಲಾತನ ಕಿವಿಗೆ
ಹೂಣೆ ಹೊಕ್ಕೆಲ್ಲವಂ ನೆರೆ ಘಾತಿಸಲ್ಕೆ ಮಿಗೆ
ಇಂದುಮುಖಿ ಇಟ್ಟಾಣೆ ತೀವಿತ್ತು ಕಿವಿಯೊಳಗೆ
ಆ ದಿನಂ ಅಂದಿಂದೆ ಕಿವಿ ಏನುವಂ ಕೇಳದಂತಾಗೆ
ಆಣೆ ಇಬ್ಬರ ದೇಹದೊಳು ಪೊಕ್ಕು ಬೆಳೆಬೆಳೆದು
ಹೂಣೆಯಾದುದು ಪರಮಶಿವನಾಜ್ಞೆಯಂ ತಳೆದು
ಆ ದಿನಂ ಮೊದಲಾಗಿ ತಮ್ಮೊಳೊಬ್ಬೊರ್ಬರೇ
ನಾದೊಡಂ ಸೋಂಕದೀ ಧರೆಗೆ ತಾವಿರ್ಬರೇ
ಈ ನುಡಿಯ ತಾವಿರ್ಬರರಿವರೀಶ್ವರನರಿವ
ಈ ನೆಲದೊಳಾರುವರಿಯರು ಭಕ್ತರಿಪ್ಪಿರವ

ಇಂತು ಶಿವನಾಜ್ಞೆಯಂ ಚಿತ್ತದೊಳು ತಳೆವುತಂ
ಸಂತತಂ ಭಕ್ತರ್ಗೆ ಬೇಡಿದುದ ನೀವುತಂ



ಶರಣರಂ ಕುಲದೈವವೆಂದು ಕೊಂಡಾಡುತಂ
ಶರಣರ್ಗೆ ವಂಚನೆಯದಿಲ್ಲೆನಿಸಿ ಮಾಡುತಂ
ಹರನ ಭಕ್ತರ್ತಮಗೆ ತಂದೆ ತಾಯ್ಗಳ್ನೋಡ
ಪರಮ ಭಕ್ತರ್ತಮಗೆ ಬಂಧು ಬಳಗಂ ನೋಡ
ಲಿಂಗವೆ ಪ್ರಾಣವಾಗಿರ್ಪುದಾಗಳು ತಮಗೆ
ಲಿಂಗ ಭಕ್ತಿಯೆ ಮೆರೆವ ಕಣ್ಣಾಗತಿಯೆ ತಮಗೆ
ಇಂತೆಸೆದು ಶಿವನ ಭಕ್ತಿಗೆ ತವರ್ಮನೆಯಾಗಿ
ಕಂತುಮದಹರನ ಆಜ್ಞೆಗೆ ತಾನೆ ನೆಲೆಯಾಗಿ
ಪ್ರಾಣದೊಳಗಡಗಿತ್ತು ಹರನಾಣೆಯದು ನೋಡೆ
ಆಣೆಯೊಳಗಡಗಿತ್ತು ಅವರಯೌವ್ವನ ನೋಡೆ
ಜಪವಾವುದವರಿರ್ಬರಿರವು ಸಾಲದೆ ಹೇಳ
ತಪವಾವುದವರಿರ್ಬರಿರವು ಸಾಲದೆ ಹೇಳ
ಅವರಿರವು ಸ್ವರ್ಗ ಗಿರ್ಗ ಪದವಿಗಳ ಹವಣೆ
ಅವರಿರವು ಮುಕುತಿ ಗಿಕುತಿಯ ಸುಖಂಗಳ ಹವಣೆ
ಎಂಬ ಕೀರ್ತಿಗೆ ತಾವು ಪಾತ್ರರಾಗುತ್ತಮಿರೆ
ನಂಬಿ ಪಲಕೆಲವು ವತ್ಸರ ವರ್ಜಿಸುತ್ತಮಿರೆ
ಆಣೆ ಪಕ್ವಕ್ಕೆ ಬಂದಂತೆ ಬಂದುದು ಮುಪ್ಪು
ಹೂಣೆಹೊಕ್ಕವಯವದೊಳೆಯ್ದೆ ತೀವಿರೆ ಮುಪ್ಪು
ಶಿವಭಕ್ತಿ ಸೋಪಾನದಂತೆ ತೆರೆಗಳು ಮುಸಗೆ
ಶಿವನಲ್ಲದಾರು ಇಲ್ಲೆಂಬಂತೆ ತಲೆ ನಡುಗೆ
ಭವಿಗಳಂ ನೋಡೆನೆಂಬಂತೆ ಕಣ್ಣೆವೆ ಮುಗಿಯೆ
ಅವಿರಳದಿ ನೆನೆವು ಶುಭ್ರತೆಯಂತೆ ನೆರೆ ಹೊಳೆಯೆ
ಹಲವು ಕರ್ಮಕ್ಕಡಿಯನಿಡದಂತೆ ನಡೆಯುಡುಗೆ
ಉಲಿವ ಮಾಯೆಯ ತೀರುವಂತೆ ಕೈಗಳು ನಡುಗೆ
ಜರೆಯಡಸಲಿಂತು ತೊಂಬತ್ತನೆಯ ವರ್ಷದೊಳು
ಹರನಾಜ್ಞೆಯಂ ತಾಳ್ದು ಬಾಳ್ದಿರ್ಪ ಸಮಯದೊಳು

ಶಿವನರಿದಿವರ ಮನವ ನೊರೆದು ನೋಡುವೆನೆಂದು
ಸವಣಿಸಿದನೊಂದು ವೇಷವ ಶರೀರದೊಳಂದು

ಹೂಸಿದ ವಿಭೂತಿ ಕಯ್ಯೊಳು ಪಾತ್ರೆ ಎಸೆವ ಜಡೆ
ದಾಸುರವ ಪುಲಿದೊವಲು ಲಾಕುಳಂ ಚೆಲ್ವ ನಡೆ
ಎಸೆವ ಭಿಕ್ಷುಕನ ವೇಷವನೊಪ್ಪೆ ಕೈಕೊಂಡು
ಹೆಸರ ಪೊನ್ನಾಂಬಲದ ಪುರದತ್ತ ನಡೆಗೊಂಡು
ಸತ್ಯ ಶರಣರ ಮನವ ನೋಡುವುತ್ಸವದಿಂದೆ
ನಿತ್ಯನುರವಣಿಸಿ ಬರುತಿರ್ದನುಂ ಮುಹದಿಂದೆ
ಹಾರಯಿಸುತುಂ ಹಿಗ್ಗುತುಂ ಹೊಂಗಿ ಹೊಗಳುತ್ತೆ
ತೀರಿತೆನ್ನಳವಲ್ಲ ಸಿಷ್ಟೆ ನಿಗೆ ಪಿರಿದೆನುತೆ
ನಡೆತಂದು ಪುರದೊಳಗೆ ಪೊಕ್ಕು ಕೇರಿಗಳಲ್ಲಿ
ಮೃಡನ ಭಕ್ತರ ಮನೆಗಳಂ ನೋಡುತಂ ತಾನಲ್ಲಿ
ಬಂದು ತಿರುನೀಲಕಂಠರ ಮನೆಯ ಮುಂದಿರಲು
ನಿಂದು ನಲವೇರುತಂ ದನಿದೋರುತಂ ನಿಲಲು
ತಿರುನೀಲಕಂಠ ಕುಶವರು ಹಿಗ್ಗಿ ಹೆಚ್ಚುತ್ತೆ
ಪರಮ ಹರುಷಂ ಮಿಕ್ಕು ಭಕ್ತನಂ ಕಾಣುತ್ತೆ
ಕಂಡೆಲ್ವ ಭರದಿಂದೆ ಮುನ್ನಂ ಪುಳಕವೆಳ್ದು
ದಂಡಪ್ರಣಾಮದಿಂ ಮುನ್ನಂ ಮನಂ ಬಿಳ್ದು
ಪಿಡಿದಪ್ಪಿ ಪದವಂ ಸುಖಾಶ್ರುವಿಂದಂ ತೊಳೆದು
ಕಡು ಲಲ್ಲೆಗರೆವುತಂ ಕಿಂಕರತೆಯಂ ತಳೆದು
ಸಿರಿ ಪರುಷ ಕಲ್ಪತರು ಸುರಧೇನುಗಳು ಬಂದ
ಹರುಷದಿಂನೂರ್ಮಡಿಯೆನಿಪ್ಪ ಸಂತಸದಿಂದ
ಎಲೆ ದೇವದೇವ ಬಿಜಯಂಗೆಯ್ದ ಕರುಣವಂ
ನಲಿದು ಬೆಸಸುವುದೊಲ್ದು ಮಾಳ್ಪೆನಾ ಕಜ್ಜಮಂ
ಎನೆ ದೇವಭಕ್ತರೆಂಬುಪರಾಪರಾರುಮಂ
ಮನದೊಳಗಪೇಕ್ಷೆಗಯ್ಯೆವು ಬೇಡವೇನುಮಂ
ಆಪೂರ್ಬರೊಡವೆಗಳಿಪುವರಲ್ಲ ಜಗವರಿಯೆ
ಆವಾರುಮಂ ನಿರೋಧಿಸುವರಲ್ಲಿಳೆಯರಿಯೆ
ಕೊಡಬೇಡ ನೀವೆಮಗದೇನುವಂ ಪಾತ್ರೆಯಂ
ಕೆಡದಂತೆ ಬಯ್ತಿಟ್ಟು ಕುಡುವುದೀ ಪಾತ್ರೆಯಂ
ಎಂದವರ ವಶದೊಳಿರಿಸುತ್ತೆ ಹತ್ತಡಿಯಿಟ್ಟು
ಬಂದು ಮತ್ತೊಂದು ಕುಹಕವನಾಗ ಮುಂತಿಟ್ಟು



ಈ ಪಾತ್ರೆ ಎಮ್ಮ ಭಕ್ತರು ಕೊಟ್ಟ ಪದವಿ ಇದು
ಕಾಪಾಲಿಯಾದೊಡಂ ಬಯಸುವ ಸುವಸ್ತುವಿದು
ಬೇಡಿದುದ ನೀವುದು ಮಹಾ ಸಿದ್ಧಿಯುಳ್ಳುದಿದು
ಬೇಡದಿರ್ದುದ ನೀವುದೆಂತು ವಿಚಿತ್ರವಿದು
ಇದ ನೀವೆ ಬಲ್ಲಂತೆ ಪರೀಕ್ಷಿಸುವುದೆನುತೆ
ಪದಪಿಂದೆ ಪೋದನರಿವರಿದು ಅರಿದೆಂದೆನುತೆ

ಇತ್ತ ತಿರುನೀಲಕಂಠರು ನಡನಡನೆ ನಡುಗಿ
ಇತ್ತ ಪಾತ್ರೆಯು ಹೊದ್ದಿ ರಕ್ಷೆಯಿಂದಂ ಮುಡಗಿ
ಪೆಟ್ಟಗೆಯೊಳಿಕ್ಕಿ ಮುದ್ರಿಸಿ ತಾವೆ ಕಾಹಾಗಿ
ನಟ್ಟ ನಡುವಿರಿಸಿಕೊಂಡಿಬ್ಬರುಂ ನೆನಹಾಗಿ
ಇರೆ ಮರುದಿವಸದುದಯದೊಳ್ಭಕ್ತನೆಯ್ತಂದು
ಉರವಣಿಸುತುಂ ಕುಡು ಕುಡೆನ್ನ ಪಾತ್ರೆಯನೆಂದು
ಜಡುವನ್ನೆಗಂ ತಡಂ ಎಲ್ಲಿ ಇರಿಸಿದಿರೆನುತೆ
ಕುಡದಿರ್ದಡಾಂ ಹೋಹೆನೆಂದು ಮುಂದಡಿಯಿಡುತೆ
ಅನುಮಿಸುತೆ ಭಕ್ತನುರವಣಿಸಿ ಪಿಡಿಮಿಡಿಗೊಳುತೆ
ಮನದೊಳಂಜುತ್ತ ತಡಬಡಗೊಂಬುತುಂ ಬಿಡದೆ
ಮುಚ್ಚಳಂ ತೆರದೇನುಮಿಲ್ಲದಿರೆ ಬೆರಗಾಗಿ
ಅಚ್ಚುಗಂಗೊಳುತೆ ಜೋಲುತ್ತ ಹಮ್ಮದಂಬೋಗಿ
ನಡುಗುತ್ತೆ ಬೆಮರ್ದು ಭೀತಿಯ ಪರಮ ಕಾಷ್ಠೆಯಿಂ
ನುಡಿಯಲರಿಯದೆ ಕರಗಿ ಕೊರಗಿ ಕಡು ಭೀತಿಯಿಂ
ನೆಲನಂ ಬಗಿದು ಪುಗಲು ಬಯಸುತುಂ ಬಾಡುತಂ
ತಲೆವಾಗಿ ಸಿಗ್ಗಾಗಿ ಮರುಳಾಗಿ ನೋಡುತಂ

ಇರೆ ಕಂಡೆನನುವಾಗಿರದು ನಿಂಮ ಪರಿ ಯೆನಗೆ
ನಿರಸವಾಗದೆ ಹೋಗದೆ ಪಾತ್ರೆಯು ಇನ್ನೆನಗೆ
ಗಂಟಲಂ ಕೊಯ್ದಿರೇ ತೋರಿರೇ ಪೆಟ್ಟಿಗೆಯ
ಉಂಟುಂಟು ಭಕ್ತರೆಂದಿರಿಸಿದೆ ನೀವೀ ಪರಿಯ
ಅಪ್ಪುದಂ ಬಪ್ಪುದಂ ಬಲ್ಲೆನೇ ಶಿವ ಎನುತೆ

ಒಬ್ಬರುಂ ಸಾಕ್ಷಿಯಿಲ್ಲೆಂತು ಮಾಡುವೆನೆನುತೆ
ಪೆಟ್ಟಿಗೆಯನೊಪ್ಪುವರ ಮೋರೆಗಳನೊಮ್ಮೊಮ್ಮೆ
ದಿಟ್ಟಿಸಿಯೆ ನೋಡುತಂ ಮರುಳಾಗುತೊಮ್ಮೊಮ್ಮೆ
ಲೇಸು ಲೇಸೆನುತೆ ಪೆಟ್ಟಿಗೆಯ ನೋಡುತಲಂದು
ಬಿಸುಟನಲ್ಲಿಂದೆ ಹೊರಯಿಂಕೆ ಕೋಪಿಸಿ ನಿಂದು
ಆಹಾಹಾ ಹಸನಾಯ್ತು ಕುಡಿರೇಕೆ ಪಾತ್ರೆಯಂ
ಓಹೋಹೋ ಇಂತು ಕೊಂಡವರುಂಟೆ ಪಾತ್ರೆಯಂ
ಏನೊ ಪೆಟ್ಟಿಗೆಯೆ ತಿಂದುದೊ ನೆಗಳ್ ನುಂಗಿತೋ
ಮೋನದಿಂದಿರ್ದೊಡಿದರೊಳು ಪಾತ್ರೆ ಇಂಗಿತೋ
ಇನ್ನಿನ್ನ ಮೇಲೆ ತಪ್ಪಿಲ್ಲ ತಪ್ಪಿಲ್ಲೆನುತೆ
ಗನ್ನದಿಂ ಬಂಗೋಪಮಂ ತಾಳ್ದು ಝುಂಕಿಸುತೆ
ಮುಂಜೂರು ಹುಲ್ಲನುಚ್ಚುತ್ತ ಶಿವಘೋಯೆನುತೆ
ಅಂಜಿಸುವ ದನಿಯಿಂದೆ ಒದರಿ ಶಿವಘೋಯೆನುತೆ
ನಿಂದ ಮಂದಿಗೆ ತೋರಿ ತೋರಿ ಯಾರಡಿಗೊಳುತೆ
ಬಂದರ್ಗೆ ದೂರಿ ನೆರೆ ಸಾರಿ ನೋಡಿರೆ ಯೆನುತೆ
ಕೋಪದಿಂದಾ ಇರ್ಬರಂ ನೋಡಿ ತಲೆದೂಗಿ
ಭಾಪು ಭಕ್ತರಿರ ಇಂತಿರವೇಳ್ಕು ಸಯ್ತಾಗಿ
ಸುಮ್ಮನಿರ್ದೊಡೆ ಪಾತ್ರೆಯಂ ಕೊಟ್ಟಿರಪ್ಪಿರೇ
ನಿಂಮಿರ್ಬರಂ ಕೊಂಡು ಮನೆಯೊಳಿಂತಿರ್ಪರೇ
ಇಲ್ಲಿಯೊರಲಿದೊಡೇನುವಾಗದಿಂತೆನಗೆಂದು
ತಿಲ್ಲಿಮೂವಾಯಿಲರು ಕಾಣಬೇಕಿದನೆಂದು
ನಡೆಯಿ ಪೊನ್ನಾಂಬಲದ ಹಿರಿಯರಿಹ ಮಂಟಪಕೆ
ನಡುವೆ ತಿದ್ದುವರಿಲ್ಲ ನಿಮ್ಮ ಹಿರಿಯತನಕೆ
ಒಡಿಯುಂಟೆನುತವರ ನೊಡಗೊಂಡು ಬರುತವಿರೆ

ಒಡನೆ ಗುಜುಗುಜುಗೊಳುತ್ತ ನೆರವಿ ಬರುತ್ತವಿರೆ
ತಿರುನೀಲಕಂಠ ಕುಶವರ್ತವಮ್ಮ ಸತಿವೆರಸಿ
ಬರುತಿರ್ದರಾ ಗುಪ್ತ ಮಾಹೇಶ್ವರನೊಗಸಿ
ಇಂತು ಮಾಡಿದನೆಮ್ಮುನಂ ಸದಾಶಿವ ಯೆನುತೆ



ಇಂತಾಯ್ತು ಇನಿತು ಕಾಲಕ್ಕೆ ಈ ತೆರನೆನುತೆ
ಮನದೊಳಗೆ ಚಿಂತಿಸುತೆ ಶಿವಭಕ್ತ ಮೌಳಿಗಳು
ನೆನೆನೆನೆದು ಅಳಲುತುಂ ಭಕ್ತಿಯಭಿಮಾನಿಗಳು
ಭಕ್ತನೊಡನೊಡನೆ ಕೊರಗುತ ನಡೆದು ಬರುತವಿರೆ
ಯುಕ್ತಿ ಹೊದ್ದದ ಶಿವಸ್ನೇಹಿಗಳು ಬರುತವಿರೆ
ಕೆಯ್ಯ ಹುಲ್ಲಂ ನೆಗಪಿ ದೆಸೆಗೆ ಶಿವಘೋ ಎನುತೆ
ಅಯ್ಯೋ ಇದಂ ವಿಚಾರಿಸುವರಿಲ್ಲಾ ಎನುತೆ
ಬಂದನುರವಣಿಸಿ ಪೊನ್ನಾಂಬಲದ ಮಂಟಪಕೆ
ಮುಂದೆ ಯೋಲಗವಿತ್ತು ಕುಳ್ಳಿರ್ದರಗಲಕ್ಕೆ
ಶಿವಭಕ್ತಿ ನಿಷ್ಠೆಯೊಳು ಬೇರ್ವರಿದವರ್ಕೆಲರು
ಶಿವನ ನೇಹಂ ಮನದೊಳಂಕುರಿಸಿದರ್ಕೆಲರು
ಹರಭಕ್ತಿ ಕರಣದೊಳ್ಪಲ್ಲೈಸಿದರ್ಕೆಲರು
ಹರಪೂಜೆ ಹಸ್ತದೊಳು ಹಬ್ಬಿ ಬೆಳೆದರ್ಕೆಲರು
ಶಿವಕೀರ್ತಿ ಕಿವಿಗೆ ಯಾಭರಣವಾದರ್ಕೆಲರು
ಶಿವಗೀತ ಜಿಹ್ವೆಯೊಳು ಪಟುವಾದವರ್ಕೆಲರು
ಶಿವಮೂರ್ತಿ ಕಂಗಳೊಳು ಬರದಂತೆ ಇಪ್ಪವರು
ಶಿವನ ತದ್ಧ್ಯಾನದೊಳು ಮೂರ್ಛೆಯಾದರ್ಕೆಲರು
ಶಿವಭಕ್ತಿ ಪಣ್ಗಳಂ ಸವಿವುತಿರ್ಪರ್ಕೆಲರು
ಶಿವಗೋಷ್ಠಿಯೊಳ್ನಲಿದು ಸುಖಿಸುತಿರ್ಪರ್ಕೆಲರು

ಇಂತೊಪ್ಪುತಲ್ಲಿ ಮೂವಾಯಿಲರ್ಕುಳ್ಳಿರಲು
ಸಂತತಂ ಮೆರೆವ ಪೇರಂಬಲದೊಳೊಪ್ಪಿರಲು
ಮುಂತೆ ಮಾಯಾವಿ ಗೊರವಂ ಬಾಯ ಮೊರೆವೆರಸಿ
ಪಿಂತೆ ತಿರುನೀಲಕಂಠರ್ತಮ್ಮ ಸತಿವೆರಸಿ
ಬರುತವಿರೆ ಕಂಡಿದೇನದ್ಭುತವೆನುತ್ತಲ್ಲಿ
ತಿರುನೀಲಕಂಠರೇಕಿಂತಿದೇಕೆನುತಲ್ಲಿ
ನೆರೆದ ಸಭೆ ಕೌತುಕಂ ಬಡುತುಮಿರೆ ತನ್ನೊಳಗೆ
ಉರವಣಿಸಿ ಠಕ್ಕ ಗೊರವಂ ಬಂದು ಸಭೆಯೊಳಗೆ
ನಿಂದಿರಲು ತಿರುನೀಲಕಂಠ ಕುಶವರ್ಬಂದು

ಮುಂದೆ ಮೆಯ್ಯಿಕ್ಕಿ ಮಿಗೆ ದಡವಡಿಸುತುಂ ನಿಂದು
ಬಂದಿರ್ದ ಭಕ್ತರೆಲ್ಲರ್ಗೆ ಕೈಮುಗಿವುತುಂ
ನಿಂದಿರ್ದ ಶಿವನ ಶರಣರ್ಗೆ ಪಲ್ಗಿರಿವುತುಂ
ಕೋಡುತುಂ ಕೊಂಕುತುಂ ಕುಗ್ಗಿ ಕಿಂಕರತೆಯಿಂ
ಬಾಡುತುಂ ಬಳ್ಕುತುಂ ಹೆರಿಮೆಟ್ಟಿ ಭೀತಿಯಿಂ
ಕೆಲಸಾರ್ದು ಮಂಟಪದ ಗೊಂಟಿನೊಳ್ಕುಳ್ಳಿರ್ದು
ತಲೆಗೆರೆದು ತಳ್ಗಿ ಉಡುಗುತ್ತ ಕೈಮುಗಿದಿರ್ದು
ಇರಲಿರ್ದೇನೆಂದು ಸಭೆಯೊರೆದೊರೆದು ಕೇಳುತಿರೆ

ತಿರುನೀಲಕಂಠ ಕುಶವಕೊರ್ರಗಿ ಸುಮ್ಮನಿರೆ
ಅವರನೇನೆಂದು ಕೇಳ್ದಪಿರಾನೆ ಪೇಳ್ದಪೆಂ
ಅವರ ಪರಿ ಯೆಲ್ಲವಂ ತಿಳಿಯಲಾನುಸುರ್ದಪೆಂ
ಎಮ್ಮ ಭಕ್ತರ್ಕೊಟ್ಟ ಪಾತ್ರೆಯುಂ ಪಿಡಿತಂದು
ತಮ್ಮ ವಶದೊಳ್ಕೊಟ್ಟು ಬೈತಿಟ್ಟು ಕೊಡಿ ಯೆಂದು
ಇರಿಸಲ್ಕದಂ ಕೊಂಡು ಮೋನದಿಂದಿರ್ದಪರು
(ಪಿರಿಯರೀ ಪಾತ್ರೆಯಂ ನುಂಗಿಕೊಂಡಿರ್ದಪರು
ಈ ಪರಿಯೆ ಹೊಸತು ನಿಸ್ಸೀಮರಂ ನೋಡಿರೆ
ಭಾಪುರೇ ಸಾಧುಗಳಿರಾ ಪಾತ್ರೆಯ ನೀಯಿರೆ
ಇಲ್ಲಿ ಪುರದೊಳಗಿವರು ಪಿರಿಯರೇನಲ್ಲರೇ
ಅಲ್ಲದಿರೆ ಎಮ್ಮ ಪಾತ್ರೆಯ ಕೊಳಲ್ಬಲ್ಲರೇ
ಉಂಟುಂಟೆ ವರ ಭಕ್ತರಿವರೆ ಪಿರಿಯರ್ಧರೆಗೆ
ಉಂಟುಂಟಿವರು ಮಾನ್ಯರಾಗಿಹರು ನಿಮ್ಮೊಳಗೆ

ಎನೆ ಕೇಳ್ದ ಸಭೆ ಠಕ್ಕು ಕವಿದಂತೆ ನೋಡುತಿರೆ
ತನ ತನಗೆ ಬೆರಗಾಗಿ ಮರವಟ್ಟು ಕೇಳುತಿರೆ
ನೆನೆದು ತಿರುನೀಲಕಂಠರ್ಮಮ್ಮಲಂ ಮರುಗಿ
ಮನದೊಳಗೆ ಸಾವುತುಂ ಹುಟ್ಟುತುಂ ಮಿಗೆ ಮರುಗಿ
ಇಂತಪ್ಪ ಸಭೆಗೆ ಕೊರಲುಬ್ಬಸವಿಪನೋರ್ಡೆ
ಇಂತಪ್ಪುದಿಂದೆಮ್ಮ ಕೆಟ್ಟ ಕೇಡಂ ನೋಡೆ



ಎಂದು ಚಿಂತಿಸುತಿರಲ್ಸಭೆ ನೀಲಕಂಠರಂ
ಬಂದು ಬೆಸಗೊಳುತಿರ್ದರಾ ಗಂಡಹೆಂಡಿರಂ
ಇರ್ದಿರ್ದಿತೆಂತು ಸಿಲ್ಕಿದಿರೆಲೆ ಮರುಳ್ಗಳಿರ
ಇರ್ದ ಪರಿಯಂ ಪೇಳಿರೆಮಗೆಲೆ ಮರುಳ್ಗಳಿರ
ಇವರೇಕೆ ನೀವೇಕೆ ಪಾತ್ರೆಯೇಕಿಂತಕಟ
ಇವರ ಕೊಡಕಿಂದೆ ಲಘುವಾಗಲೇಕಕಟಕಟ

ಎಂದು ಕೇಳಲ್ಕವರ್ಕಣ್ಣನೀರಂ ತೀವಿ
ಇಂದಿಂತುಟಪ್ಪುದಿದು ತಪ್ಪದೆಮಗಿದು ಬಾವಿ
(ಇರಿಸಿತುಂಟಾ ಪಾತ್ರೆ ಕೆಟ್ಟುದುಂಟದು ದಿಟಂ
ಪರಿಹರಿಸಿಕೊಳ್ವೆವಾವೆಂಬುದೆಮಗಟಮಟಂ
ಇದಕಿನ್ನವರ ಕರುಣವೇ ಹರಣವಿನ್ನೆಮಗೆ
ಇದಕಿನ್ನು ನುಡಿಯಿಲ್ಲ ಮೋನವೇ ಶರಣೆಮಗೆ
ಧರೆಯರಿಯೆ ಪುಸಿವರಾವಲ್ಲವರ್ಗೆ ಪುಸಿ ಇಲ್ಲ
ಪಿರಿದು ಮಾತೇಕೆ ಸಿಲ್ಕಿದೆವೆಮಗೊಡೆಯರಿಲ್ಲ)
ಅವರೇನುವುಂ ಮಾಡಲದಕಾವೆ ಭಾಜನಂ
ಅವರಂ ನಿರೋಧಿಪ್ಪುದಿನ್ನೇಂ ಪ್ರಯೋಜನಂ
ಮಾರುವೋದೆವು ಪಾತ್ರೆಗಾವಿರ್ಬ್ಬರುಂ ನೋಡ
ಬೇರೆ ಗತಿ ಇಲ್ಲ ನಿಮಗೆಮ್ಮ ಹಂಬಲು ಬೇಡ
ನೀವೆಲ್ಲ ಮನೆಗೆ ಬಿಜಯಂಗೈವುದೆಂದೆನಲು
ನಾವವರ್ಮಾಡಿದಂತಾದಪ್ಪೆವೆಂದೆನಲು

ಅಂತದಂ ಕೇಳ್ದು ಸಭೆ ಮರುಗಿ ಮುಮ್ಮಳಿಗೊಂಡು
ಒಂದೊಂದನಾಳೋಚಿಸಿದರಚ್ಚುಗಂಗೊಂಡು
ಮೆಯ್ಯಲೊಂದೊಂದು ಹೊನ್ನಂ ಬಿಟ್ಟು ಪಾತ್ರೆಯಂ
ಅಯ್ಯಂಗೆ ಕೊಡುವುದೊಲವಿಂ ಹೊನ್ನ ಪಾತ್ರೆಯಂ
ಎಂದು ತಮ್ಮೊಳ್ವಿಚಾರಿಸುತೆಲ್ಲರುಂ ಬಂದು
ಎಂದರಾ ಕ್ರೂರ ಭಕ್ತಂಗೆ ಮನವಂ ತಂದು
ಸಭೆಗುರುಗಳಂ ಕರೆದು ಪೇಳ್ವೆವೊಂದಂ ನಿಮಗೆ
ಅಭಯಮುಂ ಕರುಣಿಪುದು ದಯೆಯಿಂದ ನೀವೆಮಗೆ

ಮುಚ್ಚಾಸಿರವದೊಂದು ಹೊಸ ಹೊನ್ನ ಪಾತ್ರೆಯುಂ
ಇಚ್ಚೆಯುಂಬಟ್ಟು ಕೈಕೊಂಬುದೀ ಪಾತ್ರೆಯುಂ

ಎನೆ ಧಿಗಿಲ್ಭುಗಿಲೆಂದು ಮಾಮುಸಕವುಂ ಮುಸಗಿ
ತೊನೆದು ಬಸುರಂ ಹೊಸೆದು ಹಾಯ್ದು ನೆಲನಂ ತಿರುಗಿ
ಅಕ್ಕಟಾ ಪುಣ್ಯ ಪಾಪದ ಹೊಲಬನರಿಯಿರೆ
ಚಿಕ್ಕನಂತರವರಿಯದೀ ನುಡಿಯ ನಂಬಿರೇ
ಒಡಲಪ್ಪುದುಸುರಪ್ಪುದಾಯುವಪ್ಪುದು ಪಾತ್ರೆ
ತೊಡವಪ್ಪುದೆಮಗೆ ತವನಿಧಿಯುಪ್ಪುದಾ ಪಾತ್ರೆ
ನೆನೆದುದಪ್ಪುದು ನುಡಿದುದಂ ಕೊಡುವುದಾ ಪಾತ್ರೆ
ನೆನೆಯದಿರ್ದುದನೀವುದೆನಗೆಲ್ಲವಂ ಪಾತ್ರೆ
ಅದಕೆ ಹೊನ್ನುಂ ಗಿನ್ನುಂ ಸರಿಯೇ ಇದೇ ಮಾತು
ಅದಕೆ ಪರುಸಂ ಗಿರುಸಂ ಓಹೊ ಬೇಡಾ ಮಾತು
ಅದಕೆ ಚಿಂತಾಮಣಿಯುಂ ಸರಿಯೆ ದಲ್ಮೇಣ್ಮಾತು
ಅದಕೆ ಮೇರುವು ಸರಿಯೆ ಶಿವಶಿವೇಕಾ ಮಾತು
ಏನೆಂಬೆ ನಿವರೆನ್ನ ನರಿಯದಂತಿರ್ಪುದಂ
ಮೋನದಿಂದೆನ್ನ ಪಾತ್ರೆಯನರಿದು ಕಳೆವುದಂ
ದಿಟ ಭಕ್ತರಂತೆ ಸುಮ್ಮನೆಯೆ ಕುಳ್ಳಿತಿರ್ಪರು
ಆಟಮಟವನೆನ್ನ ಮೇಲಿಟ್ಟುಸುರದಿರ್ದಪರು
ಪಾಪಕರ್ಮರು ನುಡಿಯಿರೇ ನುಡಿಯಿರೇ ಎನುತೆ

ಕೋಪದಿಂ ಕೊನೆ ಮೀಸೆ ಕೆತ್ತೆ ಮುಳಿದೇಳುತ್ತೆ
ಹರಿದು ಬಂದೊಡೆಯಲವ್ವಳಿಸಿ ಹೆರೆ ಸಾರುತಂ
ತರಹರಿಸಿ ನಿಂದಿರದೆ ಬೀಳ್ದು ಮತ್ತೇಳುತಂ
ಒಡೆವಂತೆ ಮುಟ್ಟೆ ಪುಳುಕಿಸುತಿಪ್ಪ ನಡಿಗಡಿಗೆ
ಹೊಡೆವಂತೆ ಸೊಂಕಿ ಹಿಗ್ಗುತ್ತಿಪ್ಪನಡಿಗಡಿಗೆ
ಕಟ್ಟೆಯಿಂದಿಳಿದೇರಿ ಕಯ್ಯೆತ್ತಿ ಶಾಪಿಸುತೆ
ಕೆಟ್ಟೆನಿವರಿಂದೆನುತೆ ಕೈ ನೀಡಿ ಕೋಪಿಸುತೆ
ಕೊಲ್ವಂತೆ ಘೂರ್ಮಿಸುತೆ ಕೆಕ್ಕಳಿಸಿ ನೋಡುತ್ತೆ
ಗೆಲ್ವಂದವಿಲ್ಲಿವರನೆಂಬಂತೆ ನೋಡುತ್ತೆ



ಹಳವಳಿಸಿ ಹಲುಬುತಾ ಪಾತ್ರೆಯಂ ಕರೆವುತಂ
ಕಳವಳಿಸಿ ಪಾತ್ರೆ ಪಾತ್ರೇ ಎಂದು ಕೂಗುತಂ

ಇರೆ ಕಂಡು ಸಭೆ ನಡುಗಿ ಅರಿದರಿದು ತಿದ್ದುವೊಡೆ
ಪರಿ ಬೇರೆ ನಮ್ಮ ವಶವಲ್ಲವಿದ ತಿದ್ದುವೊಡೆ
ಗುರುಗಳಲಿ ತಪ್ಪಿಲ್ಲ ಕೊಂಬರ್ಗಳಿವರಲ್ಲ
ಇರಿಸೆ ಕೆಟ್ಟುದು ಪಾತ್ರೆ ಇದು ತಿಳಿವರಳವಲ್ಲ
ದೇವರೇ ಬಲ್ಲರಿದನಾವರಿಯೆವಘಟಿತಂ
ಆವರ್ಥದಿಂ ತಿಳಿಯಬಾರದತ್ಯೂರ್ಜಿತಂ
ಎಂದು ನುಡಿಯಲ್ಬೇಸರಿಸಲಾಗದಿನ್ನೆಂದು

ನಿಂದ ಗುರುಗಳ್ಮನದೊಳೊಂದು ತೆರನಂ ನೆನೆದು
ಬಯ್ದೊಡಂ ಬಡಿದೊಡಂ ಹೇಳದಚಲಿಗಳಿವರು
ಕೊಯ್ದೊಡಂ ಕೊರೆದೊಡಂ ಕೊಂಡೆವೆನ್ನದರಿವರು
ಇನ್ನೇನೆನಲ್ಬರ್ಪುದಿವರೊಡನೆ ಪೇಳಿರೇ
ಇನ್ನಿದೊಂದಂ ಮಾಡಲಾರ್ಪರೇ ಹೇಳಿರೇ
ಆನೆ ಸೋಲ್ದಪೆನಿವರೆ ಗೆಲುಗೆ ಎನಗುತ್ತರಂ
ಆನೆ ಅಂಜುವೆನಿವರೊಳೇಕೆನಗೆ ಮಚ್ಚರಂ
ದೈವವರಿದಪುದು ವರಿದಪುದು ತಮ್ಮರಸಿಯರ
ಕೈವಿಡಿದು ಕೊಂಡದೊಳ್ಮುಳುಗಿ ಈ ನೆರೆದವರ
ಮುಂತೆ ಸೂರುಳಿ ತಡೆದು ಸಾಲ್ಗೆಂದು ನುಡಿವುತಿರೆ
ಸಂತಸದಿ ಸಭೆ ಹೆಚ್ಚಿ ಲೇಸಾಯ್ತೆನುತಮಿರೆ

ಕೇಳ್ದು ತಿರುನೀಲಕಂಠರ್ತಮ್ಮನಲಗಿನಿಂ
ಸೀಳ್ದ ತೆರನಾಗೆ ಸುಕ್ರನೆ ಸುಯ್ದು ಸಿಗ್ಗಿನಿಂ
ಕೆಯ್ಯ ಪಿಡಿಯಲ್ಪೇಳ್ದನೆಂತು ಮಾಡುವೆನಿದಂ
ಅಯ್ಯ ಭಕ್ತಂ ನೋಡ ಬಯಲಿಗಿಕ್ಕಿದನಿದಂ
ಎಂತುಸುರಿದಪೆನಿನ್ನೆಂತು ಪೇಳ್ದಪೆನಿದಂ
ಎಂತು ಮಾಡುವೆನೆಂತು ಬಯ್ತಿಡುವೆನಿಂತಿದಂ
ಪಿಡಿಯಬಾರದು ಪಿಡಿಯದುದ ಪೇಳ್ದೊಡದು ಡಂಬು

ನಡೆತಂದು ಮಂಟಪದ ನಡುವಿರ್ಪುದಿದು ಡಂಬು
ಇರಲಿರಲಿದೇನಾಯ್ತುದೇನನೆಂದಪೆನೆಂದು
ಹರ ಭಕ್ತನೆನಗೆ ಗಸಣೆಯನೆ ಮಾಡಿದನೆಂದು
ಕಳ್ಳನಿವನೆಂದನಲಿ ಕಡು ಪಾಪಿ ಎಂದೆನಲಿ
ಬಳ್ಳಿಹುಸಿಕಂ ಬರಿಯ ಕೋಪಿ ಇವನೆಂದೆನಲಿ
ಶಿವಭಕ್ತಿ ಡಂಭನೆಂದೆನಿಸಲಾರೆಂ ಶಿವನೆ
ಭವನೆ ನಿನ್ನಾಣೆಯ ಹೇಳಲಾರ್ಪೆನೆ ಹರನೆ
ತೋರುವೆನೆ ಮೀರುವೆನೆ ಎನ್ನ ಶಿವನಾಜ್ಞೆಯಂ
ಬೀರುವೆನೆ ಸಾರುವೆನೆ ಎನ್ನೊಡೆಯನಾಣೆಯಂ
ಇದರಿಂದ ನೊಂದಡೇಂ ಇದರಿಂದ ಬೆಂದಡೇಂ
ಇದರಿಂದಲಳಿದಡೇಂ ಇದರಿಂದ ಸತ್ತಡೇಂ
ಇನ್ನೇವೆ ನಿನ್ನೇವೆ ನಯ್ಯೋ ಮಹಾ ದೇವ
ಇನ್ನೇನನೆಂದಪೆಂ ಕರುಣಿಸು ಮಹಾದೇವ
ಇದ್ದಿರ್ದದೃಶ್ಯವಾಗೆನೆ ಭಸ್ಮನಾಗೆನೇ
ಇರ್ದನೆಲನೊಳಕೊಳ್ಳದೇ ಜೀರ್ಣವಾಗೆನೇ
ಏಕೆ ಶಿವನಿನಿತು ದಿನವಿರಿಸಿದಂ ತಾನೆನ್ನ
ಏಕೆ ತೋರಿಸಿದನೀ ಭಕ್ತಂಗೆ ಹರನೆನ್ನ
ಎಂದು ತಿರುನೀಲಕಂಠನೊರ್ವುತೊಳಗೋಗೆ
ಬೆಂದ ನುಲಿಯಂತೆ ಬರಿಯಾಕಾರದಂತಾಗೆ

ಆದನರಿಯದಾಗಳಾ ಸಭೆ ಸಂತಸಂಬಟ್ಟು
ಮುದದಿಂದ ತೀರಿತಿಂದೆ ಬಗೆದು ಮೆಯ್ವಿಟ್ಟು
ಕರೆದು ತಿರುನೀಲಕಂಠರ್ಗೆ 'ನಿಮ್ಮರಸಿಯರ
ಕರವಂ ಪಿಡಿದು ಕೊಂಡದೊಳಗೆ ಮುಳುಗಲ್ಕಿವರ
ತೊಡಕು ತೀರ್ದಪುದೇಳಿ ಏಳಿ ಎಂದೆನಲಂದು

ಪಿಡಿವೆತ್ತ ತೆರದಿ ತಿರುನೀಲಕಂಠನೊರ್ಂದು
ಪೇಳಬಾರದು ಪೇಳದಿರಬಾರದೆಂದೆನುತೆ
ಆಳಿಗೊಳಲಾಯಿತೆನ್ನ ಭಕ್ತಿ ಧಾರುಣಿಗೆನುತೆ
ಹರಲೆಯೊಳ್ತಂದಿಕ್ಕಿತೆನ್ನ ಡಂಭಿನ ಭಕ್ತಿ



ಮೊರೆಯಿಡಿಸಿತಿಂತಿವರರನೆನ್ನ ಟೊಳ್ಳಿನ ಭಕ್ತಿ
ರಚ್ಚೆಗಂ ಬೀದಿಗಂ ಬರಿಸಿತೆನ್ನಯ ಭಕ್ತಿ
ಅಚ್ಚುಗಂಗೊಳಿಸಿ ತಳವಳಿಸಿತೆನ್ನಯ ಭಕ್ತಿ
ಎಂದು ಚಿಂತಿಸುತೆ ಮನದೊಳಗೆ ಜಗ್ಗನೆ ಜರಿದು
ನೊಂದು ಬೆದಬೆದ ಬೆಂದು ಕಂದಿ ಮಿಗೆ ಮೆಯ್ಗರೆದು
ನುಡಿವಕ್ಕರಂಗಳೊಳಗುಸುರಳಿದ ಮಾಳ್ಕೆಯಿಂ
ನುಡಿದನೆಂತಕ್ಕೆ ದಂಡಿಸಲುಸುರ್ವ ಮಾಳ್ಕೆಯಿಂ
ಪಿಡಿಯೆನೆನ್ನಾ ಸತಿಯ ಕಯ್ಯನೇನಾದೊಡಂ
ಪಿಡಿಯೆನೀ ಧರೆ ಮೇಲೆ ಕೆಡೆದೊಡಂ ಸತ್ತೊಡಂ
ಪಿಡಿಯೆಂ ಪಿಡಿಯನೆಂಬ ನುಡಿಗೇಳ್ದು ದೇವಸಭೆ
ಪ್ರೊಡವಿಗಿದು ಪೊಸತು ಪೊಸತೆನುತಲಾ ಶರಣಸಭೆ
ನೋಡುತಿರಲೆಳ್ದು ಗುರುಗಳ್ನಗುತೆ ತಲೆದೂಗಿ
ಆಡತೊಡಗಿದನಟ್ಟಹಾಸದಿಂದಂ ಮುಸಗಿ
ಬಂದುದೆನ್ನಯ ಪಾತ್ರೆ ಚಿಂತೆ ಏಕಿನ್ನೆನಗೆ
ಒಂದುವಂ ಪೇಳದಿರಿ ಸಭೆಗಳಿರೆ ನೀವೆಮಗೆ
ಕಯ್ಯ ಪಿಡಿಯರವರು ಪಾತ್ರೆಯಂ ಕೊಟ್ಟಪರು
ಅಯ್ಯಯ್ಯ ಗಹಗಹಿಸುತಾವ ನೆಂದಿರ್ದಪರು

ಎಂದೆನುತ್ತವರ ಹತ್ತಿರೆ ಪೋಗಿ ನಡೆ ನೋಡಿ
ಮುಂದೆ ಕುಣಿವುತ ಬಾಯ್ಗೆ ಬಂದ ಕಟಕಿಯನಾಡಿ
ಏನೇನದೆಂತೆಂತು ಕಯ್ಗಳಂ ಪಿಡಿಯರೇ
ಏನು ನೀವಿರ್ದು ನೆಲದೊಳು ಇಂತು ನುಡಿವರೇ
ಪಿಡಿಯರೇ ಕಯ್ಯನಕ್ಕಕ್ಕಬ್ಬಟೆಯ ಭಕ್ತಿ
ಪಿಡಿಯರೇ ಇನಿತು ಕಾಲದೊಳಂತಿದತ್ಯಕ್ತಿ
ಇವರೆ ಕೊಂಡವರು ಸಂದೆಗ ಬೇಡ ಪಾತ್ರೆಯಂ
ಇವರ ಕಯ್ಯೊಳಗರಸಿಕೊಂಬೆನಾ ಪಾತ್ರೆಯಂ
ಹರೆಯವಿದು ನುಡಿವುದಿದು ಕೇಳ್ದಿರೆ ಕೇಳ್ದಿರೆ
ಇರಲಿದಾಡುವ ಮಾತು ಅರಿವಿರೇ ಅರಿದಿರೇ
ಕಯ್ಯಂ ಪಿಡಿಯೆನೆಂಬ ನುಡಿಯಂತೆ ಪಾತ್ರೆಯಂ
ಅಯ್ಯಯ್ಯೋ ಕೊಳ್ಳೆನೆಂಬೀ ನುಡಿ ಧರಿತ್ರೆಯಂ

ಠಕ್ಕಿಕ್ಕದೇ ಇವರ ನುಡಿ ಸತ್ಯದಂದದಿಂ
ಮಿಕ್ಕವರ್ಮರುಳಾಗರೆ ಇವರ ವೇಷದಿಂ
ಆನೊರ್ಬನರಿದೆನಿವರಿಂತಿಂತು ಮಾಳ್ಪುದಂ
ಆನಲ್ಲದಾರ್ಬಲ್ಲರೆ ಇವರ್ಗಳಿಪ್ಪುದಂ
ಕವಿಲೆಯಾಕಾರದ ಹುಲಿಯ ಚರಿತವಯ್ಯಯ್ಯ
ಭುವನಕ್ಕೆ ಪೊಸತು ನಿಮ್ಮಿರ್ಬರಿರವಯ್ಯಯ್ಯ
ಇಂತಿರ್ದೊಡಂ ಪಾತ್ರೆ ಬಿಡುವೆನೇ ಕಪಟರಿರ
ಎಂತುವುಂ ಗಂಟಲಿಂದಿಳಿವುದೇ ಭಕ್ತರಿರ
ಸತ್ಯಶರಣರ್ನೀವದುಂಟುಂಟು ತಪ್ಪುವುದೆ
ಅತ್ಯಾಸೆ ಮತ್ತೆ ಕೆಲಬರ್ಗಿಂತು ಒಪ್ಪುವುದೆ

ಎನುತವಾಕ್ಷೇಪಿಸುತಲೆದ್ದು ನಿಂದಿರ್ದ ಮಿಂಗೆ
ಕೊನೆ ಮೀಸೆ ಕೆತ್ತೆ ಕಣ್ಣೆಂಪೇರೆ ಕೈ ನಡುಗೆ
ಕೈ ನೋಯುಬಡಿದು ಮುಟ್ಟುತ ಹಿಗ್ಗಿ ಹೆಚ್ಚುತಂ
ಮೈ ನೋಯಲೊದೆದು ಸೊಂಕುತ ಹೊಂಗಿ ಹೊಗಳುತಂ
ಇರ್ಪ ಭಕ್ತನ ಕೋಪದತ್ಯುಗ್ರಮಂ ಕಂಡು
ಕೂರ್ಪಡಗದಿಂದುಧರನಾಜ್ಞೆಯಂ ಕೈಕೊಂಡು
ಏನೆಂದೊಡಂ ಹಸಾದಂ ದೇವ ಎನುತಿರ್ಪ
ಏನೆಂದೊಡಂ ದೇವ ಕರುಣಿಸೆಂದೆನುತಿರ್ಪ
ಒದೆಯಲೆಂದವ್ವಳಿಸೆ ಮೆಯ್ಯನಿದಿರೊಡ್ಡುವಂ
ಪದೆದು ಬಯ್ದಡೆ ನಲಿನಲಿದು ಕಿವಿಯಾನುವಂ
ನಿಂದಿಸಿದೊಡದುವೆ ತೊಡವೆಂದು ಮೈವೆಚ್ಚುವಂ
ಬಂದು ಬಡಿಯಲ್ಪುಳಕ ವೃಂದಮಂ ಧರಿಯಿಪಂ
ಪರಿಭವಂ ಬರಿಸಿದೊಡೆ ಹರನೊಲವಿದೆಂದೆಂಬ
ಉರವಣಿಸಿ ನುಡಿದೊಡದು ಪರಮ ಸುಖವೆಂದೆಂಬ
ಇಂತು ಭಕ್ತರ ದೇವನಾನಂದ ಲೀಲೆಗಂ
ಸಂತತಂ ಸಭೆಯರಿಯಲೀಶ್ವರನ ಮಾಯೆಗಂ
ಬೇಸತ್ತು ನಮಗಿದರಿದರಿದು ಸಮ್ಮಳವಲ್ಲ
ಆಸುರದ ತೊಡಕಿದಂ ಬಿಡಿಸಬಲ್ಲವರಿಲ್ಲ
ಎನುತೇಳಲುದ್ಯುಕ್ತರಾಗೆ ಶಂಕರನರಿದು



ಎನಗಿವರಗೆಲುವುದಾವಂದದಿಂದಲು ಅರಿದು
ಸೋಲ್ವುದಿನ್ನವರಂ ನಿರೋಧಿಸಲು ಸಾಕೆಂದು
ಸೋಲ್ಪರಲ್ಲಿಂತಿವರ್ನಿಷ್ಠೆಯುಳ್ಳವರೆಂದು
ಒಂದೊಂದು ಮಾತನೆಂದಂ ಸದಾಶಿವನಂದು
ಹಿಂದಣ ನುಡಿಗಳೇಕೆ ನಿಮ್ಮ ಮುಂದೊಲಿದಂದು
ಕಯ್ಯಂ ಪಿಡಿಯೆನೆಂಬ ಶುಚಿತನವದಂತಿರ್ಕೆ
ಮೆಯ್ಯ ಸೋಂಕೆನುಮೆಂಬ ಪೆರ್ಬಸಿಯದಂತಿರ್ಕೆ
ಈ ಲಾತಕೋಲಿನೆರಡುಂ ದೆಸೆಯೊಳಿರ್ಬರುಂ
ಕೋಲತುದಿಯಂ ಪಿಡಿದು ಕೂಡೆ ನೀವೆಲ್ಲರುಂ
ಕೊಂಡದೊಳ್ನಲವಿನಿಂ ಮುಳುಗಿ ಸೂರುಳಲೆಂದು
ಕೊಂಡಾಡಲೇಕೆ ಇನ್ನಿವರನಾಗಳು ಎಂದು

ಕೇಳ್ದು ತಡೆವಿಟ್ಟ ತೆರದಿಂದೆ ಮೈಯ್ವೆರ್ಚುತುಂ
ತಾಳ್ದು ಪರಮಾನಂದದಿಂದೆ ಮೆಯ್ವೆರ್ಚುತುಂ
ದಡದಡಿಸುತೇಳ್ದು ತಿರುನೀಲಕಂಠರ್ಬಂದು
ನುಡಿದರಿಂತಿದನೊಡಂಬಟ್ಟೆ ನಾವಿದನೆಂದು
ಸಂತಸಂ ಕಯ್ಮಿಕ್ಕು ಗಂಡಹೆಂಡಿರ್ನಲಿದು
ಕಂತುಹರ ಶರಣೆನುತೆ ಕೋಲತುದಿಯಂ ಪಿಡಿದು
ಇರಿಸಿದರಿವರ್ಪಾತ್ರೆಯಂ ಕೊಳ್ಳಿವಾವುದಂ
ಹರ ನೀನೆ ಬಲ್ಲೆ ತಾನೇನಾದುದೆಂಬುದಂ
ಎನುತಿರ್ಬರುಂ ನಡೆದು ಬಂದು ಕೊಂಡದ ಕಡೆಗೆ
ನೆನೆಹವೆರಡಿಲ್ಲದೆ ಮನದೊಳಿರಗೆ ಹರನಡಿಗೆ
ಜನಿಯಿಸಿದ ಜನನಮಂ ಜಲವಂ ಕಲಸುವಂತೆ
ತನುವಿಡಿದ ಜರೆಯನೋವದೆ ತೊಳೆದು ಕಳೆವಂತೆ
ಕೊಂಡದೊಳ್ಫಳಿಲನೆ ಮುಳುಂಗಿ ನಿಂದಿರ್ದಮಿರೆ

ಕಂಡು ಸಭೆ ಕೌತುಕಂಗೊಂಡು ನೋಡುತ್ತಮಿರೆ
ಮುನ್ನಿನಂದದೊಳೆ ಹದಿನಾರರ ಹರೆಯಮಾಗೆ
ಮುನ್ನಿಂದ ನೂರ್ಮಡಿ ವಿಳಾಸಮುನ್ನತಮಾಗೆ
ಇತ್ತ ಜಗಳದ ಗುರುಗಳಂದು ಮಂಟಪದೊಳಗೆ

ಹೊತ್ತಿರ್ದ ವೇಷಮಂ ನಿಳುಪಿ ನಿಜದೋಳ್ತೊಳಗೆ
ಜಡೆ ಚಂದ್ರಕಳೆ ನೊಸಲ ಕಣ್ನಾಗ ಕುಂಡಲಂ
ತೊಡಿಗೆಯುಹಿ ಕರೆಗೊರಲು ಮಿಸುಪ ಮುಖಮಂಡಲಂ
ಕರಮೊಪ್ಪೆ ರವಿಕೋಟಿ ತೇಜಮಂ ಮುಸುಳಿಸುತೆ
ಇರೆ ಕಂಡು ತಿರುನೀಲಕಂಠರುಬ್ಬರಿಸುತ್ತೆ
ಪರಿತಂದು ಚರಣತಳದಲ್ಲಿ ದೊಪ್ಪನೆ ಕೆಡೆದು
ಹರನ ಚರಣಂಗಳಂ ಬಿಗಿದಪ್ಪುತಂ ಪಿಡಿದು
ದೇವ ನಿನ್ನಂ ಮರಸಿ ಎನ್ನನಿಂತಿರಿವರೇ
ದೇವ ಈ ಒಡಲೊಳಿರ್ದೆನ್ನ ಮಾನವರಿವರೇ
ಆನೊರ್ಬನೆಂದು ಗಹನಂ ಮಾಡಿ ಬರ್ಪುದೇ
ಆನಾವನೆಂದು ನೀನಿಂತೈದಿ ಬರ್ಪುದೇ
ಈ ಸೌಕುಮಾರ್ಯವಂಗರುಚಿಯಂ ಬಿಟ್ಟು
ಆಸುರದ ನಿಷ್ಠುರದ ಚೋಹಮಂ ಮುಂತಿಟ್ಟು
ಇನಿತು ಬೇಗಂ ನುಡಿದು ಒಡಿದು ನೊಂದೈ ತಂದೆ
ಇನಿತು ಬೇಗಂ ಮುಟ್ಟಿ ಮುಟ್ಟಿ ನೊಂದೈ ತಂದೆ
ಎಂದಿರ್ಬರುಂ ನೊಂದು ಮರುಗಿ ಮೊರೆಯಿಡುತಿರಲು

ಬಂದು ದೇವಗಣಂಗಳಂ ಭರದೊಳೀಕ್ಷಿಸಲು
ನೆರೆದವು ವಿಮಾನಂಗಳೀಶ್ವರನ ಕೆಲದಲ್ಲಿ
ಸುರಿದವಾನಂದದಿಂ ಪೂಮಳೆಗಳಲ್ಲಲ್ಲಿ
ದುಂದುಭಿ ಮೃದಂಗ ಭೇರೀ ರವಂಗಳ್ಮೊಳಗೆ
ಬಂದಮರ ಸಂತತಿಗಳಂದಭವನಂ ಪೊಗಳೆ
ಆಗಳೀಶ್ವರನೊಲಿದು ನಂದೀಶ್ವರನ ಕರೆದು
ಏಗೆಯ್ಯದೆನ್ನ ಭಕ್ತರ ನೋಡಿದೊಂದರಿದು
ಹದಿನಾರು ವರುಷದಿಂದಾಣೆ ಇಡಲಾ ಭಕ್ತಿ
ಅದಿರದದನಿಂದುವರ ಮೀರದಿಹದತ್ಯುಕ್ತಿ
ಆನೊರೆದೊರೆದು ನೋಡೆ ಸೋಲದವರಿಂತುಂಟೆ
ಈ ನೆಲದೊಳಾರುವರಿಯದ ತೆರದಿ ಬಾಳ್ದುಂಟೆ
ಎಂದು ನಂದೀಶಂಗೆ ಕರುಣದಿಂ ಬೆಸಸುತುಂ
ಮುಂದಿರ್ದ ತಿರುನೀಲಕಂಠರಂನೋಡುತುಂ



ಆಣೆ ಬಿಟ್ಟುದು ಬಿಟ್ಟುದಿನ್ನಿನಿತು ವತ್ಸರಂ
ಕ್ಷೋಣಿತಳದೊಳಗೆ ಸುಖದಿಂದಿರ್ದನಂತರಂ
ಬನ್ನಿಮೆಂದನಿತು ದಿನವಿರಿಸಿ ಬಳಿಕುತ್ಸವದಿ
ಮನ್ನಿಸುತೆ ತನುವೆರಸು ಕೊಂಡೊಯ್ದನುತ್ಸವದಿ
ಗಣಪದವಿಯೊಳಗವರನಾನಂದದಿಂದಿರಿಸಿ
ತ್ರಿಣಯನೊಲವಿಂ ತನ್ನ ದೇಹದ ನೆಲೆಯೊಳಿರಿಸಿ
ಭಕ್ತಜನ ಶುಕನಿಕರ ಪುಣ್ಯಫಲನೊಪ್ಪಿದಂ
ಭಕ್ತಜನ ಪಿಕಕುಲ ದಯಾಕರನು ಒಪ್ಪಿದಂ
ಶರಣಕುಲ ಸರಸಿಜ ಸಹಸ್ರಕರ ನೊಪ್ಪಿದಂ
ಶರಣಜನ ಕಲ್ಪತರು ಸುರಧೇನು ಒಪ್ಪಿದಂ
ಹೆಂಪೆಸೆವಲಂಪಿನ ಪ್ರಮಥನಿಧಿ ಯೊಪ್ಪಿದಂ
ಹಂಪೆಯ ವಿರೂಪಾಕ್ಷನನವರತ ಲೊಪ್ಪಿದಂ

ಂದ॥ ಹರನಾಣೆಯಿಟ್ಟ ತನ್ನಯ ತರುಣಿಯುಕೂ
ಟವನೆಮಾಣ್ದುಮಿಗೆ ಗುಪ್ತಮಹೇಶ್ವರರ। ತಿರು
ನೀಲಕಂಠರ ಚರಣವೆ ಶರಣೆನಗೆ ಹಂಪೆಯ
ವಿರೂಪಾಕ್ಷ॥

**ಸಮಾಪ್ತ.**

# ಕಣ್ಣಪ್ಪನ ಮಹಾತ್ಮೆ.

ಕಂದ॥ ಒಪ್ಪುವ ಶಿವಭಕ್ತಿ ಕಂ।
ಣಪ್ಪನನೀಧರೆಗೆ ಪೊಸತೆನಿಪ್ಪ ನನೀಶಂಗಪ್ಪವ॥
ನೊಪ್ಪಿರೆ ಮೆರೆದಂ ದರ್ಪಕ।
ದರ್ಪಹಾರ ಹಂಪೆಯದೇವಂ॥

## ರಗಳೆ.

ಶ್ರೀ ಸದಾಶಿವನ ಭಕ್ತಿಗೆ ತವರ್ಮನೆಯಪ್ಪ
ದೇಶ ಒಪ್ಪಿರ್ದುದು ಧರಾತಳಕೆ ಸುಖಮಪ್ಪ
ಚೋಳಮಂಡಲವದರೊಳೆಸೆವ ಒಂದು ಪಟ್ಟಣಂ
ಕೇಳು ತಿರುಕಾಳತ್ತಿ ಎಂದೆನಿಪ ಪಟ್ಟಣಂ
ಅಲ್ಲಿಪ್ಪನೋರ್ವ ಶಬರಾದಿನಾಥಂ ನೋಡೆ
ಎಲ್ಲ ಪುಳಿಂದರ್ಗೆ ನಾಯಕಂ ತಾಂ ನೋಡೆ
ಪೆಸರೆಸೆವ ಕಣ್ಣಪ್ಪನೆಂದೆಂಬುದಾತಂಗೆ
ವಸುಧೆಯೊಳಗುಳ್ಳ ಬೇಂಟೆಗಳನರಿವಾತಂಗೆ
ಕಾರಣಿಕನೆಂದರಿಯಬಾರದಾತನ ವೇಷ
ಆರಯ್ಯೆ ಕಾರ್ಮುಗಿಲ ಮರೆಯ ಸೂರ್ಯನ ವೇಷ
ಒಂದೊಂದು ಮೃಗದ ಜನ್ಮದ ಋಷಿಗಳೆಲ್ಲರುಂ
ಬಂದಿರ್ಪರಾತನಾಡುವ ಹೊಲದೊಳೆಲ್ಲರುಂ
ಸತ್ಯಮಂ ನುಡಿವುದಂ ಕನಸಿನೊಳ್ಕಂಡರಿಯ
ಅತ್ಯಂತ ಶಿವನೆಂಬುದಂ ಮನಸಿನೊಳಗರಿಯ
ಅರಿಯನಾತಂ ಬೇರೆ ಪಿರಿಯರುಂಟೆಂಬುದಂ
ಪಸಿವಿಂಗೆ ತೆರಪಿಲ್ಲ ವಿಷಯಕ್ಕೆ ತೆರಪಿಲ್ಲ
ವ್ಯಸನಕ್ಕೆ ತೆರಪಿಲ್ಲ ಪುಸಿವುದಕೆ ತೆರಪಿಲ್ಲ
ಜಾತಿಧರ್ಮದ ಬೇಂಟೆಯೆ ತನಗೆ ಪಿರಿದಾಗೆ
ಆತುರದೊಳಿರ್ಪನಂತದು ತನಗೆ ಸೊಗಸಾಗೆ
ತನ್ನುವಂ ತಾನರಿಯನಿದಿರುವಂ ಪರಿಕಿಸಂ
ಮುನ್ನಿನಾರಾಧನೆಯ ಪರಿಯಂ ವಿಚಾರಿಸಂ



ಇಂತಿರ್ದು ಬೇಂಟೆಗೆಂದನುವಾಗಿ ಪೊರಮಟ್ಟು
ಸಂತಸದಿ ಬರ್ಪ ಬೇಡರ ಪಡೆಯೊಳವಟ್ಟು
ಜುಂಜುದಲೆ ಕೆಂಗಣ್ಣು ಗುಂಜಾಭರಣಮೆಸೆಯೆ
ರಂಜಿಸಲ್ತೊಟ್ಟಯುರಗುಪ್ಪಸಂ ತಾಂ ಮೆರೆಯೆ
ತಲೆಯುರದ ಕರದ ಕವಡಿಕೆಯ ದಂಡೆಗಳೆಸೆಯೆ
ನಲಿಸು ಬಿಗಿದುಟ್ಟ ತೊವಲುಡಿಗೆಯೆಲುವುಗಳೆಸೆಯೆ
ಮೊಗದೊಳೊಪ್ಪುವ ವಿಭೂತಿಯ ತುಂತುರುಗಳೆಸೆಯೆ
ನೆಗೆದು ಕಟ್ಟಿದ ನೆತ್ತಿಗನ್ನಡಿ ಕರಂ ಪೊಳೆಯೆ
ನಿಡಿದಾಗಿ ಬೆನ್ನೊಳಳುಹಿದ ಚಮರಿಯೊಪ್ಪುತಿರೆ
ಹಿಡಿದ ಬಿಲ್ಲೆಡೆಗಯ್ಯೊಳೊಪ್ಪಿ ತೋರುತ್ತಮಿರೆ
ಕೂರಂಬುಗಳ ಹೊಗರು ಪಂಚಾಕ್ಷರಿಯನುಗುಳೆ
ಆರುತ್ತ ಪೊರಮಟ್ಟನಲ್ಲಿ ಭಿಲ್ಲರ್ಪೊಗಳೆ

ಬಂದು ತರುಗಿರಿ ಗುಲ್ಮಲತೆಗಳಿಡಿದಡವಿಯೊಳು
ನಿಂದು ಬೇಡರು ತೋಹು ಸೋಹಿನೊಳು ದರುವಿನೊಳು
ಪರಿದು ತಿರುಕಾಳತ್ತಿ ಮಲೆಯ ತಪ್ಪಲೊಳೆಲ್ಲ
ನೆರೆ ನೆಗೆದು ನೋಕ್ಪ ಕಾರಣಿಕ ಮೃಗಮುಮನೆಲ್ಲ
ಕಂಡು ನೀಟಡಿ ಇಟ್ಟು ಕುಸಿದು ಕುಬುಬೆನೆ ಕೂಗಿ
ದಂಡೆನೋಟಂ ಶರಂ ಸಂಧಾನದೊಳು ಮುಗ್ಗಿ
ಕಿವಿಗೆ ಬಲಗೈಯ್ಯಿಂದೆ ನಾರಿಯಂ ತರುತಮಿರೆ
ತವಕಿಸುವ ಕೂರಂಬು ಬಿಡುಬಿಡೆಂಬಂತೆ ಇರೆ
ಬಿಡುವುದೇ ತಾಗುವುದೊ ತಾಗುವುದೆ ನಡುವುದೋ
ನಡುವುದೇ ನೋಟವೋ ನೋಟವೇ ನಡುವುದೋ
ಎಂಬಂತೆ ತೊಡುವ ಬಿಡುವನುಮಾನವನುವಾಗೆ
ಇಂಬಿನಿಂ ಮೃಗಕುಳವನೆಸೆವ ಪರಿ ಪೊಸತಾಗೆ
ಎಸುತ ಬರೆ ಸಗ್ಗಕ್ಕೆ ಹಾರುತಿಪ್ಪವು ನೋಡ
ಅಸು ಪೋಪ ಪರಿ ತನಗೆ ಕಾಣಬಾರದು ನೋಡ
ಮೃಗಜಾತಿ ಭಯದಿಂದ ಓಡಲಮ್ಮವು ಕರಂ
ಬಗೆಯೊಳಗೆ ಸಂತಸಂ ಬಡುತಮಿರ್ಪವು ಕರಂ

ಕಂಡವಂ ಮರುಮೊಟ್ಟಮೊಟ್ಟಲೀಯದೆ ಯೆಸುತೆ
ಕಂಡವಂ ಮರುಹುಟ್ಟಹುಟ್ಟಲೀಯದೆ ಯೆಸುತೆ
ಕಂಡ ಮೃಗವೊಂದುವುಂ ತಪ್ಪವಾತನ ಮುಂದೆ
ಅಂಡಲೆವ ಕರ್ಮವಂ ನೀಗುತಾತನ ಮುಂದೆ
ಇಂತು ಮೃಗ ಸಂಕುಳದ ಬೇಂಟೆಗಳನಾಡುತುಂ
ಇಂತು ಶಬರರ ವೇಷದಿಂದೆ ನಲಿದಾಡುತುಂ

ಇರುತಿರುತ್ತೊಂದು ದಿವಸಂ ಬೇಂಟೆಗೆಂದಲ್ಲಿ
ಚರಿತದಿಂ ಕಣ್ಣಂದನೆಳ್ದು ಬರುತಿರ್ಪಲ್ಲಿ
ಬಲದ ಕಣ್ಪುರ್ಬು ನೈವೆರ್ಚಿ ಕೆತ್ತುತ್ತಮಿರೆ
ನಲಿನಲಿದು ಬೇಂಟೆ ಲೇಸಪ್ಪುದೆಂದೆನುತಮಿರೆ
ಇತ್ತ ತಿರುಕಾಳತ್ತಿ ಮಲೆಯೊಳಿರ್ದೀಶ್ವರಂ
ಚಿತ್ತದೊಳ್ನೆನೆದು ಮಾಯಾಮೃಗವ ಶಂಕರಂ
ತೋರಿ ಸುಳಿದೆನ್ನತ್ತ ಕೊಂಡುಬಾರೆಂದೆನಲು
ಮೀರಿ ಗಳಗಳನಿಳಿದು ಬಂದುದಾ ಬೆಟ್ಟದೊಳು
ಬಂದು ದೂರದೊಳೆ ಕಾಣ್ಬಳಿಕೆಯೊಳ್ಸುಳಿಸುಳಿದು
ನಿಂದು ನಡೆನಡೆದು ನಲಿದಾಡುತುಂ ಹೊಳೆಹೊಳೆದು
ತೋರೆ ಬೆಂಬತ್ತಿದಂ ಮೃಗದ ಬೆಂಬಳಿವಿಡಿದು
ಮೀರಿಯಡರ್ದೇರುತ್ತಲಿಳಿವುತ್ತೆ ನಡೆನಡೆದು
ಗಿಡುವಿನೊಳ್ಪೊದೆದೊಳ್ಕೊಳ್ಳದೊಳ್ಮಡುವಿನೊಳ್
ಇಡಿದಿರ್ದ ಹೊದರಿನೊಳ್ಸರವಿನೊಳ್ದರುವಿನೊಳ್
ಬೆಟ್ಟದೊಳ್ಬೆಳಗಿನೊಳ್ಕತ್ತಲಿಪ ಮೆಳೆಗಳೊಳ್
ಗಟ್ಟದೊಳ್ಗುಹೆಗಳೊಳ್ದಟ್ಟಯಿಪ ಮರಗಳೊಳ್
ಬಳ್ಳಿ ಲತೆ ಮಡು ಬಿದಿರು ಹುಲ್ಲು ಹಾವಸೆಗಳೊಳ್
ಕಲ್ಲು ಮರ ಮೊರಡಿ ಕುಳಿ ಕವರಿಡಿದ ಬೆತ್ತದೊಳ್
ಪೊಕ್ಕಲ್ಲಿ ಪೊಕ್ಕು ಪರಿದಲ್ಲಿ ಬೆನ್ನೊಳ್ಪರಿದು
ಮಿಕ್ಕಲ್ಲಿ ಮಿಕ್ಕು ನೆಗೆದಲ್ಲಿ ಒಡನೇ ನೆಗೆದು
ಮನಮುಮಂ ಕಣ್ಣುಮಂ ಮೃಗದ ಬೆಂಬಳಿಗಿತ್ತು
ತನುವುಮಂ ತವಕಮಂ ಹಿಡಿದೆಸೆವ ಬಗೆಗಿತ್ತು
ಕೈಲಾಸ ಶಿಖರ ಸೋಪಾನವನಡರ್ವಂತೆ



ಕಾಳತ್ತಿನಾಥನಂ ಕ್ಷಣದೊಳಗೆ ಕಾಣ್ಬಂತೆ
ಇಂತು ಬರೆವರೆ ಕೊಂಡು ಬಂದುದಾ ಮೃಗವಲ್ಲಿ
ಕಂತುಹರನಿರ್ಪ ದೇವಾಲಯದ ಮುಂದಲ್ಲಿ
ಮಾಯುವಾದುದು ಮೃಗಂ ನೋಡನೋಡಲ್ಸಳಿದು

ಆಯೆಡೆಯೊಳೆಲ್ಲಿಯುಮನರಸಿ ಕಾಣದೆ ಮುಳಿದು
ಶಿವನಿಳಯದತ್ತಲೆಯ್ತಂದನಾ ಕಣ್ಣಂದ
ನವಚಿತ್ತನುರವಣಿಸಿ ತೆರೆ ತೆರೆ ಕದವನೆಂದ
ಎನ್ನವನೆ ತೆರೆ ಕದವನೆನ್ನವನೆ ತೆರೆ ಎನಲ್
ಪನ್ನಗಧರಂ ಕದಂದೆರೆಯೆ ತಾಂ ಭೋಂಕೆನಲ್

ನೋಡು ಮಾದೇವನೇ ಕೇಳು ನೀನೆನ್ನವನೆ
ನೋಡುವೆಂ ನಿನ್ನ ನನ್ನಿಗಳನಿಂದೆನ್ನವನೆ
ಹೋದ ಮೃಗವಂ ಕಂಡೊಡೆನಗೆ ನೀನೊಳ್ಪಿದಂ
ಆದಲ್ಲಿ ಭಾಗೆಯುಂ ಪಂಚಿಸೆಂ ಕೊಳ್ಪದಂ
ಎನಲಲ್ಲಿ ಶಿವಲಿಂಗದೊಳಗೆ ನಗುತೀಶ್ವರಂ
ಎನಗಿವನ ಕಡು ಮೋಹವರಿವೆನುತ ಶಂಕರಂ
ನೋಡುವೆನಿದಕೇನೆನುತ್ತೆ ಮೃಗವಂ ತೋರೆ
ನೋಡಿಕೊಂಡಾಹಾ ಎನುತ್ತೆ ನಂಬುಗೆಯೇರೆ

ಅಯ್ಯಯ್ಯ ಇಂತಪ್ಪ ನನ್ನಿಯಂ ಕಂಡೆನೆ
ಕಯ್ಯ ಮೇಲೆ ತೋರುವಡೆಯನಂ ಕಂಡೆನೆ
ಇನ್ನಗಲೆನಿನ್ನಗಲೆನಯ್ಯಯ್ಯ ನಿನ್ನುಮಂ
ಮುನ್ನವರಿಯದೆ ಕೆಟ್ಟೆನಿನಿತುವರನಿನ್ನುಮಂ
ಎನಗುಳ್ಳವಂ ನೀನೆ ನಿನಗುಳ್ಳವಂ ನಾನೆ
ನಿನಗೇನುವುಂ ಕೊರತೆ ಎನ್ನವನೆಯಾಳ್ದನೆ
ಬಿಡುವನಲ್ಲಂ ನಿನ್ನನಿನಿತು ದಿಟವುಳ್ಳನಂ
ನಡೆಯಿಸಿಕೊಳಲ್ಬಲ್ಲೆ ಇಂತಪ್ಪ ಬಂಟನಂ
ಇಂದು ಮೊದಲಾಗಿಯುಗಲೆಂ ನಿನ್ನ ಹಜ್ಜೆಯಂ
ತಂದಿಕ್ಕುವೆಂ ರಸಂ ಬಸಿವ ಪೊಸ ಮಜ್ಜಿಯಂ

ಅಂಜದಿರ್ಬಡವಾಗದಿರ್ಚಿಂತಿಸದಿರೆಲವು
ಸಂಜೆಯಾದೊಡೆ ಯಿರಿಸಿ ಪೋಗೆ ನಿನ್ನೆಲವೆಲವು

ಎಂದು ಕುಣಿದಾಡುತುಂ ಕಂಡ ಹುಲ್ಲೆಯನೆಚ್ಚು
ತಂದಂಬು ಸಹಿತವಿದೆ ದೇವ ಹುಸಿಯೇಂ ನಚ್ಚು
ನಿನ್ನ ಮುಂದಿಟ್ಟು ಸರಿಯಾಗಿ ಹಂಚುವೆ ನೋಡ
ಎನ್ನವನೆ ಎನ್ನಲ್ಲಿ ಮಾಯೆಯಿಲ್ಲಂ ನೋಡ
ಎನುತವಂ ಸ್ನೇಹದಿಂ ಬಿರ್ಚುತಂ ಸರಿಮಾಡಿ
ನಿನಗೆ ಮನವೊಲ್ದುದಂ ಕೊಳ್ವುದೆನುತಂ ನೋಡಿ
ತಪ್ಪದೆನ್ನಾಣೆ ಸರಿ ನಿನ್ನಾಣೆ ಸರಿ ಎಂದು
ಒಪ್ಪಿಸಿಕೊಡುತ್ತಲ್ಲಿ ನುಡಿದಂ ಮನಂ ಸಂದು
ನಿನ್ನ ಭಾಗೆಯನಾರ ಕಯ್ಯೊಳ್ಕುಡೆಂ ಕುಡೆಂ
ಇನ್ನಾನೆ ಕಾಸಿ ಲೇಸಂ ಮಾಡುವೆಂ ಬಿಡೆಂ

ಎಂದೊಂದು ಚೆನ್ನ ಸುಂಟಿಗೆಗೋಲನಳವಡಿಸಿ
ತಂದುಕಿರ್ಚಂ ಹೊಸೆದು ಖಂಡಂಗಳಂ ಬಿಡಿಸಿ
ಕೆಂಪುಳ್ಳ ನುಣ್ಪುಳ್ಳ ಸೊಂಪುಳ್ಳ ಖಂಡಮಂ
ಇಂಪುಳ್ಳ ಕಂಪುಳ್ಳ ಹೆಂಪುಳ್ಳ ಖಂಡಮಂ
ಕಾಸುತಂ ತೆಗೆತೆಗೆದು ಪರಿಪಾಕಮಂ ನೋಡಿ
ಲೇಸಪ್ಪ ಮೃದುವಪ್ಪ ತೆಳ್ಗಂಡಮಂ ನೋಡಿ
ನಾಲಿಗೆಯೊಳಾಯ್ದಾಯ್ದು ಕೊಂಡವಂ ಬೇರಿರಿಸಿ
ಮೇಲಪ್ಪ ಮುತ್ತುಗದ ಪತ್ತಳೆಯ ಬಾಸಣಿಸಿ

ಕೊಂಡು ಬಂದೆನ್ನವನೆಯುಣ್ಣವನೆಯುಣ್ಣವನೆ
ಅಂಡಲೆವುತೆನ್ನವನೆ ಸವಿ ನೋಡು ನೋಡುವನೆ
ಎನ್ನವನೆ ಎನ್ನಾಣೆಯುಣ್ಣವನೆ ನಿನ್ನಾಣೆ
ನಿನ್ನಾಣೆ ಸವಿಸವಿದು ನೋಡು ನೀನೆನ್ನಾಣೆ
ಎನಲಲ್ಲಿ ಶಂಕರಂ ಕೈಕೊಂಡ ಮಾಳ್ಕೆಯಿಂ
ತನತನಗೆ ಭೂತಕ್ಕೆ ಕೊಟ್ಟನೊಲ್ದರ್ಥಿಯಿಂ
ಆತುರದ ಪ್ರೇಮಮಂ ತಾನೆಯಾರೋಗಿಸಂ
ಭೂತಸಂಕುಲಕೆ ಮಾಂಸವನಿತ್ತು ತಣಿಯಿಸಂ



ಭಕ್ತನ ಮನಕ್ಕೆ ತಾನುಂಡಂತೆ ಮಾಡುತುಂ
ಭಕ್ತಿಯಿಂ ತಣಿತಣಿದು ತೇಗಿ ಕೂಗಾಡುತುಂ
ಇಂತು ಶಿವನಾರೋಗಿಸಲ್ಕಂಡು ಕಣ್ಣಾಂಡ
ಅಂತಾಗಳೇ ನೋಡಿ ಬಾಡುತ್ತಮಿಂತೆಂದ
ಅಡವಿಯೊಳಗಿನಿತು ದಿನಮೋರ್ವನಿರ್ದೈ ತಂದೆ
ನಡೆ ನೋಡಿ ನೆರೆ ಸಾಗಿಸುವರಿಲ್ಲಲಾ ತಂದೆ
ಪಲವುಪಾಸದೊಳೂಟವಂ ಕಂಡೆ ಎನ್ನವನೆ
ಪಲವು ಮಾತೇನು ಸಲಹಿದಪೆ ನಾ ನಿನ್ನವನೆ
ಎಂದೆನುತ್ತಿರುಳಾಗೆ ಹುಳ್ಳಿ ಹೊರೆಯಂ ತಂದು
ಮುಂದೆ ಹಗ್ಗಿಯನೊಟ್ಟಿ ಬೆಳಗನೆತ್ತುವೆನೆಂದು
ನಿದ್ದೆಗೆಯ್ತಂದೆ ಇನ್ನಾವ ದುಗುಡಂಬೇಡ
ಇದ್ದಪೆಂ ಕಾಹಾಗಿ ಒಂದು ಭಯಂ ಬೇಡ

ಎಂದು ಶಿವನಂ ನಿದ್ರೆಗೈಸಿ ಮೆಲ್ಲನೆ ಬಂದು
ನಿಂದು ನಿಂದುಲಿವ ಪಕ್ಷಿಗಳನೆಬ್ಬಿಸುತಂದು
ನಿದ್ದೆಗೆಟ್ಟೊಡೆ ನಾಳೆ ಪಸಿವಿಲ್ಲದೆನ್ನವಂ
ಇದ್ದಂತೆ ಇರ್ದನೇನುವನುಣ್ಣನೆನ್ನವಂ
ಎನುತಲ್ಲಿ ಬಂದ ಮೃಗವಂ ಚಲ್ಲ ಬಡಿವುತುಂ
ವನದ ಪಕ್ಷಿಗಳ ನುಣ್ದನಿಗಳಂ ನಿಲಿಸುತುಂ
ತಿರುಗಿ ಬಂದೊಳಪೊಕ್ಕು ನಿದ್ರೆಯುಮನಾಲಿಸುತೆ
ಇರದೆ ಪೊರಮಟ್ಟು ಮೆಲ್ಲನೆ ಪೊರಗನಾಲಿಸುತೆ
ಒಳಪೊಕ್ಕು ಮತ್ತೆ ಸುಯ್ಯಲರನಾಲಿಸುತಂದು
ತಿಳಿಯದಿನ್ನುಂ ಬಳಲ್ಕಂ ನಿದ್ರೆಗೆಯ್ಯೆಂದು
ಇಂತು ಬೆಳಗಪ್ಪನ್ನೆಗಂ ಜಾಗರಂ ಮಾಡಿ
ಕಂತುಮದಹರನುಪ್ಪವಡಿಸೆ ನಲವಿಂ ನೋಡಿ
ಪಸಿದಯ್ಯ ನಿದ್ರೆ ತಿಳಿದೇಳ್ದಯ್ಯ ಎನ್ನವನೆ
ಪೊಸ ಮಾಂಸಮಂ ತರಲ್ಪೋಪೆನೈ ಎನ್ನವನೆ
ಕಡು ವೇಗದಿಂ ಬಂದಪೆಂ ನೋಡು ನಿನ್ನಾಣೆ
ತಡೆಯೆ ನಾನೊಂದೆಡೆಯೊಳುಂ ನಿಲ್ಲೆ ನಿನ್ನಾಣೆ
ಎನುತ ಸಂತಯಿಸುತುಂ ನೇಹದಿಂ ಪೊರಮಟ್ಟು

ಮನದೊಳಗೆ ದೂರಿಸುತಲೆರಡು ಮೂರಡಿ ಇಟ್ಟು
ತಿರುಗಿ ಬಂದೆನ್ನವನೆಯುಮ್ಮಳಿಸಬೇಡೆಂದು
ಚರಿತದಿಂದೀ ಬರ್ಪನೆನ್ನವನೆ ನೋಡೆಂದು
ತೆಗೆದಪ್ಪಿ ಕೊಂಡಾಡಿ ಮುಂಡಾಡಿ ಮುದ್ದಾಡಿ
ಅಗಲಲಾರದೆ ಮತ್ತೆ ಮತ್ತೆ ಹೋಗದೆ ನೋಡಿ
ಏನೆಂಬೆನಾ ಭಕ್ತನುತ್ತಮದ ಸ್ನೇಹವಂ
ಏನೆಂಬೆನಾ ಶಿವನ ಲೀಲೆಯುತ್ಸಾಹವುಂ
ನಡೆನಡೆದು ತಿರುತಿರುಗಿ ಹಿಂಬೆರಕಿನಿಂ ನಡೆದು
ದಡದಡಿಸಿ ಹೆರೆ ಹಿಂಗಲಾರದೆ ಮನಂಬಿಡಿದು
ಸಿಂತಕ್ಕೆ ಬಂದು ಕಣ್ಮರೆಯಾಗೆ ಕಣ್ಣಿಂದ
ಅಂತಾಗಳೆ ಕಂದಿ ಕುಂದಿ ಮಿಗೆ ಕಣ್ಣಿಂದ
ಅರಸುತ್ತಮಿರ್ದನಿತ್ತಲ್ಮೃಗವನೆಸಲೆಂದು

ಪೋದಮುಟ್ಟುಬಂದನತ್ತಲ್ಪಾರ್ವನೊಲ್ತಂದು
ಪೂಸಿದ ವಿಭೂತಿ ರುದ್ರಾಕ್ಷಿಯೋವರಿ ಎಸೆಯೆ
ಬಾಸಣಿಸಿದಗ್ಗವಣಿ ಕೆಯ್ಯ ಕರಡಿಗೆ ಎಸೆಯೆ
ಮೆಲ್ಲಮೆಲ್ಲನೆ ಬೆಟ್ಟವೇರುತುಂ ನಡೆತಂದು
ಅಲ್ಲಿ ದೇವಾಲಯದ ಬಾಗಿಲ್ಗೆಯ್ದೆತಂದು
ಗವಲೆತ್ತಿ ಕವಿಯೆ ಕರಣಂ ಕರಂ ಕೌರೇಳೆ
ಶಿವಶಿವ ಇದೆಲ್ಲಿಯದ್ಭುತವೆನುತೆ ಹೊಲಸೇಳೆ
ತಿರುಗಿ ಬಂದಗ್ಗಣಿಯನೊಂದು ಟಾವಿನೊಳಿರಿಸಿ
ಕರಡಿಗೆಯನಿರಿಸಿ ಪೇಸುತ್ತುಗುಳಿ ಕೊಕ್ಕರಿಸಿ
ಎಲ್ಲಿಯದು ಬಂದುದು ದುರಾಚಾರನೆಂದೆನುತೆ
ಎಲ್ಲಿಯ ಜಿಗುಪ್ಸೆಯಾದುದು ಶಂಕರಂಗೆನುತೆ
ಹೇಸಿ ಮೂಗನೆ ಮುಚ್ಚಿಕೊಳುತವಂ ಐತಂದು
ಆಸುರದ ಪಾಪಕರ್ಮವ ಮಾಡಿದವನೆಂದು
ಸೂನೆಗಾರನನಿಂತು ಪುಗಿಸುವರೆ ಎಲೆ ದೇವ
ಏನಯ್ಯ ಎಲ್ಲಿರ್ದೆ ಏನಾದೆ ಎಲೆ ದೇವ
ಎಂದೆನುತ ಜೋತರಿಗೆಯುಂ ಕೊಂಡು ಜೋಹರಿಸಿ
ತಂದು ಗೋಮಯವಿಕ್ಕಿ ಹೇವರಿಸಿ ಸಾರಯಿಸಿ



ಕೊಳ್ಳದೊಳು ಪೊಕ್ಕು ಮತ್ತೊಮ್ಮೆ ಪಾರ್ವಂ ಮಿಂದು
ತಳ್ಳಂಕದಿಂದ ಶಿವಶಿವ ಎನುತ್ತಂ ಬಂದು
ಕರಡಿಗೆಯನಗ್ಗವಣಿಯುಂ ಕೊಂಡು ಭರದಿಂದೆ
ಹರನಾಲಯಕ್ಕೆ ಬಂದೊಳಪೊಕ್ಕು ಭಯದಿಂದೆ
ಇಂತು ಮಾಡಿಸುವರೇ ಶುದ್ಧಾತ್ಮ ಶಿವ ಎನುತೆ
ಇಂತು ಮಾಡಿಸುವರೇ ನಿರ್ಮಳ ಪ್ರಭುವೆನುತೆ
ಮಜ್ಜನಕ್ಕೆರೆದನಾ ಕಾಳತ್ತಿಯರಸಂಗೆ
ಸಜ್ಜನ ಸ್ನೇಹ ರಸಭರಿತ ಪರಮಾತ್ಮಂಗೆ
ಬೆಲ್ಲವತ್ತಂ ಗರುಗದೆಲೆ ದೊಡ್ಡ ಪತ್ರೆಯುಂ
ಪಲ್ಲವಿಸುವುತ್ತರಣೆಯುಂ ಬಿಳಿಯ ಗರುಕೆಯುಂ
ತಂದೊಟ್ಟಿದಂ ರುದ್ರಸೂಕ್ತಮುಂ ಪೇಳುತುಂ
ನಿಂದಲ್ಲಿ ಪಲವುಂ ಜಪಂಗಳಂ ಮಾಡುತುಂ
ಧೂಪಾರತಿಯನೆತ್ತಿ ನೈವೇದ್ಯಮುಂ ಕೊಟ್ಟು
ಕಾಪಾಲಿ ಶರಣೆನುತ್ತಂ ಬಂದು ಪೊಡಮಟ್ಟು
ಪುಗಿಸದಿರು ಕಂಡೆಯ್ಯ ಪಶುಕರ್ಮಕಾರನಂ
ಪುಗಿಸದಿರು ಹೇಸಿಕೆಯ ಮಾಡುವ ಕಿರಾತನಂ
ಎಂದೆನುತೆ ಪೊಡಮಟ್ಟು ಬಲಗೊಂಡು ಪಟ್ಟಿರ್ದು
ಇಂದುಶೇಖರ ಕರುಣಿಸೆಂದೆನುತೆ ನಿಂದಿರ್ದು
ಸುಖನಾಸಿ ಗರ್ಭಗೃಹದಿಂ ರಂಗಮಂಟಪದ
ಮುಖದ ಮೂರುಂ ಕದವನಿಕ್ಕುತುಂ ವಿಸ್ತರದ
ಸಂಕೊಲೆಗಳಂ ಹೂಡಿ ಬಿಯ್ಯಗಂಗಳನಿಕ್ಕಿ
ಶಂಕರಾ ಪುಗಿಸದಿರು ಇನ್ನವನೆನುತ್ತಿಕ್ಕಿ
ಪೋದನತ್ತಲು ಶಿವಬ್ರಾಹ್ಮಣಂ ತತ್ಪುರಕೆ

ಆದುದಿತ್ತಲು ಬೇಡನಾಟವಂದಾ ವನಕೆ
ಹಸಿದನೆನ್ನವನೆಂದು ಮೃಗವನರಸುತೆ ಬಂದು
ಎಸಲೊಲ್ಲದವ್ವಳಿಸಿ ನಿಲ್ವನದು ಪೊಲ್ಲೆಂದು
ಬಾಡಿದ ಮೃಗಂಗಳಂ ರೋಗಂಗಳುಳ್ಳವಂ
ಬೇಡೆನ್ನವನ ಹೊಟ್ಟೆಗಾಗದೆನುತೆಸನವಂ
ಬಾಳ್ಗೆನ್ನ ಮಾದೇವ ಎನ್ನವನೆ ಎನುತಲ್ಲಿ

ಆಳ್ಗಣವನವಧಾರು ಎನ್ನೊಡೆಯನೆನುತಲ್ಲಿ
ಅಷ್ಟಾಂಗ ಪುಷ್ಪವಾಗಿರ್ದ ಮೃಗವಂ ಕಂಡು
ಅಪ್ಪವೇಷ್ಟಿತನಾಗಿ ಎಚ್ಚಂ ಮನಂಗೊಂಡು
ನೆಲಕೆ ಬೀಳದ ಮುನ್ನ ಪರಿತಂದು ಪಿಡಿದೆತ್ತಿ
ನೆಲನನಿದು ಸೋಂಕೆ ಪೇಸುವನೊಡೆಯನೆನುತೆತ್ತಿ
ಕಲ್ಬಾಳೆ ಎಲೆಗೊಯ್ದು ಬೆಳೆದ ಹಸಲೆಯ ಮೇಲೆ
ಚಲ್ವಾಗಿ ಇಕ್ಕಿ ಮುಚ್ಚಿದನೊಂದರಿಂ ಮೇಲೆ
ಗಾಳಿ ತಾಗಿದೊಡೊಲ್ಲನೆನ್ನವಂ ಸುಖಿ ಎನುತೆ
ಬಾಳ ಚೂತದ ಕೆಳಗೆ ತಂದಿರಿಸಿ ಪಸರಿಸುತೆ
ಮುತ್ತುಗದ ತಳ್ತೆಲೆಗಳಂ ಚಂದದಿಂ ಪಾಸಿ
ಬಿತ್ತರಿಸಿ ನವಖಂಡವಂ ಮಾಡುತುಂ ಕಾಸಿ
ಉಲುಹೋದಡಂತಂತೆ ಮುಚ್ಚಿ ಮರೆಮಾಡುತುಂ
ನಲಿನಲಿದು ಕಾಸಿ ಪರಿಪಾಕವಂ ಮಾಡುತುಂ
ಕಾಹೇರಿತಿದು ಸೀದುದೆಂದು ಬೇರಿರಿಸುತುಂ
ಆಹಾ ಇದೆನ್ನವಂಗೆಂದು ಮುಚ್ಚಿರಿಸುತುಂ
ಮೃದುವಪ್ಪವಂ ಕಯ್ಗಳಿಂದರಿತು ಶೋಧಿಸುತೆ
ಒದವಿ ಚಲ್ವಪ್ಪವಂ ಕಣ್ಗಳಿಂ ಶೋಧಿಸುತೆ
ಕಂಪುಳ್ಳವಂ ಘ್ರಾಣದಿಂದರಿದು ಶೋಧಿಸುತೆ
ಇಂಪುಳ್ಳವಂ ಜಿಹ್ವೆಯಿಂದರಿದು ಶೋಧಿಸುತೆ
ಎಂಜಲೆಂಬವರ ಬರಿ ಜಿಹ್ವೆಯಂ ಹುಸಿಮಾಡಿ.
ಸಂಜನಿತ ಕರಣಂಗಳಿಂದೆ ಶೋಧಿಸಿ ನೋಡಿ
ಸುಖಮುಖದ ಕಳಶದೊಳಗಗ್ಗಣಿಯನಾದರಿಸಿ
ನಖದಿಂದೆ ಕಾಡಮೊಲ್ಲೆಯ ಹುವ್ವನಳವಡಿಸಿ
ಉತ್ತಮಾಂಗದ ಕರಡಿಗೆಯೊಳಿರಿಸುತಂತಲ್ಲಿ
ಉತ್ತಮೋತ್ತಮ ಭಕ್ತನಳ್ಕರಿಂ ಬರುತಲ್ಲಿ
ಒಂದು ಕಯ್ಯೊಳ್ಮಿಸಲೋಗರಮುಮಂ ಪಿಡಿದು
ಒಂದು ಕಯ್ಯೊಳ್ಬಿಲ್ಲು ಬಾಣಂಗಳಂ ಪಿಡಿದು
ಮೊಗದಗ್ಗವಣಿ ಶಿರಕರಂಡಿಗೆಯ ಪೂವೊಪ್ಪೆ
ಮೃಗದ ಮಾಂಸಂ ನವಸ್ನೇಹದೋಗರವೊಪ್ಪೆ



ಬರುತೆನ್ನವಂ ಪಸಿದನಿರಲಾರನೆನ್ನವಂ
ಸಿರಿದು ತಳ್ವಿದನೆಂದು ಕೋಪಿಸುವನೆನ್ನವಂ
ಹೊತ್ತು ಹೋಯ್ತು ದೆನ್ನ ಬರವನೆಳಸಿರ್ಪನೋ
ಹೊತ್ತುಗಳೆದೆಂ ಪಾಪಿಯಾಪೆನೆಂತಿರ್ಪನೋ
ಮಿಗೆ ಪಸಿದು ನಿಲಲಾರದಿದಿರಾಗಿ ಬರ್ಪನೋ
ಮಗನ ಬರವಂ ಕಾಣದೊಬ್ಬನೆಂತಪ್ಪನೋ
ಪುಲಿ ಬಂದೊಡಂಜಿ ಪೊರಮಡಲಮ್ಮದಿರ್ಪನೋ
ಉಲಿವ ಪಕ್ಷಿಗಳ ದನಿಗೇಳ್ದು ಸುರದಿರ್ಪನೋ
ಕರಡಿ ಗರ್ಜಿಸಲಂಜಿಯುಸುರಿಕ್ಕದಿರ್ಪನೋ
ಉರಗ ಸಾರಲು ಹೆದರಿ ಹೆಂಪಳಿವುತಿರ್ಪನೋ
ಬರವುಗಾಣದೆಯೊರ್ವನೇ ಯಲಸುತಿರ್ಪನೋ
ಪರಮನ ಸಮೀಪಕ್ಕೆ ಈಪೊಳ್ತು ಪೋಪೆನೋ
ತಮ್ಮವರ ನೆನೆದೆನ್ನ ಬಿಟ್ಟನೆಂದಳುವನೋ
ದುಮ್ಮಾನದಿಂದೆನ್ನ ಕೂಡೆ ಮುನಿದಿಪ್ಪನೋ
ಎಂದು ನೇಹದ ಚಿಂತೆಯಿಂ ಚಿಂತಿಸುತ ಬರಲು

ಮುಂದೆ ದೇವಾಲಯದ ಬಾಗಿಲುಗಳಿಕ್ಕಿರಲು
ಎನ್ನವನೆ ತೆರೆ ಕದವನೆಂದು ನುಡಿಯುದರಿಂದ
ಮುನ್ನವೇ ಢಣ ಢಣನೆ ತೆರೆಯೆ ಚಚ್ಚರದಿಂದ
ತೆರೆಯೆ ಬಂದೊಳಸೊಕ್ಕು ಒರ್ಬನಿರ್ದೈ ತಂದೆ
ಎನುತೆ ಪಾದುಕ ಪದದಿ ಪೂಜೆಯಂ ಪರಿಹರಿಸಿ
ಅನುನಯದಿ ಮೊಗದಗ್ಗವಣಿಯೆರೆದು ಸಡಗರಿಸಿ
ಮುಡಿಯೊಳಿರ್ದಲರನೊಯ್ಯನೆ ಪೂಜೆಯಂ ಮಾಡಿ
ಕಡು ನೇಹದಿಂದೆ ಪಸಿದೈ ಪಸಿದೆ ಎನೆ ನೋಡಿ
ನೇಹದೋಗರಮುಮಂ ತಂದಲ್ಲಿ ಮುಂದಿರಿಸಿ
ಓಹೋ ಹೊ ಹೊತ್ತು ಹೋಯಿತ್ತೆನುತಲಾದರಿಸಿ
ಎನ್ನವನೆ ಎನ್ನವನೆ ಪಸಿದೆಯ್ಯ ಪಸಿದೆಯ್ಯ
ಎನ್ನವನೆ ಚನ್ನವನೆ ಹೊತ್ತು ಹೋದುದೆ ಅಯ್ಯ
ಉಣ್ಣವನೆಯುಣ್ಣವನೆಯೆನ್ನವನೆಯೆನ್ನಯ್ಯ
ಬಣ್ಣಿಸುತ ಬಣ್ಣಿಸುತ ಉಣ್ಣದನೆ ದಮ್ಮಯ್ಯ

ಅರಿದೆನರಿದೆಂ ನಾಚಿ ಇರ್ದಪೆಯು ನೀನೆಂದು
ಅರಿವಂತೆ ಹಿಂದುಮುಂದಾಗಿ ನೋಡುವೆನೆಂದು
ಇರಲೀಶನೆಂದಿನಂದದಲುಂಡ ಮಾಳ್ಕೆಯಿಂ
ಪರಿಹರಿಸಿ ಭೂತಕ್ಕೆ ಕೊಟ್ಟನೊಲ್ದಳ್ತಿಯಿಂ

ಆರೋಗಿಸಲ್ತಿರುಗಿ ನೋಡೆ ಹರುಷಂದಳೆದು
ಹಾರಯಿಸಿ ದಳವೇರಿ ತೆರೆಯನತ್ತತ್ತೆಳೆದು
ಬಿಟ್ಟಿಯಾದಪುದೆಂದು ನೋಡಿ ಥೂ ಥೂ ಎಂದು
ಕಟ್ಟಳ್ಕರಿಂದೆ ನೇಹದ ಕಾಹನಿಟ್ಟಂದು
ಲಿಂಗ ಪ್ರಸಾದವಂ ಕೈಕೊಂಡು ಸವಿ ಸವಿದು
ಹಿಂಗದಾ ಸವಿಗೆ ಹಾರಯಿಸುತುಂ ಮನವೊಸೆದು
ಉಂಡನಿಂದೆನ್ನವಂ ಬರ್ದುಕಿದೆಂ ಬರ್ದುಕಿದೆಂ
ಉಂಡನಿಂದೆನ್ನವಂ ಬಾಳ್ವೆನಾಂ ಬರ್ದುಕಿದಂ
ಇನ್ನಿದೇ ಬೇಂಟೆಯಾಡಿಯೆ ತರ್ಪೆನೆಂದೆನುತೆ
ಇನ್ನೆನಗಸಾಧ್ಯಮಪ್ಪುದದೊಂದುಮಿಲ್ಲೆನುತೆ
ಒಡೆಯನಂ ನೋಡುತಂ ಭುಜವನಪ್ಪಳಿಗೊಂಡು
ಕಡು ಮೋಹವೆತ್ತಿಕ್ಕಿಯಾಡಲ್ಮನಂಗೊಂಡು

ಬಾಗುತುಂ ಕೈಚಪ್ಪಳಿಕ್ಕುತುಂ ಬೀಗುತುಂ
ಕೂಗುತುಂ ತೊನೆಯುತೊಂದೇ ಕಾಲೊಳಾಡುತುಂ
ಉಬ್ಬಿಂದು ಬೊಬ್ಬಿಟ್ಟು ಕೋ ಎಂದು ಕೂಗಿಟ್ಟು
ಅಬ್ಬಿಂದು ನಿಂದಾರ್ದು ನಾಲ್ದೆಸೆಗೆ ಕೊಣಕಿಟ್ಟು
ಉಡುವಣಿಗಳಲ್ಲಾಡೆ ಮುಡುಹಿಕ್ಕಿ ಕೆಲೆದಾಡೆ
ಪಿಡಿದಲಗನೆತ್ತಿ ಕುಣಿಕುಣಿದೊನೆದು ಕುಣಿದಾಡಿ
ಪರಿತಂದು ಬಿಗಿಯಪ್ಪಿಯೆಯ್ದಿಸದೆ ಬಿಸುಸುಯ್ದು
ನೆರೆವ ತವಕದಿ ವಿರಹವೇರಿ ತನ್ನಂ ಬಯ್ದು
ಮತ್ತೆ ಮತ್ತೆಳ್ದಾಡಿ ಒಲೆದಾಡಿ ಮಲೆದಾಡಿ
ಚಿತ್ರವೆಂತಿರ್ದುದಂತಭವನೊಳಗೋಲಾಡಿ
ಕರಡಿಯಂದದೆ ಕುಪ್ಪಿ ಕುಪ್ಪಿ ಕೆಲಕೆಲದಾಡಿ
ಉರವಣಿಸಿ ಹುಲ್ಲಿಗುಂತಿಕ್ಕಿ ನೆಗೆನೆಗೆದಾಡಿ



ಬಾಯಿಂದೆ ಕೊಂಬು ಮೌರಿಯ ಕಹಳೆಗಳನೂದಿ
ಬಾಯಿ ಂದೆ ಕರಡೆಯಂ ಬಾಜಿಸುತೆ ಕೊಳಲೂದಿ
ಎನ್ನವನೆ ನೋಡೆಂದು ಎತ್ತಿಕ್ಕಿಯಾಡುತುಂ
ಚನ್ನವನೆ ನೋಡೆಂದು ಸಿಳ್ಳಿಕ್ಕಿಯಾಡುತುಂ
ಮುಂದೆ ತುರುಬಂ ಕಟ್ಟಿ ಮುಮ್ಮಿ ಸಲೆಯಾಡುತುಂ
ಚಂದ ಚಂದದ ಬೇಡರಾಟವಂ ತೋರುತುಂ
ಆಡಿಲರಿಯದೆ ಕಾಲ್ಗೆ ಬಂದಂತೆಯಾಡುತುಂ
ಪಾಡಲರಿಯ.ದೆ ಎನ್ನವನೆ ಎಂದು ಪಾಡುತುಂ
ಬೆರಿಕೆ ಇಲ್ಲದ ಬಚ್ಚ ಬರಿಯ ಭಕ್ತಿಯೊಳಾಡಿ
ನೆರವಿಲ್ಲದೇಕಾಂತ ಶಾಂತ ಭಕ್ತಿಯೊಳಾಡಿ
ಇಂತು ಬೆಳಗಪ್ಪನ್ನೆಗಂ ಜಾಗರಂ ಮಾಡಿ

ಕಂತುಮದಹರನ ಕಡು ಮೋಹದೊಳಗೋಲಾಡಿ
ನಡೆತಂದು ಶಂಕರನಸಮರ್ದಪ್ಪಿ ಕೊಂಡಾಡಿ
ಒಡೆಯನೇ ಬೇಂಬೆಯಾಡಲ್ಪೋಪೆನೆಂದಾಡಿ
ನಿನ್ನಿನಂತಲ್ಲ ತಳುವೆಂ ತಳುವೆನೆನ್ನವನೆ
ನಿನ್ನಮೇಲಾಣೆ ಬೇಗದಿ ಬರ್ಪೆನೆನ್ನವನೆ
ಎಂದಗಲಲಾರ ನಿಲಲಾರನೆನ್ನವನೆಂದು
ಮುಂದುಗೆಟ್ಟೊಂದುವಂ ನುಡಿಯಲಂಜುವನೆಂದು
ಕಣ್ದೆರೆದು ನೋಡಲಮ್ಮಂ ದಿಟ್ಟಿಯಕ್ಕೆಂದು
ನುಣ್ಪಾನಿಯೊಳಲ್ಲದುಸುರಂ ಮುಂಡೆ ನೋಗೆಂದು
ನಡೆವನೊಂದಡಿಯಿಡುವನಗಲಲಾರದೆ ನಿಲ್ವ
ಒಡೆಯನಂ ನೋಡಿ ಕಣ್ಬಿಡಲಾರದೆಯುಳಲ್ವ
ಜುಮ್ಮನೆ ಬೆಮರ್ತು ದಡದಡಿಸಿ ಗದ್ಗದಿಸುವಂ
ಜೊಮ್ಮಿಡುತ್ತೆನ್ನವನೆ ಎಂದು ದಡದಡಿಸುವಂ
ತಿರುಗಿ ನೋಡುತ್ತಲ್ಲಿ ಮರೆಯಾಗೆ ಬೆಚ್ಚುವಂ
ಪರಿಹರಿಸಿ ನೆರೆ ನೋಡಿ ನೋಡಿ ಮೆಯ್ವೆಚ್ಚುವಂ
ನಡೆಯುತ್ತ ಕಾಲಿತ್ತಲೇನೆಂಬೆನಾತನಂ
ಒಡಲತ್ತ ಮನವಿತ್ತಲೇನೆಂಬೆನಾತನಂ

ನೋಟವತ್ತಲ್ಲಣ್ಗಳಿತ್ತಲಿಂತಿರಲು ಪೊಸತು
ಮಾಟವತ್ತಲು ಕೂಟವಿತ್ತಲಿಂತದು ಪೊಸತು
ದಿನದಿನಕೆ ಗಳಿಗೆಗಳಿಗಿಗೆ ನೇಹವೇರುತುಂ
ತನುಮನಕೆ ತನುಕಣ್ಗೆ ಪೊಸತು ಪಲ್ಲವಿಸುತುಂ
ಪೋದನೆಂತಕ್ಕೆ ಬೇಂಟೆಗೆ ತಾನೆ ಕಣ್ಣಿಂದ
ಸಾದರಂ ಮಿಗೆ ಪೋದನತ್ತಲಾ ಕಣ್ಣಿಂದ

ಇತ್ತಲಾ ಶಿವಬ್ರಾಹ್ಮಣಂ ಮುನ್ನಿನಂದದಿಂ
ಹೊತ್ತ ಕೊಡನಗ್ಗವಣಿ ಹೂಪತ್ರೆಯೊಪ್ಪದಿಂ
ಮೆರೆವ ದೇವಾಲಯದ ಬಾಗಿಲ್ಗೆ ನಡೆತರಲು
ಹೊರಗೆ ಮುನ್ನಿಂದೆ ನಾಲ್ವಡಿ ಕುಸುರಿದರಿದಿರಲು
ಕಂಡೊಳಗೆ ಪುಗದೆ ಹೇಸುತ್ತೆ ಸಿಡಿಮಿಡಿಗೊಂಡು
ಬೆಂಡಾಗಿ ಬೇಳಾಗಿ ನೋಡಿ ಕೋಳ್ಕುದಿಗೊಂಡು
ಹೊತ್ತಗ್ಗವಣಿವೆರಸಿ ಬೆರಗಾಗಿ ನಿಂದಲ್ಲಿ
ಎತ್ತ ಹೋದ್ಯೆ ಶಿವನೆ ನಿನ್ನ ಹೊಲಬಿಲ್ಲಿಲ್ಲಿ
ಇಂತು ಮಾಡಿಸುವರೇ ಕಾಳಹಸ್ತೀಶ್ವರನೆ
ಇಂತಪ್ಪನಾಚಾರವೇ ಪಾರ್ವತಿ ಪ್ರಿಯನೆ
ಪ್ರಾಣಿಯಂ ಕೊಲಲೀವುದಿದು ಧರ್ಮವೇ ದೇವ
ಕಾಣನೇ ಅಡವಿಯೊಳ್ತೆರಹಿಲ್ಲವೇ ದೇವ
ಬಂದೀ ಮರುಳ್ತನಕ್ಕೆಂತರ್ಚಿಪೇಂ ದೇವ
ಇಂದು ಮೊದಲಾಗಿ ಬಾರೆಂ ಸುಳಿಯೆನೆಲೆ ದೇವ
ಕೊಲ್ವೆನವನಂ ಬಳಿಕ ಬಂದರ್ಚಿಪೇಂ ನೋಡ
ಸಾಲ್ವೆನೆನ್ನೀ ಪ್ರಾಣಮುಮನವಂಗೆಲೆ ನೋಡ
ಎಂದಿತ್ತ ಬೇರಿಳುಪಿಯಗ್ಗವಣಿ ಪತ್ರೆಯಂ
ತಂದೊಂದರಿಂದುಡಿಗಿ ದುರ್ಗಂಧದಿಕ್ಕೆಯಂ
ಸಾರೈಸಿ ಮಿಂದು ಮತ್ತಗ್ಗವಣಿಯಂ ಕೊಂಡು
ದೂರಿಸುತೆ ಚಿತ್ತದೊಳು ಚಿಂತೆಯಂ ಕೈಕೊಂಡು
ಬಂದು ಮಜ್ಜನಕೆರೆದು ದೇವಂಗೆ ಕೋಪಿಸುತೆ
ಎಂದುಮಿಂತೀ ದುರಾಚಾರವಿಲ್ಲೈ ಎನುತೆ



ಪತ್ರೆಯಿಂ ಪುಷ್ಪದಿಂ ಪೂಜೆಯಂ ಮಾಡುತುಂ
ಚಿತ್ತಜಹರಂಗೆ ಧೂಪಾರತಿಯನೆತ್ತುತುಂ
ಆರೋಗಿಸಲ್ಕಿತ್ತು ಕದವನಿಕ್ಕುತ್ತಲ್ಲಿ
ಮಾರಾರಿ ಮೆಚ್ಚಲವನಂ ಕೊಲ್ವೆನೆನುತಲ್ಲಿ
ಪೊರಮಟ್ಟು ಪೋದನತ್ತಲ್ಶಿವಬ್ರಾಹ್ಮಣಂ
ತೆರನರಿದು ಶಬರನಂ ಮರ್ದಿಸುವ ಕಾರಣಂ

ಇತ್ತಲಾ ಪಾರ್ವತಿ ಶಿವಂಗೆ ಬಿನ್ನಯಿಸಿದಳು
ಉತ್ತಮೋತ್ತಮ ಶಿವಾಚಾರ ಬಿನ್ನವಿಸಿದಳು
ದೇವ ತಿಳಿಯದು ನಿಮ್ಮ ಮಾಟವೆನಗೀಶ್ವರಾ
ಭಾವಿಸಲ್ಬೇರೊಂದು ಪರಿ ನೋಡೆ ಶಂಕರಾ
ಬೇಡನ ಚರಿತ್ರಮಿದು ಧರಣಿಗೆ ವಿರುದ್ಧವಿದು
ನೋಡೆ ನಿಮ್ಮಡಿಗಳ್ಗೆ ಮಿಗೆ ಸೈರಿಸಿರ್ದಪುದು
ಮುಕ್ಕುಳಿಸಿದುದಕಮಂ ಮಜ್ಜನಕೆರೆದರುಂಟೆ
ಅಕ್ಕಕ್ಕು ಮುಡಿದ ಹುವ್ವಿಂ ಪೂಜಿಸಿದರುಂಟೆ
ಬರಿಮಾಂಸವಲ್ಲದರಮೇಲೆಂಜಲಿಂತುಂಟೆ
ಕರಿಗೊರಲ ನೀನೊಲ್ದೊಡೆನಲಮ್ಮೆ ಇಂತುಂಟೆ
ಕಾಲಿಂದೆ ಪೂಜೆಯಂ ಶಿವಶಿವಾ ಎನಲಮ್ಮೆ
ಈ ಲೋಕದೊಳಗಿಲ್ಲ ನೀನೊಲ್ದಡೆನಲಮ್ಮೆ
ಇಂತಪ್ಪ ಬೇಡಂಗೆ ಮೆಯ್ಯಾನುವರೆ ದೇವ
ಇಂತಪ್ಪ ಬೇಡಂಗೆ ಕದವ ತೆರೆವರೆ ದೇವ
ಹುಟ್ಟಿದಂದಿಂ ವಿಭೂತಿಯನಿಟ್ಟು ಬಲ್ಲನೇ
ಹುಟ್ಟಿದಂದಿಂ ಶಿವಶಿವಾ ಎಂದು ಬಲ್ಲನೇ
ಎನ್ನವನೆ ಎನ್ನವನೆ ಎಂಬುದಿದು ಮಂತ್ರಮೇ
ತನ್ನಯ ವಿನೋದಂ ಶಿವಾರ್ಚನೆಗೆ ತಂತ್ರಮೇ
ಮಿಂದು ಭಸಿತವನಿಟ್ಟು ರುದ್ರಾಕ್ಷಿಯಂ ಧರಿಸಿ
ಬಂದು ಹುವ್ವಂ ಕೊಯ್ವುತಗ್ಗಣಿಯನಾದರಿಸಿ
ತಂದು ಮಜ್ಜನಕೆರೆದು ಶಿವ ಪೂಜೆಯಂ ಮಾಡಿ
ನಿಂದು ಧೂಪಾರತಿಯನೆತ್ತಿ ನಲವಿಂ ನೋಡಿ
ಉಪಹಾರವೀವುತ ನಮಸ್ಕಾರವಂ ಮಾಡಿ

ಜಪ ತಪ ಧ್ಯಾನ ಪ್ರದಕ್ಷಿಣಂಗಳ ಮಾಡಿ
ಪೂಜಿಸುವ ಪಾರ್ವಂಗೆ ಬಾಯ್ಮಿಡುಕದಿರ್ದಪಿರಿ
ಓಜೆಗೆಟ್ಟಾ ಲುಬ್ಧಕಂಗೆ ಕರುಣಿಸಿದಪಿರಿ
ಎಂದುಂ ಪ್ರದಕ್ಷಿಣಂ ಬಂದವಂ ಬಲ್ಲನೇ
ಎಂದುಂ ನಮಸ್ಕಾರವಂ ಮಾಡಿ ಬಲ್ಲನೇ
ಅದು ಮಾಣ್ಗೆ ಕೈ ಎತ್ತಿ ಪೊಡಮಟ್ಟು ಬಲ್ಲನೇ
ಮುದದಿಂದವಂ ಸ್ತೋತ್ರವಂ ಮಾಡಬಲ್ಲನೇ
ಆವ ಪರಿಯಿಂದೊಲ್ದಿರಭವ ನೀವಾತಂಗೆ
ಹೇವವಿಲ್ಲದ ದುಶ್ಚರಿತ್ರದ ಕಿರಾತಂಗೆ

ಎನೆ ವಿರೂಪಾಕ್ಷನಾ ಮಾತಿಂಗೆ ನಸುನಗುತೆ
ನಿನಗೆ ಪೇಳ್ದಪೆನಗಜೆ ತಿಳಿಯಕೇಳೆಂದೆನುತೆ
ಪಾರ್ವನಗ್ಗವಣಿ ತಿಳಿ ಮನ ಕದಡು ಎಲೆ ಗೌರಿ
ಪಾರ್ವನರ್ಚನೆ ಇಸಿತು ಮನವತಿ ವಿಷಂ ಗೌರಿ
ಅವನಿಟ್ಟ ಭಸಿತವವನಂ ಮುಟ್ಟದೆಲೆ ಗೌರಿ
ಅವನ ರುದ್ರಾಕ್ಷಿಯವನಂ ಪೊರ್ದದೆಲೆ ಗೌರಿ
ಬಾಯಮಂತ್ರಂ ಮನದ ಕ್ಷುದ್ರತಂತ್ರಂ ಸೂಸೆ
ಕಾಯವೇಷಂ ಮನದ ಭವಿತನವದೇಂ ಲೇಸೆ
ಎನ್ನನರ್ಚಿಸಿ ಭವಿಗೆ ಕಯ್ಯಾನುವರೆ ದೇವಿ
ಎನ್ನ ಪೊಗಳುತಲನ್ಯರಂ ಪೊಗಳ್ವರೆ ದೇವಿ
ಸತ್ಯವಿಲ್ಲದ ಪೂಜೆ ಸಪಿನವಪ್ಪುದೆ ಗೌರಿ
ನಿತ್ಯವಲ್ಲದ ಹಾಡು ಸೊಗಸಪ್ಪುದೇ ಗೌರಿ
ಮನವಿಲ್ಲದವ ಮುಟ್ಟಿ ಒಡಿವಡೆದ ತೆರನೆನಗೆ
ಮನವುಳ್ಳವಂ ಬಡಿಯೆ ಪೂಜಿಸಿದ ತೆರನೆನಗೆ
ಅರಿಯೆಯಾ ಗಿರಿಜೆ ಮುನ್ನ ಕಲ್ಲಿಂದಿಟ್ಟುದಂ
ಅರಿಯೆಯಾ ಗಿರಿಜೆ ಮುನ್ನ ಬಾಗಿಲ ಕಾಯ್ದುದಂ
ಅರಿಯಾ ಮಹಾದೇವಿಯುಂಬಲಿಯನುಂಡುದಂ
ಅರಿಯಾ ಮಹಾದೇವಿಯುರುಳುತ್ತ ಪೋದುದಂ
ಎನ್ನ ಭಕ್ತರ್ಗೆ ಬರಿಬೋಧೆಯುಂಟೆಲೆ ಗೌರಿ



ಎನ್ನ ಭಕ್ತರ್ಗೆಯುಪಚಾರಮುಂಟೆಲೆ ಗೌರಿ
ಪೂಜೆಯವರೊಂದು ದೆಸೆ ನಿಷ್ಠೆಯವರೊಂದು ದೆಸೆ
ಓಜೆಯವರೊಂದು ದೆಸೆ ಒಲುಮೆಯವರೊಂದು ದೆಸೆ
ಓದಿನವರೊಂದು ದೆಸೆ ಸಾಧುಳ್ಳರೊಂದು ದೆಸ
ವೇದಿಸುವರೊಂದು ದೆಸೆ ಸಾಧಿಸುವರೊಂದು ದೆಸೆ
ಭಕ್ತಿಯವರೊಂದು ದೆಸೆ ಮುಕ್ತಿಯವರೊಂದು ದೆಸೆ
ಯುಕ್ತಿಯವರೊಂದು ದೆಸೆ ಶಕ್ತಿಯವರೊಂದು ದೆಸೆ
ಕೇಳಾ ಗಿರಿಜೆ ನೀನೆ ಎನ್ನ ಭಕ್ತನನೆಂದೆ
ಕೇಳಾ ಗಿರಿಜೆ ಬೇಡನೆಂದೆನ್ನ ಮುಂದೆಂದೆ
ಬೇಡನವನಿಂದ್ರ ರವಿ ಚಂದ್ರಾದಿ ಪದವಿಯುಂ
ಬೇಡನವನಜಹರಿಗಳೆಳಸಿರ್ಪ ಪದವಿಯುಂ
ಎನ್ನನಲ್ಲದೆ ಹಾಡನೆನ್ನನಲ್ಲದೆ ಬೇಡ
ಎನ್ನನಲ್ಲದೆ ನೋಡನೆನ್ನನಲ್ಲದೆ ಕೂಡ
ಆತಂಗೆಯಾನುಮೆನಗಾತನೇ ಪರಮ ಬಂಧು
ಮಾತೇನುಯವನೆನಗೆ ನೂತನ ಸುಧಾಸಿಂಧು
ಅವನ ಕಯ್ಯೊಳ್ಪೊಲಸು ಮನದೊಳಮೃತಂ ಗೌರಿ
ಅವನ ಮುಖದೊಳು ಜಲಂ ಮನದೊಳಗ್ಗಣಿ ಗೌರಿ
ಅವನ ಮುಂಡೆಯ ಹುವ್ವು ಮನದ ಪರಿಮಳಪೆನಗೆ
ಅವನ ಕಾಲಾಟವತಿ ನೇಹದರ್ಚನೆಯೆನಗೆ
ಎನ್ನವನೆ ಎಂಬ ಸಲುಗೆಯ ನುಡಿಯೆ ಮಂತ್ರವದು
ಎನ್ನನೇ ಕೂರ್ತು ಮಾಡುವುದು ಶಿವತಂತ್ರವದು
ತೋರಿದಪೆನೊಚ್ಚಿ ಸೈರಿಸು ಎನ್ನ ಭಕ್ತನಂ
ತೋರಿದಪೆನೀಗಳೇ ನೀಂ ಪೊಗಳ್ವ ಪಾರ್ವನಂ

ಎನುತಮಿರಲೇಳನೆಯ ದಿವಸದೊಳ್ಮನವುಕ್ಕಿ
ಮನದೊಳ್ಶಿವ ಬ್ರಾಹ್ಮಣಂ ಕೋಪಮುಮನಿಕ್ಕಿ
ಹರನಿಳಯದೊಳ್ಪೊಲಸು ಮಾಡುವ ಕಿರಾತನಂ
ಅರವರಿಸದಿಂದು ಕೊಲ್ವೆಂ ಮೂರ್ಖ ಬೇಡನಂ
ಎಂದು ಮಸೆಯಿಸಿದನೊಂದಂದದ ಕಠಾರಿಯಂ
ಮಂದಮತಿ ತನ್ನ ಜಡಬುದ್ಧಿಗನುಸಾರಿಯಂ

ಕೊಂಡುಬಂದಲ್ಲಿ ಕಾಳತ್ತಿಶಿಖರವನೇರಿ
ತೊಂಡ ಬೇಡನು ಇಂತು ಮಾಡುವನೆ ಎನುತೇರಿ
ನಡೆತಂದು ದೇವಾಲಯದ ಮುಂದೆ ನಿಲಲಲ್ಲಿ
ಮೃಡನಿತ್ತ ನೆನೆದನದ್ಭುತದುಪಾಯುವನಲ್ಲಿ
ಶಿವಲಿಂಗದೊಳಗೆರಡು ಕಣ್ಗಳಾಕಾರವಂ
ಶಿವನಿರಿಸಿದಂ ಪರಿಕಿಸಲ್ಕೆಂದು ಚಿತ್ತವಂ
ಆಲಿಯೊಂದೊಡೆದಂತೆ ನೆತ್ತರೊಸರುತ್ತಿರಲ್
ಮೆಲ್ಲಮೆಲ್ಲನೆ ಶಿವಬ್ರಾಹ್ಮಣಂ ನಡೆತರಲ್
ಕಾಣುತೆ ನಮಃಶಿವಾಯೆಂತಿದದ್ಭುತಮೆಂದು
ನಾಣದಂಜುತ್ತ ಭಯಗೊಂಡು ತಾ ನೊಂದಂದು
ಅರಸಿಂಗೆ ಕೇಡಿತ್ತೊ ದೇಶಕ್ಕೆ ಪೊಲ್ಲದೋ
ಹರನೆ ಬಲ್ಲಂ ಮಹೋತ್ಪಾತವೇನಪ್ಪುದೋ
ಎಂದು ವಿಪ್ರಂ ನೋಡಲಮ್ಮದೆ ಪ.ಸಂಗುಂದಿ
ಬಂದು ಪಟ್ಟಣಕೆ ಪೇಳ್ದಂ ಕೌತುಕದೊಳೊಂದಿ
ಕೇಳ್ದು ಜನವೆಯ್ತಂದು ಕಾಣುತಲಸಾಧ್ಯವಂ
ತಾಳ್ದು ನೋಡಲ್ಕಂಜಿಯೋಡುತ್ತ ಚೋದ್ಯವಂ
ಅತ್ತಲಾ ಪುರಜನಂ ಪೋಗಿ ತಮ್ಮೂರೊಳಗೆ
ಮತ್ತೆಮತ್ತತಿ ಭಯಂಗೊಳುತಿರಲ್ಮನದೊಳಗೆ

ಇತ್ತಲಾ ಕಣ್ಣಂದನೊಲ್ದು ಬೇಂಟೆಯನಾಡಿ
ಹೊತ್ತ ಹೂ ಮೊಗದಗ್ಗವಣಿಯೋಗರಂಗೂಡಿ
ನಡೆತರುತೆ ಪೊತ್ತು ಪೊಯ್ತೆನ್ನವಂ ಪಸಿದನೋ
ಕಡು ವೇಗದಿಂ ಬಾರನೆಂದು ಕೋಪಿಸುವನೋ
ಎಂದುವಿಲ್ಲದ ಮನಕೆ ಮರುಕವೇಕಪ್ಪುದೋ
ಇಂದು ಮನಕಿಂತಪ್ಪುದೇಕಾಗುತಿಪ್ಪುದೋ
ಪಸಿದಿರ್ದೊಡೇಕೆ ಬಿಟ್ಟಾನೇಕೆ ಬಂದೆನೋ
ಪಶವಿಲ್ಲದೀ ಬೇಂಟೆಯೊಳಗೇಕೆ ಸಂದೆನೋ
ಮೃಗ ಕುಲಂಗಳ್ಮಾಡಿ ಹೆದರಿಸುತಲಿರ್ಪವೋ
ಖಗಕುಲಂಗಳ್ಮಾಡಿಯಂಜಿಸುತಲಿರ್ಪವೋ
ಬರಬರಲ್ಕೆಡದ ಭುಜಕಣ್ಪುಬ್ಬುಗಳ್ಕಿತ್ತೆ



ಬರುತಿರ್ದನುರವಣಿಸಿ ತನ್ನ ಮನಭಯವೆತ್ತೆ
ಚಿಂತಿಸುತೆ ದೂರಿಸುತೆ ಎಂತಿರ್ಪನೋ ಎನುತೆ
ಅಂತಸ್ಥದೊಳು ಬೆದಬೆದಂ ಬೇವುತುಂ ಬರುತೆ

ಬರೆ ಮುಂದೆ ಶಿವಲಿಂಗದೊಂದು ಕಣ್ಣೊಡೆದಿರಲ್
ಪರಿದಿಳಿವ ನೆತ್ತರೋರಂತೆಯೊಸರುತ್ತಿರಲ್
ಕಂಡು ಕಣ್ಗೆಟ್ಟು ಬಾಯ್ಬಿಟ್ಟು ಕಲ್ಮರನಾಗಿ
ಕಂಡು ಮುಂಗೆಟ್ಟು ಮತಿಗೆಟ್ಟು ಬಾಳ್ಪೆಣನಾಗಿ
ಬಿಲ್ಲಂ ಬಿಸುಟು ಕಳೆದು ಮಾಂಸಂಗಳಂ ಚೆಲ್ಲಿ
ತಲ್ಲಣಿಸುತಗ್ಗಣಿಯನುಗುಳಿ ಪೂವಂ ಚೆಲ್ಲಿ
ತಲೆಯುಮಂ ಕಣ್ಣುಮಂ ಹೊಯ್ದುಕೊಳುತೆಯ್ತಂದು
ಎಲೆ ತಂದೆ ಎನ್ನವನೆ ಏನಾದುದೈ ಎಂದು
ಹತ್ತೆ ಸಾರ್ದೈದಿ ಕಣ್ಣೊಡೆದಿರ್ದುದಂ ಕಂಡು
ನೆತ್ತರೋರಂತೊಸರುತಿರ್ಪುದ ಮಿಗೆ ಕಂಡು

ಕೆಟ್ಟೆ ನಾಂ ಕೆಟ್ಟೆ ನಾಂ ಬೆಂದೆ ನಾಂ ಬೆಂದೆ ನಾಂ
ದಿಟ್ಟಿ ಇಂತೇಕಾಯ್ತು ನೊಂದೆ ನಾನಾರಿದೆ ನಾಂ
ಎನ್ನೊಡೆಯನೇಂ ಸೈರಿಸಲಾರ್ಪನೇಯಿವಕೆ
ಮುನ್ನವೇ ಮುಂದುದೋರಿತ್ತು ಪಾಪಿಯ ಮನಕೆ
ಎನ್ನೊಡೆಯ ಕಣ್ಣೊಡೆಯೆ ನೋಡುತಿರಲಾರ್ಪೆನೆ
ಎನ್ನವನ ಸಾರ್ದಿರದ ಆಗಲ್ದಾನೆ ಕೆಟ್ಟೆನೆ
ಪರಮಾಣುವೇಕೆ ಮೇರುವಿನ ಸಖ್ಯಮದೇಕೆ
ಸರಿಸಿ ಏತಕೆ ಮಹಾರ್ಣವದ ಸಖತನವೇಕೆ
ಎನಗೇಕೆ ಸಾರ್ದೆಯಾಂ ಸಾಗಿಸುವೊಡೆನ್ನಳವೆ
ಎನಗೇಕೆಯಾಳ್ತನಂ ಬೆಸ ಕೆಯ್ಯಲೆನ್ನಳವೆ
ಆನೇಕೆ ನೀನೇಕೆ ಪಾಪಿಯೆನಗಪ್ಪುದೇ
ಆನಿರೆ ಮಹಾದೇವ ನಿನಗೆ ಇಂತಪ್ಪುದೇ

ಎಂನಲ್ಲಿ ರಂಗಮಂಟಪದಲ್ಲಿ ಪೊರಳುತುಂ
ಮುಂದುಗೆಟ್ಟಿರಿವುಗೆಟ್ಟಲ್ಲಿಲ್ಲಿ ಪೊರಳುತುಂ
ಎಂತಕ್ಕೆ ಸಂತೈಸಿಕೊಂಡು ಮೆಲ್ಲನೆ ಬಂದು

ಮುಂತೆ ಕುಳ್ಳಿರ್ದು ಮರುಗುತ್ತೆ ಬಳಲುತ್ತೆಂದು
ಎನ್ನಯ್ಯ ಏನಾದುದೆನಗೆ ಹೇಳೈತಂದೆ
ಎನ್ನಯ್ಯ ಕಣ್ಣಾವೇದನೆ ಪಿರಿದಲಾ ತಂದೆ
ಮೃಗವೊರಿಸಿಕೊಳಲೊತ್ತಿ ಕೋಡವೊನೆ ನೆಟ್ಟಿತೋ
ಅಗಲ್ದ ಪಾಪಿಯನೆನ್ನನಿಂತಿರಿದು ಸುಟ್ಟುದೋ
ಎಂದುಟ್ಟ ಸೀರೆಯಿಂದೂದುತ್ತೆಯೊತ್ತುತ್ತೆ
ಕೆಂದಳಿರ್ಗಳಿಂದೊತ್ತಿ ನೋಡುತ್ತೆ ಬಾಡುತ್ತೆ

ಹಾ ಕಂಡೆನೊಂದುಪಾಯವನರಿದೆನಿದಕೆಂದು
ಈ ಕಣ್ಗೆ ಎನ್ನ ಕಣ್ಣಿತ್ತು ನೋಡುವೆನೆಂದು
ಆಗದೊಡೆ ತಲೆಯನರಿದೊಪ್ಪಿಸುವೆನಿದಕೆಂದು
ಬೇಗದಿಂದಸುವನೊಪ್ಪಿಸುವೆನೆನುತಂ ಸಿಂದು
ಬೋಳೆಯಂಬಂ ತೆಗೆದು ಮನದಂದು ಶಂಕಿಸದೆ
ಕಾಳತ್ತಿಯರಸನೇ ನೋಡೆಂದು ಚಿಂತಿಸದೆ
ಶಂಕಿಸದೆ ಹೆಡ್ಡಯಿಸದರವರಿಸದೊಳಗೊತ್ತಿ
ಭೋಂಕೆನಲ್ಕೆಂಟಿಯೊಡೆದಿರ್ದ ಕಣ್ಣೊಳಗೊತ್ತಿ
ನೋಡೆ ತೊಳತೊಳಗಿ ಥಳಥಳಿಸಿ ಬೆಳಬೆಳಗುತಿತೆ
ನೋಡಿ ಕಣ್ಣಂದನಾನಂದಮಯನಾಗುತಿರೆ
ತೊಟ್ಟನಾ ಲಿಂಗದೊಳ್ಮತ್ತೊಂದು ಕಣ್ಣೊಸರಿ
ಕಟ್ಟುಳ್ಳಿರೀಕ್ಷಿಸುತೆ ಕಲಿಯಾಗಿ ತಾನರರೆ
ಇನ್ನಂಜೆನಿನ್ನಂಜೆನಿನ್ನೊಂದು ಕಣ್ಣುಂಟು
ಎನ್ನವನೆ ಎನ್ನವನೆ ಬಳಿಕ ನೀನೆನಗುಂಟು
ಎಂದೆನುತೆ ಸದ್ಭಕ್ತಿ ಕುಶಲನಾನಂದದಿಂ
ಇಂದು ಶೇಖರನೊಡೆದ ಕಣ್ಣೋಯದಂದದಿಂ
ಉಂಗುಟದೊಳೊತ್ತಿ ಕಣ್ಗುರುಹ ಮಾಡುತ್ತಲ್ಲಿ
ಮುಂಗುಡಿಸಿ ತನ್ನ ಮತ್ತೊಂದು ಕಣ್ದೆಗೆದಲ್ಲಿ
ಗಣಪದವಿಯಂ ಬಯಸಿಯೊಲ್ದು ಕಣ್ಣಿಡುವಂತೆ
ತ್ರಿಣಯನಂ ಭಕ್ತಿಯಿಂ ಕಣ್ದೆರದು ನೋಳ್ಪಂತೆ
ತಂದುಂಗುಟದ ಕುರುಹಿನಿಂದಲ್ಲಿ ಕಣ್ಗೊಳಿಸಿ
ಇಂದುಧರನಿನ್ನಿರಲ್ಬಾರದೆನುತಂ ಕುರಿಸಿ



ಶಿವಲಿಂಗದಿಂ ಶಿವನ ಹಸ್ತವುದ್ಭವಿಸುತ್ತೆ
ಶಿವನಲ್ಲಿ ಕಣ್ಣಪ್ಪನೆನೆವ ಕೈವಿಡಿದೆತ್ತೆ

ಪೂಮಳೆಗಳೆರಗಿ ದುಂದುಭಿ ಕುಲಂಗಳ್ಮೊಳಗೆ
ಕಾಮಹರ ದಶಭುಜಂ ಪಂಚವದನಂ ತೊಳಗೆ
ನಂದೀಶ ವೀರಭದ್ರಾದಿ ಗಣಸಮಿತಿ ಬರೆ
ಇಂದ್ರಾದಿ ದೇವರ್ಕಳೆಲ್ಲರುಂ ಬರುತಮಿರೆ
ಕಂಡಾ ಗಿರಿಜೆ ಎನ್ನ ನೇಹದಸುಮಪ್ಪನಂ
ಇಂತಪ್ಪ ಭಕ್ತನಂ ಕಂಡು ಬಲ್ಲಾ ಗಿರಿಜೆ
ಇಂತಪ್ಪ ಭಕ್ತನಂ ಕೇಳ್ದು ಬಲ್ಲಾ ಗಿರಿಜೆ
ಎಂದು ಕಣ್ಣಪ್ಪನಂ ನೋಡಿ ಕೊಂಡಾಡುತುಂ
ಸಂದಣಿಪ ಪುಳಕದಿಂದಪ್ಪಿ ಕೊಂಡಾಡುತುಂ
ಭಾಪುರೇ ಕಣ್ಣಪ್ಪ ಪೂತುರೇ ಕಣ್ಣಪ್ಪ
ಭಾಪು ಮಝುಭಾಪು ಮಝುಪೂತುರೇ ಕಣ್ಣಪ್ಪ
ಎಲ್ಲಿಗೇ ಕಣ್ಣನಾನೀವೆನಂತದ ಮಾಣ್ದು
ಇಲ್ಲಿ ಇಂತೆನಗೆ ಕಣ್ಣಿತ್ತೆ ಭಕ್ತಿಗೆ ಪೂಣ್ದು
ಎನಗೆ ಕಣ್ಣುಂ ನೀನೆ ಎನಗೆ ಪುಣ್ಯಂ ನೀನೆ
ಎನಗೆ ಪುತ್ರಂ ನೀನೆ ಎನಗೆ ಮಿತ್ರಂ ನೀನೆ
ನಿನ್ನ ಪರಿಸಣದ ಪರಿಸಣವೆ ನೋಡಿತ್ತೆನಗೆ
ನಿನ್ನ ಮೊಗದಗ್ಗವಣಿಯೋ ಅಗ್ಗವಣಿ ಎನಗೆ
ನಡೆ ವಿಮಾನವನೇರಿಕೊಳ್ಳು ಕಣ್ಣಂದ ಎನೆ
ನುಡಿದು ಬಿನ್ನೈಸಿದಂ ಸುರರೆಲ್ಲ ಚೋದ್ಯಮೆನೆ
ದೇವ ಬೆಸಸಲ್ವೇಳ್ಕು ತನುವೆರಸಿ ಬರ್ಪೆನೇ
ಭಾವಿಪೊಡೆ ಈ ದೇಹವೆರಸಿ ಬರಲಾರ್ಪೆನೇ
ಎನಲೊಂದು ದೇಹವಿಲ್ಲಿಗೆ ಮೆರೆಯಿತಿರ್ಕೆಂದು
ಮನವೊಸೆವುತೊಂದು ನಿರ್ಮಳ ದೇಹಮಂ ತಂದು
ಕಣ್ಣಪ್ಪನಂ ಪೊಗಿಸಿ ಸರ್ವ ಸಂಭ್ರಮದಿಂದೆ
ಕಣ್ಣಿತ್ತನಂ ವಿಮಾನದೊಳಿರಿಸಿ ನಲವಿಂದೆ
ನೆಗೆದನೀಶ್ವರನಂದು ಕೈಲಾಸಪುರವತ್ತ

ಬಗೆಯೊಳಾನಂದ ಪುಳಕಂಗಳಂ ಧರಿಸುತ್ತ
ಬಂದು ಕೈಲಾಸಮಂ ಪೊಕ್ಕು ಸಂತೋಷದಿಂ
ನಿಂದು ಭದ್ರಾಸನದೊಳೊಪ್ಪುತ ವಿಳಾಸದಿಂ
ಕಣ್ಣಪ್ಪನಂ ಕರೆದು ಗಣಪದವಿಯಂ ಕೊಟ್ಟು
ಬಣ್ಣವಣ್ಣಿಗೆಯ ಪೊಸ ಬೀಳುಡೆಗಳಂ ಕೊಟ್ಟು
ಭಕ್ತರ ಸುಖಂ ತನ್ನ ಸುಖವೆನಿಸುವೀಶ್ವರಂ
ಭಕ್ತರ ಮುಖಂ ತನ್ನ ಮುಖವೆನಿಸುವೀಶ್ವರಂ
ಭಕ್ತ ಜೀವಂ ತನ್ನ ಜೀವವೆನಿಸುವ ಶಿವಂ
ಭಕ್ತಕಾಯಂ ತನ್ನ ಕಾಯವೆನಿಸುವ ಶಿವಂ
ತನ್ನ ಗಣಸಂಕುಳಕೆ ಹೇಳುತುಂ ಹಿಗ್ಗುತುಂ
ತನ್ನಾಪ್ತ ಗಣದೊಳಗೆ ಸಲಿಸಿ ಕೊಂಡಾಡುತುಂ
ದೇವಗಣ ಸಂಕುಳದೊಳಪ್ರತಿಮನೊಪ್ಪಿದಂ
ದೇವಗಣ ನಿವಹದೊಳಗಿಂದುಧರನೊಪ್ಪಿದಂ
ಕಮಳನಯನಾಕ್ಷಿಪೂಜಿತಪಾದನೊಪ್ಪಿದಂ
ಕಮಲಭವ ಪಂಚಶಿರಚ್ಛೇದನೊಪ್ಪಿದಂ
ಅಮಮ ಪುರಮಥನನಘವನದಾವನೊಪ್ಪಿದಂ
ವಿಮಲಚಿದ್ಘನನಧ್ವರಧ್ವಂಸಿಯೊಪ್ಪಿದಂ
ಅಮಮ ತ್ರೈಲೋಕ್ಯರಕ್ಷಾದಕ್ಷನೊಪ್ಪಿದಂ
ಅಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂದ॥ ಮೂರುಂ ಕಣ್ಣಿಂದವರಿಂ ।
ಬೇರೊಲ್ದಿನಗಭವಭಕ್ತಿನಯನಮನಿತ್ತು ॥
ಮೂರಾದಾಕಣ್ಣಪ್ಪನನಿವನೆ ।
ಕರುಣಿಪುದು ಹಂಪೆಯ ವಿರೂಪಾಕ್ಷಾ ॥

ಸಮಾಪ್ತ.

---



# ಆನಾಯನಾರ ಭಕ್ತರ ಮಹಾತ್ಮೆ.

ಂದ ॥ ಆನಾಯನಾರನಪ್ರತಿ ।
ಮಾನಂದಾಶ್ಚರ್ಯ ಸರ್ವಗುಣಯುತಭಕ್ತ ॥
ಧ್ಯಾನಂ ಪ್ರತ್ಯಕ್ಷಂಮಿಗೆ ।
ತಾನೊಲವಿಂ ಪೊರೆದ ನಮ್ಮ ಹಂಪೆಯರಾಯಂ ॥

## ರಗಳೆ.

ಶ್ರೀವಸುಮತೀಮಣಿಯೆನಿಪ ಚೋಳನಾಡೊಳಗೆ
ಭಾವಿಸಲ್ಕಂಗಳವೆನಿಪ್ಪ ಪುರವರದೊಳಗೆ
ಆನೈನಾರೆಂಬ ಭಕ್ತನಿರ್ಪಂ ನೋಡ    ಆನಾಯನಾರ ಭಕ್ತ.
ಏನೆಂಬೆನಾತನಿರವತಿ ವಿಚಿತ್ರಂ ನೋಡ,
ಕಾರಣಕೆ ಕಾರಣಿಕನಾಗಿ ತಾ ಪುಟ್ಟಿದಂ
ಮಾರಾರಿ ಬೆಸಸೆ ಪಂಚಾಕ್ಷರಿಗೆ ಪುಟ್ಟಿದಂ
ಪುಟ್ಟಿದಂದಿಂದೆ ಪಂಚಾಕ್ಷರಿ ಜಪಂ ತನಗೆ
ದಟ್ಟಡಿ ಇಡುತ್ತಿ ಪಂಚಾಕ್ಷರಿ ಜಪಂ ತನಗೆ
ಬಳೆವಲ್ಲಿ ಇಂತಿವೆ ಬಳೆಯಿಸಿದವಾತನಂ
ಸುಳಿವಲ್ಲಿ ಪಂಚಾಕ್ಷರಿಯೆ ಸುಳಿಸಿತಾತನಂ
ಇಂತು ಪಂಚಾಕ್ಷರಿಯೆ ಬಾಯ್ವೆಣ್ಣೆ ಎನೆ ಬಳೆದು
ಸಂತತಂ ಪಂಚಾಕ್ಷರಿಯೆ ನಾಲಿಗೆಗೆ. ಸವಿದು,
ಉದಯ ಸಮಯದೊಳೆದ್ದು ದೇವಾಲಯಕೆ ಬಂದು
ಮದನಾರಿ ಶರಣೆನುತ ಕೈಮುಗಿವುತುಂ ನಿಂದು
ಅನವರತಪ್ಪೈದಕ್ಷರವನೆಯುಚ್ಚರಿಸುತುಂ

ನೆನೆವುತಿರಲೊಂದುಪಾಯವನಲ್ಲಿ ನೋಡುತುಂ
ಇರೆ ಶಿವಂ ಪ್ರೇರಿಸಿದನಾತನ ಮನಕ್ಕೆಂದು
ಪುರದ ಗೋವೃಂದಮಂ ಕಾವುದೇ ಲೇಸೆಂದು
ನಿಶ್ಚೈಸಿ. ನೆನೆಯುತನುನಯದಿಂದೆ ಪೊರಮಟ್ಟು,

ನಿಶ್ಚಿಂತ ಚಿತ್ತನಾನಂದಮಂ ಮುಂತಿಟ್ಟು
ಒಂದೊಂದು ಗೋಜನ್ಮದಾ ಋಷಿಗಳೆಲ್ಲರುಂ
ಬಂದೂರ ಜೀವದನವಾಗಿರಲ್ಕೆಲ್ಲರುಂ
ಊರದನವೆಲ್ಲವುಂ ತಾನೊಂದುಗೂಡುತುಂ
ದೂರಕ್ಕೆ ಪೊರಮಟ್ಟುಕೊಂಡು ಬಂದಾಡುತುಂ
ಪರಿದು ಪೇೞೆಂದು ಹುಲ್ಲುಳ್ಳ ಹೊಲದೊಳ್ಹಾಡಿದು
ಪರಿಪರಿಯ ಹುಲ್ಲುದಂಡೆಗಳ ನಲವಿಂ ತಳೆದು
ತಂಪ ಕಟ್ಟ್ಪೇಗರವನುಂಡು ಕಯ್ಯ್ಯ ತೊಳೆದು
ಬಂದೊಂದು ನೆಳಲ ಹಸಲೆಯ ಮೇಲೆ ನಲಿನಲಿದು
ತಪ್ಪುಗಾಲಿಕ್ಕಿ ತ್ರಿಭಂಗಿಯಿಂದಂ ನಿಂದು
ಒಪ್ಪುತಿರ್ಪೊಂದು ಪೊಸ ಕೊಳಲಂ ಕೊಳುತ್ತಂದು
ಪಂಚಾಕ್ಷರಿಯ ಫಲವನೊಪ್ಪಿ ಸವಿದಂದದಿಂ
ಪಂಚವಕ್ತ್ರನ ಕಿವಿಗೆ ಸವಿಯನೀವಂದದಿಂ
ಅಧರದೊಳ್ತಂದಿಳುಪಿದಂ ಕೊಳಲನೊಪ್ಪದಿಂ
ಮಧುರಾಕ್ಷರಂಗಳಂ ಸವಿವ ಸಮರಾಗದಿಂ
ಹೆಲ್ಲವಣೆ ಹೆಕ್ಕಳಂಗೊಂಡು ವನದೊಳ್ತೀವೆ
ಎಲ್ಲ ಮೃಗಂಗಳುಂ ಮೇಯದೆ. ಕಿವಿಯನೀವೆ
ಭಕ್ತಿಯಿಂ ಮರೆವಡೆದುತಲೆ ಸುಗತಿಗಳುವಾಗೆ
ಯುಕ್ತಿಯಿಂ ಭರತಶಾಸ್ತ್ರಕ್ಕೆ ದಿಕ್ಕುಗಳಾಗೆ
ಹೊಳೆ ವಹಣೆಯೊಳ್ಪರಸಿ ವಹಣೆ ತಿರುವಿನೊಳಿಳಿಯೆ
ಸುಳಿಸುಳಿದು ತಿರುಪು ಪೊಂಪುಳಿಯೊಳೆಡಗುತೆ ಹೊಳೆಯೆ
ಬಣಿತೆ ಗಮಕಮನುಗುಳೆ ಗಮಕವರಿದಂತೊಡರೆ
ಅಣಕ ನಯದೊಳ್ಮೊಳೆಯೆ ನಯವಿಂಪಿನೊಳಗಡರೆ
ಅವು ಬೆಡಂಗಂ ಬೆರೆಯೆ ಬೆಡಗು ಕಾಲಂ ಕೊನರೆ
ನವರೀತಿಯೊಡ್ಡಯಿಸೆಯೊಡ್ಡವಣೆ ಮೇಲಡರೆ
ಪೊಸದೇಸಿ ಪಜ್ಜಳಿಸೆ ಪಜ್ಜಳಂ ಪಲ್ಲವಿಸೆ
ಮಿಸುಕುತಿರಲನುಜಾಯಿ ಹೂಂಕಾರ ಒತ್ತರಿಸೆ
ನುಣ್ಪು ನುಸುಳದೆ ಪೊಣ್ಮೆ ಕಮ್ಮವಣೆಗೆಡೆಗುಡಲು
ತಣ್ಪುಸೊಂಪಿನೊಳೊಂದಿ ಕಾಳಾಸಕೆಡೆಗುಡಲು



ಕಾಂತಿ ಕವಲೇೞ ಸರಿಯೊಳ್ಪಂಜಳಮನುಗುಳೆ
ಶಾಂತಿರಾಗಂ ರಸದ ಸೋಪಾನದೊಳ್ನೆಗೞೆ
ರಾಗ ರಸದೊಳಗೆ ಪಂಚಾಕ್ಷರಿಗಳೇಳುತಿರೆ
ನಾಗಾಭರಣನೆಲ್ಲವಂ ಒರೆದು ಕೇಳುತಿರೆ
ವದನದೊಳ್ವೇಣುವಿನೊಳ್ಮೈದಕ್ಕರಂಗಳಿರೆ
ಹೃದಯದೊಳಗುಸುರೊಳಗೆ ಶಂಕರಂ ಸಿಲ್ಕುತಿರೆ
ಪಂಚಮುಖದೊಳಗೆಲ್ಲ ಕೊಳಲದನಿ ತೊಳಗುತಿರೆ
ಪಂಚಾಕ್ಷರಿಗೆ ನಾದ ಮೂರ್ತಿ ಮಿಗೆ ಸೋಲುತಿರೆ

ಬಾರಿಸುವ ಕೊಳಲ ದನಿಗೆಯ್ತಂದು ಗೋಕುಲಂ
ಮೇರೆಗೆಟ್ಟಿರುವುಗೆಟ್ಟುಂ ಸಲೆ ನಿರಾಕುಳಂ
ಎಳಲ್ದು ಕಿವಿ ಮುಗಿದ ಕಣ್ಣೆತ್ತಿದ ಮುಖಂ ಮೆರೆಯೆ
ಇಳಿದ ಕಟವಾಯ ಹೊಸ ನೊರೆ ಗರುಂಕೆಗಳೆಸೆಯೆ
ಜೊಮ್ಮಿಸುತೆ ಜೋಲುತ್ತೆಯೊಂದನೊಂದಂ ಸೆಮ್ಮಿ
ಸುಮ್ಮಾನವೇೞ ಮೆಯ್ಮಿಮಿೞ ಸುಖಮಂ ಹೊಮ್ಮಿ
ಆನಾಯನಾರ ಹೆಗಲೊಳ್ಮೊಗವನಿಟ್ಟು ಕೆಲ
ಆನಾಯನಾರ ತೋಳೊಳ್ಮೊಗವನಿಟ್ಟು ಕೆಲ
ಇಂತು ಗೋಕುಲವೆಲ್ಲ ಮರೆದು ಕೇಳುತ್ತಮಿರೆ
ಮುಂತೆ ಬಗೆಗೆಟ್ಟು ಪಗೆನೆಟ್ಟು ಮೃಗನಿಚಯಮಿರೆ
ಪುಲಿಯ ಕೊರಲೊಳು ಕೊಟ್ಟನಿಟ್ಟು ಕಣ್ಣಂ ಮುಚ್ಚಿ
ನಲಿದು ಕೇಳ್ಪವು ಮರೆದು ಪುಲ್ಲೆದನಿಯಂ ಮೆಚ್ಚಿ
ಮುಂಗುಲಿಯ ಮೇಲೆ ಹೆಡೆಯಿಟ್ಟು ಕೇಳ್ಪಹಿಗಳಿಂ
ಸಂಗಡಿಸುವಹಿಯ ಹೆಡೆಗೆಡೆಗುಡುವ ಶಿಖಿಗಳಿಂ
ಗಿಳಿಯಂಚೆ ಕೋಕಿಲೆಗಳೆಳಸಿ ಕೇಳ್ಪವು ನೋಡ
ಅಳಿಕುಳಂ ತರುಗಿರಿಗಳೆಳಸಿ ಕೇಳ್ಪವು ನೋಡ

ಇಂತು ಸಚರಾಚರಂಗಳ್ಮರೆಯೆ ಕೊಳಲೂದಿ
ಸಂತತಂ ಪುಳಕದಿಂ ಪಲ್ಲವಿಸಿ ಕೊಳಲೂದಿ
ಬಯ್ಗಾಗೆ ಗೋವೆಲ್ಲವುಂ ಕೂಡಿ ಹೊಡೆತಂದು
ನೆಯ್ಗರೆದು ಭಕ್ತಿ ತೋರದ ತೆರದೆ ನಡೆತಂದು

ತನ್ನ ಗೋವಂ ಕಾವ ಇದಿರ ಗೋವಂ ಸೋವ
ಉನ್ನತ ಯಶಂ ಜಿತೇಂದ್ರಿಯನಾಗುತುಂ ಕಾವ
ಅವರಿಚ್ಛೆ ತಾನಲ್ಲ ತನ್ನಿಚ್ಛೆ ಗೋವಾಗಿ
ಭವನಿಚ್ಛೆ ತಾನಾಗಿ ತನ್ನಿಚ್ಛೆ ಭವನಾಗಿ
ಪಂಚಾಕ್ಷರಿಗಳಲ್ಲಿ ತೀವಿ ಕೊಳಲೂದುತುಂ,
ಪಂಚವದನಂಗಳೊಳ್ಪ್ರಿಕ್ಕು ಕೊಳಲೂದುತುಂ

ಈ ತೆರಂ ಪಲವು ಸಂವತ್ಸರಂ ನಡೆಯುತಿರೆ
ಭೂತಳದೊಳೇಕಾಂತ ಭಕ್ತಿ ದಳವೇರುತಿರೆ
ಈ ಶರಣನಂ ಮೆರೆಯಬೇಕೆಂದು ಶಂಕರಂ
ಭಾಸುರಂ ಖಗೆ ಬಂದನಾ ವನಕೆ ಶಶಿಧರಂ
ಬಂದೊಂದು ಪೂತ ಕಕ್ಕೆಯ ಮೇಲೆ ನಿಂದಿರಲು
ನಿಂದು ನಲವಿಂ ಸ್ಥಾಣು ತರುವಿನೊಳಗೊಪ್ಪಿರಲು

ಆನಾಯನಾರೆತ್ತಲೂರಿಂದೆ ಪೊರಮಟ್ಟು
ನಾನಾ ವಿನೋದಂಗಳಂ, ಶಿವಾರ್ಚನೆಗಿಟ್ಟು
ಎಂದಿನಂದದೆ ಗೋಕುಲಂಗಳಂ, ಬಳಿಗೊಂಡು
ಬಂದೊಂದು ನೆಳಲೊಳಗೆ ನಿಂದು ಕೊಳಲಂ ಕೊಂಡು
ಪಂಚಾಕ್ಷರಿಯನೂದಲನುವಾಗುತ್ತಿರಲು

ಪಂಚಮುಖನಲ್ಲಿ ಕಕ್ಕೆಯ ಮರದ ಮೇಲಿರಲು
ಕಕ್ಕೆ ಸದ್ಭಕ್ತನ ಸುಖಕ್ಕೆ ನೆಲೆಯಾಗಿರಲು
ಕಕ್ಕೆ ಭಕ್ತನ ಸಮ್ಮುಖಕ್ಕೆ ಶಿವನಂತೆ ನಿಲೆ
ಕಕ್ಕೆ ರುದ್ರನ ರೂಪವ, ಕಕ್ಕೆ ಸಮನಾಗಿರಲು,
ಕಕ್ಕೆ ಶರ್ವನ ನಾಟಕಕ್ಕೆ ನಂಟಾಗಿರಲು.
ಹೊನ್ನತರು ಪೂತಂತೆ ಹೊಂಬಣ್ಣವಾಗಿರಲು,
ತನ್ನ ಕಣ್ಣುಂ ಮನಕ್ಕಂ ಬೆಳಬೆಳಗುತಿರಲು
ಕಂಡು ಕುಣಿದಾಡುತುಂ ಕೊಳಲೂದುತುಂ ಬರುತೆ
ಹಿಂಡೇಕ್ದ ಪುಳಕಂಗಳೊಟ್ಟಿಲೇರಲ್ಬರುತೆ



ಪರಮ ಪಂಚಾಕ್ಷರಂಗಳನೂದುತುಂ ಬರುತೆ
ಹರನ ಗಣಪದವಿಯಂ ಕೊಳಲೂದುತುಂ ಬರುತೆ,
ಶಿವನ ಸದ್ಭಕ್ತಿಯಂ ಕೊಳಲೂದುತುಂ ಬರುತೆ
ಶಿವನ ಸರ್ವಸ್ವಮಂ ಕೊಳಲೂದುತುಂ ಬರುತೆ
ಇರ್ದ ಮರನಂ ಶಿವಂ ಬೆರಸು ಹೃದಯದೊಳಿರಿಸಿ
ಸಾರ್ದು ಕಣ್ಮುಚ್ಚಿ ಕರಣಂಗಳಂ ಸಂವರಿಸಿ
ಶಿವ ಸ್ವರೂಪಂ ತನ್ನ ಹೃತ್ಕಮಲದೊಳಗಿರಿಸಿ
ಭವನ ಮೂರ್ತಿಯನಪ್ಪಿ ಮಿಕ್ಕು ಚಿತ್ತಂ ಬೆರಸಿ
ಮರದ ಮುಂಡದ್ಧಮುಂ ತಿಗಟಮುಂ ಪರಿದಾಡಿ
ಹರಿಸದಿಂ ಪಂಚಾಕ್ಷರಿಯನೂದಿ ಕೂಗಾಡಿ
ತಾನೆ ಕೊಳಲೂದಿ ತಾನೇ ಹಿಗ್ಗಿ ಹೆಚ್ಚುತುಂ
ನಾನಾ ರಸಂಗಳಂ ಸವಿಸವಿದು ಪೊಂಗುತುಂ
ಹೊರಗನಾಲಿಸದೆಯರಿದೊಲಿದಂತೆಯಾಡುತುಂ
ತೆರಹುಗಾಣದೆ ಜಾನಿಸುತ್ತೆ ಕೊಳಲೂದುತುಂ
ಜಾನಿಸುವ ಸುಖದೊಳೆಚ್ಚರನೊಲ್ಲದಾಡುತುಂ
ಜಾನಿಸುವ ಸುಖಕೆ ಕಣ್ಮುಚ್ಚಿ ಮರೆದಾಡುತುಂ

ಇರಲಾತನೊಳಗಿರ್ದ ತನ್ನ ಮೂರ್ತಿಯ ನೆನೆದು
ಹರನಕ್ಕರಿಂದಲೊಕರುಷಿಸಲ್ಕೆಡೆತಂದು
ಧ್ಯಾನಿಸುವ ಶಿವ ಮೂರ್ತಿಯೊಳಗೆ ಬಂದೊಂದಿರಲು
ಧ್ಯಾನವಳಿದೊಳಗರಸುತಲ್ಲಿಲ್ಲದಿರುತಿರಲು
ಕಣ್ದೆರೆಯೆ ಮರನಳಿದು ಶಿವನೊಳಿದು ಮುಂದೆ ನಿಲೆ

ನುಣ್ದನಿಗಳಿಂದಿತ್ತ ಬಾ ಮಗನೆನುತ್ತೆ ಸಲೆ
ಮನವಾರೆ ನೆನೆವಗೆಂ ಕಣ್ಣಾರೆ ಕಾಣುತುಂ
ತನುವಾರೆ ಸೋಂಕಿ ಕಯ್ಯಾರೆ ಬಿಗಿದಪ್ಪುತುಂ
ದೇವ ಇಂತೀ ಅಡವಿಗೇಕೆ ಬಂದ್ಯೆ ತಂದೆ
ದೇವ ಹುಲಿ ಕರಡಿ ಮೊದಲಾದವುಂಟಿಲೆ ತಂದೆ
ಕೈಲಾಸಮಂ ಬಿಟ್ಟು ಕರುಣಮಂ ಮುಂದಿಟ್ಟು
ಶೈಲಜೆಯನಿರಿಸಿ ತನುವಂ ಮನಕ್ಕೆಡೆಗೊಟ್ಟು
ಎನಗೋಸುಗಂ ಮರದ ಮೇಲೆ ನಿಂದ್ಯೆ ತಂದೆ
ಎನಗೋಸುಗಂ ವಿಂಧ್ಯದೊಳಗೆ ಬಂದ್ಯೆ ತಂದೆ
ನಿನಗೆಸಿತವಸ್ತ್ರಿಯಂ ಮಾಡಿತೆನ್ನಯ ಭಕ್ತಿ -

ನಿನಗಿನಿತು ಚಿಟ್ಟಿತಂ ಮಾಡಿತೆನ್ನಯ ಭಕ್ತಿ
ಎಂದು ಶಂಕರನ ಪದಯುಗಳವಂ ಪಿಡಿದಿರಲ್
ಇಂದುಧರನೆತ್ತಿ ತಕ್ಕೈಸಿ ಹಿಗ್ಗುತ್ತಿರಲ್
ಪೂಮಳೆಗಳೆರಗಿದವು ದುಂದುಭಿಗಳೊಣ್ಮಿದವು
ಸೋಮಧರನೆಂಬ ಬಿರುದಿನ ಕಹಳೆ ಮೊಳಗಿದವು
ಆಗಳಾ ಜೀವದನಜನ್ಮಂಗಳೆಲ್ಲುಳಿದು
ಬೇಗದಿಂ ಋಷಿವೇಷಮಂ ತನತನಗೆ ತಳೆದು
ವೇದವರಿಯದ ನಿಮ್ಮನರಿದೆವೈ ಭಕ್ತನಿಂ
ನಾದವರಿಯದ ನಿಮ್ಮನೆಯ್ದಿದೆವು ಭಕ್ತನಿಂ
ಗೋಜನ್ಮಮಂ ಕಳೆದೆವೀ ನಿಮ್ಮ ಭಕ್ತನಿಂ
ಗೋಜಾತಮಂ ಮಾಣ್ದುದಭವ ನಿಜ ಭಕ್ತನಿಂ
ಎಂದುರೆ ಪೊಗಳ್ವ ಋಷಿಜನಕ್ಕಭಯಮಂ ಕೊಟ್ಟು
ಮುಂದೆ ನಿಂದಾನಾಯನಾರ್ಗೆ ವರುಷಂ ಬಟ್ಟು
ಇಂತೆಲ್ಲವಂ ಮರೆದು ಕೊಳಲೂದಿದವರುಂಟೆ
ಸಂತತಂ ಪಂಚಾಕ್ಷರಿಯ ಸವಿದರಿಂತುಂಟೆ
ಮರದ ಮೇಲಾಸಿರಲ್ಕರಿದು ಪೊಲ್ದವರುಂಟೆ
ತರುವಿನೊಳಗಿರ್ದೆನ್ನನರಿದು ನೆನೆದವರುಂಟೆ
ನೋಡಯ್ಯ ನಂದೀಶ ನೋಡಯ್ಯ ಭಕ್ತನಂ
ನೋಡೆಂದು ತೋರುತ್ತೆ ಸದ್ಭಕ್ತಿಯುಕ್ತನಂ
ಸುರುಚಿರ ವಿಮಾನದೊಳಗಿರಿಸುತುಂ ನಡೆತಂದು
ಪುರಹರಂ ಕೈಲಾಸದೊಳಗೆ ತಾಂ ಪುಗುತಂದು
ತಾರಾದ್ರಿ ಶಿಖರದಮನೆಯನೊಲವಿಂ ಪೊಕ್ಕು
ಚಾರುತರ ರತ್ನ ಸಿಂಹಾಸನದೊಳಂ ಪೊಕ್ಕು
ಮದನಾರಿ ಕುಳ್ಳಿರ್ದು ಪಾರ್ವತಿಗೆ ತೋರುತುಂ
ಸದಮಳ ಗಣಂಗಳ್ಗೆ ಹರುಷದಿಂ ಬೆಸಸುತುಂ
ಕೊಳದೊಳಗೆ ಸಿಲ್ಕಿಕೊಂಡಿರ್ದೆನಾನಿನ್ನೆಗಂ
ಕೊಳಲವನಿಗೆಳಸಿಕೊಂಡಿರ್ದೆನಾನಿನ್ನೆಗಂ
ಹೊಸಪರಿಯ ಭಕ್ತಿಯಂ ಕಂಡೆನಾನೆಂದೆನುತೆ
ಹಸನಾದ ಸುಖಮಂ ಕಂಡೆನೆಂದೆನುತೆ
ಆನಾಯನಾರ್ಗೆ ಗಣಪದವಿಯಂ ಸಲಿಸುತುಂ
ನಾನಾಗಣ ವ್ರಾತದೊಡನೆ ಕೂಡಿಸುತುಂ
ನೆನೆವರ ನಿಧಾನನೊಪ್ಪಿದನೀಶನೊಪ್ಪಿದಂ.



ನೆನೆವರ ಮನೋರಥ ಸುಧಾವರುಷನೊಪ್ಪಿದಂ
ನೋಳ್ಪ ಭಕ್ತರ ಕಣ್ಣಪುಣ್ಯ ನಿಧಿಯೊಪ್ಪಿದಂ,
ಬೇಳ್ಪ ಶರಣರ ಸುಖದ ಸುರಧೇನುವೊಪ್ಪಿದಂ
ಅರ್ಚಿಸುವ ಸದ್ಭಕ್ತರಾಯು ಸಿರಿಯೊಪ್ಪಿದಂ
ಮಚ್ಚಿ ಮರೆಯದ ಶರಣರಚ್ಚಸುಖನೊಪ್ಪಿದಂ
ಭಕ್ತ ಜನವನ ಕಮಲ ವಿಮಲಾರ್ಕನೊಪ್ಪಿದಂ
ಭಕ್ತ ನಿಧಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ನಾನಾ ದೇವಕಿರೀಟವಿ । ತಾನಪದಾಂಭೋಜ
ನೊಲ್ದು ಸದ್ಭಕ್ತಿಯ ನೆನಗಾ । ನಾಯನಂಸು
ತಾನೆಂ। ದಾನತ ನಿಧಿಕುಡುಗೆ ಹಂಪೆಯ ವಿರೂಪಾಕ್ಷಂ ॥

**ಸಮಾಪ್ತ.**

---

## ಚನ್ನಯ್ಯಗಳ ಮಹಾತ್ಮೆ.

ಸನ್ನುತಾಗಮನಿಕರ ತಲ್ಲಣಂಗೊಳೆ ತನ್ನ । ಜಿಹ್ವೆಯೊಳು ಸವಿದು ಪನ್ನಂಗಧರಗಿತ್ತ ಚನ್ನಯ್ಯ ನೆನ್ನಯ್ಯನೆಂಬೆ ॥

ವೃತ್ತಃ— ವೇದದ ಡಂಗುರಂ ಹೆದರಿ ಸೈವೆರಗಾದವು ಶಾಸ್ತ್ರಸಂಭ್ರಮಂ। ಪೋದವು ನಿಚ್ಚಲೋದುವ ಪುರಾಣದ ಮಾತಿನ ಮಾಲೆಗಳೆಂಬುವೆಲ್ಲ ಹಾ । ಳಾದವು ಜಪ ತಪ ನೇಮ ಸಂಧ್ಯಾ ಸಮಾಧಿಗಳೆಂಬವೆಲ್ಲ ನುಚ್ಚು ನೂ । ರಾದವು ಹಂಪೆಯಾಳ್ದವರ ಚನ್ನನ ಕೂಡೊಲಿದುಂಡ ಕಾರಣಂ॥

**ರಗಳೆ.**

ಶ್ರೀ ಶಿವನ ಸೆಜ್ಜೆ ಎನಿಸುವ ಚೋಳ ದೇಶವದು
ಈಶ ಭಕ್ತವ್ರಜಕೆ ನಿಜ ಸುಖಾವಾಸವದು
ಆ ದೇಶಮಂ ಪೊಗಳ್ವೊಡೆನ್ನಳವೆ ಸುರರಳವೆ
ವೇದಮಯುವಭವಮಯ್ಯವಾದುದಕೆ ಪಡಿಯೊಳವೆ
ಶರ್ವಂಗೆ ಶಂಭುವಿಂಗಭವಂಗೆ ವಿಭವಂಗೆ
ಸರ್ವಜ್ಞ ನಿಧಿಗೆ ಗಣನಾಥಂಗಜಾತಂಗೆ
ತಿಲಕವದು, ಪುಳಕವದು ಕಲಶವದು ವಿಳಸವದು
ಲಲಿತವದು ಫಲಿತವದು ಲಾಭವದು ಶೋಭೆಯದು,

ಭವನವದು ಶಿವಭವನ ಊರೆಲ್ಲ ಶಿವಪುರಂ
ವಿವಿಧ ಜನವೆಲ್ಲ ಶಿವಭಕ್ತರ್ನಿರಂತರಂ
ಬೆಳೆಯಿಲ್ಲದೆಡೆಯಿಲ್ಲ ಜನವಿಲ್ಲದೂರಿಲ್ಲ
ನೆಳಲ ತಂಪಿಲ್ಲದಿಂಪಿಲ್ಲದಾರವೆಯಿಲ್ಲ
ಕಾವೇರಿ ಸೋಂಕಿದರ ಪಾಪಮಂ ಸೋವೇರಿ
ಕಾವೇರಿ ಸಕಲ ಸಸ್ಯಾದಿಗಳ ಕಾವೇರಿ
ಹರಿವಳಾ ದೇಶದೊಳ್ನರ ಭಕ್ತಿ ರಸದಂತೆ
ಧರಣೀತಳಕ್ಕಮೃತ ವಿಮಳ ವಾರುಧಿಯಂತೆ
ಜಪವಲ್ಲಿ ತಪವಲ್ಲಿ ಫಲವಲ್ಲಿ ಚೆಲುವಲ್ಲಿ
ಜಪವರ್ಥವೆನಿಪ ಶಿವನಲ್ಲಿ ಶಂಕರನಲ್ಲಿ
ತರು ಕಲ್ಪತರು ಧೇನು ಕಾಮಧೇನುಗಳಲ್ಲಿ
ಗಿರಿ ಹೇಮಗಿರಿ ನಿಕರ ಸರ್ವ ಸುಖವಂತಲ್ಲಿ

ಇಂತಪ್ಪ ದೇಶಮಂ ಪಾಲಿಸುವ ಭೂಮಿಪಂ
ಸಂತತಂ ಕರಿಕಾಲ ಚೋಳನೆಂಬಾ ನೃಪಂ
ಹರಭಕ್ತ ಗುರುಭಕ್ತ ಚರಭಕ್ತನಾಗಿರುತ
ಪರಮ ಭಕ್ತಂ ಸತ್ಯಶೀಲನನುಸ್ನೈತಕರ್ಮಂ

ಆ ಚೋಳರಾಯನೊಪ್ಪುವ ರಾಜಧಾನಿಯೊಳ್
ವಾಚಾಮಗೋಚರಮೆನಿಪ್ಪನಂತವನಿಯೊಳ್
ಜಾತಿ ಮಾದರ ಚನ್ನನೆಂಬ ನಾಮಂ ತನಗೆ
ಓತಿರ್ಪುದನ್ವರ್ಥವಾಗಿ ಮೆರೆದೂರ್ವರೆಗೆ
ಇರ್ಪ ಶಂಕರನ ಗುಪ್ತಾರಾಧನೆಗೆ ಮೆಚ್ಚಿ
ನಾರ್ಪ ಶಿವಭಕ್ತಿಯಂ ಬೀರಿದೆಚ್ಚಿಗೆ ಮೆಚ್ಚಿ
ಭಕ್ತಚೋಳನ ತುರಂಗಂ ಬರ್ಪಕಬೇಕೆಂದು
ಯುಕ್ತಿಯಿಂದೀಶಭಕ್ತನ ಸಲಹಬೇಕೆಂದು
ಕಂಪಣದ ಹುಲ್ಲಕಾಯಕವನೇ ಮರೆಮಾಡಿ
ಪೆಂಪಿಂದ ಶಿವನನರ್ಚಿಸುತಿಪ್ಪನೊಡಗೂಡಿ
ಲಿಂಗಾಭಿಮಾನಿ ಲಿಂಗಪ್ರಾಣಿ ಶಾಶ್ವತಂ
ಲಿಂಗಾನುಭಾವಿ ಲಿಂಗೈಕ್ಯನತ್ಯೂರ್ಜಿತಂ
ಗಿರಿಜೇಶನಾಪ್ತನತಿಗುಪ್ತಮಾಹೇಶ್ವರಂ
ಪೆರರರಿಯರೀಶನೆಂದಿರ್ಪ ಭಕ್ತ್ಯಾತುರಂ
ಒಳಗೆ ಭಕ್ತಿಯ ಗುಂಪು, ಹೊರಗೆ ಜಾತಿಯ ಸೊಂಪು,



ಒಳಗೆ ಮುಕ್ತಿಯ ನುಂಪು, ಹೊರಗೆ ಜನ್ಮದ ಪೆಂಪು,
ತಾನಾಗಿ ಮುಗಿಲಮರೆ ಇಂದು ಮಂಡಲದಂತೆ
ಏನೆಂಬೆನುದಕದೊಳಗಣ ಕಮಲದಳದಂತೆ
ತಿಲದ ತೈಲದ ತೆರದೆ, ಕಾಷ್ಠದಗ್ನಿಯ ತೆರದೆ
ನೆಲದ ಮರೆಯೊಳಗೆ ತೋರುವ ನಿಧಾನದ ತೆರದೆ
ಪೆರರರಿಯದಂತೊಳಗೆ ಲಿಂಗಾರ್ಚನೆಯೊಳಿರ್ಪ
ಅರಿವಂತೆ ಹೊರಗೆ ಕುಲಧರ್ಮ ಕರ್ಮದೊಳಿರ್ಪ
ಆತನ ಶಿವಾರ್ಚನೆಯನೆಣಿಸಲೆನ್ನಳವಲ್ಲ
ಭೂತೇಶ್ವರಂಗೆ ಕೌತುಕ ಉಳಿದವರ್ಗಳವಲ್ಲ

ಉದಯ ಸಮಯದೊಳೆದ್ದು ಕಾನನಕೆ ನಡೆತರುತೆ
ಪದೆದು ಶಿವನಿತ್ತ ಕಾಯಕವನೊಲಿದೆಡೆಗೊಳುತೆ
ಕಂಡ ಚೆಲ್ವಕ್ಷಿಮುಖದಿಂದೆ ಲಿಂಗಾರ್ಪಿತಂ
ಕೊಂಡ ನಾಲಿಗೆಯ ರುಚಿಯಿಂದಲರ್ಪಿತಂ
ಕೇಳ್ದ ಸವಿ ನುಡಿ ಕಿವಿಯ ಮುಖದಿಂದಲರ್ಪಿತಂ
ತಾಳ್ದ ಗಂಧಂ ನಾಸಿಕದ ಮುಖದೊಳರ್ಪಿತಂ
ಸೋಂಕಿದ ಮೃದು ದ್ರವ್ಯಮಂಗದಿಂದರ್ಪಿತಂ
ಮುಂಕೊಳಿಸಿ ನೆನೆದ ರುಚಿ ಮನದಿಂದ್ಲವರ್ಪಿತಂ
ಆಗುತಿರೆ ನಡೆತಂದು ಕಾಂತಾರದೊಳ್ಪೊಕ್ಕು
ರಾಗದಿಂ ನಿರ್ಮಳ ನದೀ ತೀರದೊಳ್ಪೊಕ್ಕು
ಮಗ ಮಗಿಪ ಮಲ್ಲಿಗೆಯ ಮಂಟಪದ ತಳದೊಳಗೆ
ಸೊಗಯಿಸುವ ನುಳ್ಪೊಳಗನುಗುಳ್ವ ತಣ್ಣೆಳಲೊಳಗೆ
ನುಣ್ಮಳಲ ದಿಂಟಿಯೊಳ್ತಳಿರ ಹಸೆಯಂ ಹಾಸಿ
ಕಣ್ಮನವನಭವನತ್ತಲ್ನಲಿದು ಕೈವೀಸಿ
ಬಾರಯ್ಯಾ ಬಾರ ಶಿವಭಕ್ತೈಕ ಬಂಧುವೇ
ಬಾರಯ್ಯಾ ಬಾರ ಕಾರುಣ್ಯರಸ ಸಿಂಧುವೇ
ಗುರುವೆ ವರ ಗುರುವೆ ಸದ್ಗುರುವೆ ಗುರುಲಿಂಗವೇ
ಭರದಲರ್ಚಿಪ ಜನದ ಮನದ ಸರ್ವಾಂಗವೇ
ಎಂದು ಪುಳಕ ಪ್ರತತಿ ನೆರೆವುತಿರೆ ಕರೆವುತಿರೆ
ಬಂದ ಪುಷ್ಪಾಂಬುಗಳ್ಸುರಿವುತಿರೆ ಪರಿವುತಿರೆ
ಸೆಜ್ಜೆಯೊಳಗಿರ್ದ ಶಿವಲಿಂಗವಂ ಪೊಂಗುವಂ
ಸಜ್ಜನ ಸ್ನೇಹ ರಸ ಸಂಗವಂ ಲಿಂಗವಂ

ತೆಗೆದು ಕರತಳದಿ ತಿಳಿಯಗ್ಗಣೆಯನೆರೆವುತುಂ
ಸೊಗಯಿಸುತ್ತಿರೆ ಮತ್ತೆ ಮತ್ತೆ ಕರೆದೋವುತುಂ
ತಂದು ಸಿಂಹಾಸನದ ಮೇಲೆ ಬಿಜಯಂಗೈಸಿ
ಸಂದಣಿಪ ನೇಹದಿಂ ಪೂಜೈಸಿ ಹಾರೈಸಿ
ಪರಿಮಳದ ತಿರುಳೆನಿಪ ನೊಲ್ಲೆ ಮಲ್ಲಿಗೆಗಳಂ
ಹರವರಿಯ ಕಂಪಿಡುವ ಸಂಪಿಗೆಯರಲ್ಗಳಂ
ಮರುಗ ದವನಂ ಪಚ್ಚೆ ಪತ್ರಳಿಯ ಪೂಗಳಂ
ಸುರಗಿಸುರಹೊನ್ನೆ ಚಂಗಣಿಗಿಲೆಯ ಪೂಗಳಂ
ಕಮಲದರಲ್ಗಳು ಸೇವಂತಿಗೆ ಪುಷ್ಪಗಳ ವಹಿಸಿ
ಕ್ರಮದಿಂದ ಹೂಂಗೇದಗೆಯ ಕಿರುವೆಸಳ ನಿಲಿಸಿ
ಸಂಗಡಿಸಿ ಸಿಂಗರಿಸಿ ಹೊಂಗಿ ಹೊರೆಯೇರುತ್ತುಂ
ಲಿಂಗಪೂಜೆಗಳೊಳಗೆ ಮನವಿಟ್ಟು ವಿರುತುಂ
ಅಡಿಗಡಿಗೆ ನೋಡಿ ಮಾತಾಡಿ ನೈವೇದ್ಯರ್ತುಂ
ಹಾಡಿ ತಣಿವುತೆ ಮತ್ತೆ ಮತ್ತೆ ವಿಗೆ ಕೊಬ್ಬುತುಂ
ಪುಳುಕಿಸುತೆ ಪುಟವೇರಿ ತವಕಿಸುತ್ತೆ ಮದವೇರಿ
ಎಳಸುತಂ ವಳವೇರಿ ಬಳಸುತಂ ಬಲ್ಪೇರಿ
ನುಡಿಯುತುಂ ಗಡುಗಡಿಸಿ ಬೆಮರುತುಂ, ಸಡಗರಿಸಿ
ನಡೆವುತುಂ ಡೆಂಡಣಿಸಿ ಬೀಳುತುಂ ತರಹರಿಸಿ
ಮೆಲ್ಲನೆಚ್ಚತ್ತು ಶಿವಲಿಂಗಮುಂ ನಡೆ ನೋಡಿ
ಲಲ್ಲೆಗರೆವುತ್ತೆ, ಪರಮ ಸ್ನೇಹವಂ ಮಾಡಿ
ಹಸಿವಯ್ಯ ಎನ್ನ ಜೀವದ ಜೀವವೇ ಎಂದು
ಉಸಿರ ಸಂತೈಸುತೋವುತ್ತೆ ಹತ್ತಿರೆ ಬಂದು
ಜಂಬೂಫಳಂ ಚೂತಫಳವನೊಲವಿಂ ಕರಂ
ಇಂಬಿನಲ್ಲಾರೋಗಿಸಲ್ಕೊಟ್ಟನಂತರಂ
ತೂಪಿರಿದು ಕಾಪಿಟ್ಟು ಕಣ್ಗಳೊಳಗೊತ್ತುತುಂ
ಭಾಪು ಭಾಗ್ಯವೆ ಎಂದು ಕೊಂಡಾಡಿ ಹೆಚ್ಚುತುಂ
ಕರುಣ ಪ್ರಸಾದವಂ ಪ್ರೀತಿಯಿಂ ಕೈಕೊಂಡು
ಹರನ ಕಾರುಣ್ಯಮಂ ತಾನೊಚ್ಚತಂಗೊಂಡು

ಬಂದು ತೃಣಜಾಲವಂ ಕೊಯ್ದೆತ್ತಿನೊಳ್ಪೇರಿ
ಸಂದಣಿಪ ಪುಳಕಮುಂ ತನ್ನ ಮೆಯ್ಯೊಳ್ಪೇರಿ
ನಡೆತಂದು ಜೋಳನ ತುರಂಗ ನಿಳಯದ ಮುಂದೆ,



ಒಡನೆಯವರುಪಾಧಿಯೊಳು ನೂಂಕುತ ಭರದಿಂದೆ
ಬಳಲುತುಂ ಬಂದು ನಿಜ ನಿಳಯದೊಳ್ಸಿಳ್ದಿರ್ಪ್ಪ

ತೊಳತೊಳಿಪ ಶಿವಲಿಂಗದೆತ್ತ ಚಿತ್ತಂ ಸಾರ್ದು
ಇರೆ ಬೋನವುಂ ಹಿಡಿವರಲ್ಲಿ ತಮ್ಮರಸಿಯರ್
ಹರನಿತ್ತುದಂ ಭಕ್ತಿಯಿಂದೆ ಕಡು ಬಡೆವೆಯರ್
ಪಿಡಿಯೆಉಳ್ಳುದನಮೃತ ಸಮಾನವುಂ ಮಾಡಿ
ತಡೆಯದೆ ಶಿವಂಗೆ ಸುಖದಿಂದರ್ಪಿತಂ ಮಾಡಿ
ಲಿಂಗಪ್ರಸಾದವುಂ ಪ್ರೀತಿಯಿಂ ಕೈಕೊಂಡು
ಜಂಗಮಸನ್ನಿಧಾನನಿರ್ಪಂ ಸುಖಮನೆಡೆಗೊಂಡು
ಅತಿಭಕ್ತನತಿಗುಪ್ತನತಿ ಮಾನಿಯತಿ ಮೌನಿ
ಅತಿಯಾಪ್ತನತಿ ಯುಕ್ತನುರುತರ ಶಿವಧ್ಯಾನಿ
ಆರುವರಿಯರು ಭಕ್ತನೆಂದು ಚೆನ್ನಯ್ಯನಂ
ಮಾರಾರಿಯರಿದಿರ್ಪ ಭಕ್ತಿಸಂಪನ್ನನಂ

ಈ ತೆರದೊಳೆರುಪತ್ತು ವತ್ಸರಂ ನಡೆಯುತಿರೆ
ಭೂತಳದೊಳತಿಗುಪ್ತ ಭಕ್ತಿಯಿಂ ಮೆರೆವುತಿರೆ
ಹರನೊಲ್ದು ಚನ್ನನಂ ಮೆರೆವೆನೀ ಧರೆಗೆಂದು
ಪುರಹರಂ ಸಂತಸಂಬಡುತಿರುತ್ತಿರಲೆಂದು

ಒಂದು ದಿನವೆಂದಿನಂದದಲಿ, ಹೊಲನಂ ಪೊಕ್ಕು
ಇಂದುಧರ, ಪೂಜೆಯಂ ಮಾಡಿ ಹರುಷಂಮಿಕ್ಕು
ಆಡಿ ಹಾಡುತ್ತಲ್ಲಿ ಬಯ್ಗಿವರ ಮಿರುತಿರ್ದು
ನೋಡಿ ಭೋಂಕೆನೆ ಕಾಣುತೆಳ್ಚತ್ತು ಒಳಸಾರ್ದು
ಬೇಗದಿಂ ಪುಲ್ಗೊಯ್ದು ಬೈಲನೊಳ್ ಪೊರೆ ಹೇರಿ
ರಾಗದಿಂ ಗಳಗಳನೆ ನಡೆತರುತ್ತಂ ಮೀರಿ
ಕಂಪಣದ ತಾಣದೊಳ್ಪುಲ್ಲನೊಲವಿಂ ನೂಂಕಿ
ಸೊಂಪೇರಿ ಚಿತ್ತಜಾರಿಯ ಚಿತ್ತಮುಂ ಸೋಂಕಿ
ಮನೆಗೆ ಬಂದ್ಘನುಮಿಸುತೆ ಕುಳಿರ್ದು ನೆನೆವುತಿರೆ
ವನಿತೆ ತಂದಂಬಕಳಮಂ ಮೆಲ್ಲನಿಳಿಪುತಿರೆ

ಉಪ್ಪುಗಾಯಂ ಕೆಲದೊಳೊಪ್ಪೆ ಬಡಿಸುತ್ತಲಿರೆ
ಕಪ್ಪುರದೊಳಗೆ ಶಾಕಪಾಕಂಗಳೆಸೆಯುತಿರೆ
ಲಿಂಗಾರ್ಪಿತಂ ಮಾಡಿ ಚನ್ನಯ್ಯನೊಲವಿಂದೆ
ಅಂಗೈಸಿ ಲಿಂಗ ಪ್ರಸಾದಕ್ಕೆ ನಲವಿಂದೆ
ಮನವಿಟ್ಟು ಕಯ್ಯಿಟ್ಟು ಮೊಗೆದನಾನಂದದಿಂ
ಮನವೊಲ್ದು ಭಕ್ತಿರಸಮಂ ಮೊಗೆವ ಚಂದದಿಂ
ಮೊಗೆದು ಕೈಕೊಳ್ವಲ್ಲಿ ಸವಿಜಿಹ್ವೆಯಂ ಮುತ್ತೆ
ಬಗೆಯೊಳ್ಪಾರ್ಪಿತಂ ಒಡನೊಡನೆ ಬೆಂಬತ್ತೆ
ಮಧುರಾಮ್ಲರುಚಿಯ ಸುಖ ಶಿವಲಿಂಗಮಂ ತಾಗೆ
ಸುಧೆಯು ಕಡು ಸವಿಯಿಂದೆ ನೂರ್ಮಡಿಸಿ, ಸವಿಯಾಗೆ
ಸವಿದು ತಣಿವೆಯ್ದಿ ಸಲೆ ಗುರುಮೂರ್ತಿಯುರವಣಿಸಿ
ಸವಿಸಹಿತನಂಬಕಳವೆಲ್ಲವಂ ಲವಲ್ಲವಿಸಿ
ಕೊಂಡನೇನೆಂಬೆನಾಂ ಚನ್ನಯ್ಯನೊಂದಾಗಿ
ಉಂಡನಭವಂ ಸ್ವರ್ಗ ಮರ್ತ್ಯಕ್ಕೆ ಪೊಸತಾಗಿ
ಒಂದು ಸುರಿಯೊಳಗೆ ಕೈವಂದುದೇ ಶಿವಪದಂ
ಮುಂದೆ ಸವಿದರ್ಸಿಸುವುದಕ್ಕಿಲ್ಲ ಘನಪದಂ
ಎಂದಂಜಿಕೊಂಡನಾ ಶಿವನಂಬಕಳನ್ನುಮಂ
ಅಂದು ಶಿವನೊಡನುಂಡ ಚನ್ನನಂದುತ್ತಮಂ
ಭಾಪು ಭಾಗ್ಯವೆ ಚನ್ನನೆಂದಧಿಕರಿನ್ನುಂಟೆ
ಭಾಪು ಪುಣ್ಯವೆ ಶಿವನ ಕಾರುಣ್ಯವಿನಿತುಂಟೆ
ಇಂತು ಶಿವನುಂ ಚನ್ನನುಂ ತಣಿವುತಿರಲಿತ್ತ

ಸಂತ ಸುಖದಿಂದೆ ಭಾಸ್ಕರನುದಯವಾಗುತ್ತೆ
ಇರೆ ನಿತ್ಯನೇಮಕ್ಕೆ ಚೋಳರಾಯಂ ಬಂದು
ಹರನಾಲಯಂ ಪೊಕ್ಕು ಕೈಮುಗಿವುತುಂ ನಿಂದು
ಶಶಿಧರನ ವಾಮ ಭಾಗದೊಳಂದು ಕುಳ್ಳಿರ್ದ
ಪಶುಪತಿಯೆ ಶರಣೆಂದು ಸಂತಸದೆ ಕುಳ್ಳಿರ್ದ
ಆಗಮ ಸ್ನಾನಂಗಳೊಳ್ವಿಭೂತಿಯನಿಟ್ಟು
ರಾಗದಿಂ ಪಂಚಮುಖನಲ್ಲಿ ಚಿತ್ತಂ ನಟ್ಟು



ರುದ್ರಾಕ್ಷಿಯಂ ತಾಳ್ದು ಚೋಳನಾನಂದದಿಂ
ರುದ್ರನಂ ನೋಡಿ ಹೊಗಳುತ್ತುಮಾನಂದದಿಂ
ದರುಶನ ಸ್ಪರುಶನಂಗಳನಕ್ಕರಿಂ ಮಾಡಿ
ಹರುಷದಿಂ ಶಿವನ ಪ್ರಸಾದಂಗಳಂ ಸೂಡಿ
ಭರದಿಂ ಪ್ರದಕ್ಷಿಣ ನಮಸ್ಕಾರಮಂ ಮಾಡಿ
ಪುರಹರನಸಿಂದುಧರನಂ ನೇಹದಿಂ ನೋಡಿ
ನವವಸ್ತ್ರಮಂ ನೂತನ ರತ್ನಂಗಳಂ ತರಿಸಿ
ನವನವಾಭರಣದಿಂ ಪೂಜೆಯನಲಂಕರಿಸಿ
ಆಡುತುಂ ಸುಖವೇರಿ ಹಾಡುತುಂ ಮುದವೇರಿ
ನೋಡುತುಂ ನಲವೇರಿ ಮಾಡುತುಂ ದಳವೇರಿ
ಸುಖದೊಳಿರ್ಪಾಸೀತಕ್ಕೆ ಸವೆದು ಬಂದುದು ಬೋನ
ಅಖಿಳ ರುಚಿನಿಜಯ ವಿಳಸಿತ ಶಾಕ ಸಂತಾನ
ಒಯ್ಯಾರದಿಂದೆ ಬರೆ ಭಕ್ತಚೋಳಂ ಕಂಡು
ಕಾಯಮಂ ಪುಳಕಮಂ, ಮುಸುಕೆ ಚಿತ್ತಂಗೊಂಡು
ರನ್ನ ದಡ್ಡಣಿಗೆಗಳ ಮೇಲೆ ಬೆಳಗಂ ಕರೆವ
ಮುನ್ನೂರು ಹೊನ್ನ ಹರಿವಾಣಂಗಳಿಂ, ಮೆರೆವ
ಕೆಲವಟ್ಟಲುವನಿರಿಸಿ ನಲಿನಲಿದು ಸಡಗರಿಸಿ
ಒಲವೆ ಎನ್ನಯ ಬಲವೆ ಫಲವೆ ಎಂದುಣಬಡಿಸಿ
ದೇವಾನ್ನ ದಿವ್ಯಾನ್ನವಮೃತಾನ್ನವಂ ಬಡಿಸಿ
ಓವಿ ಸವಿಸಾಲಿಡುವ ಶಾಕಂಗಳಂ ಬಡಿಸಿ
ಹಪ್ಪಳಂ ಚಿಲುಪಾಲ ಘಟ್ಟಿಗಳನಲ್ಲಿರಿಸಿ
ತುಪ್ಪಮಂ ಕೆನೆವೊಸಸರ್ಕ್ಕರೆಯನಲ್ಲಿರಿಸಿ
ಬಡಿಸಿ ಹೆರೆ ಸಾರುತುಂ ಜವನಿಕೆಯನೋಸರಿಸಿ
ಮೃಡನೆಯಾರೋಗಿಸೆಂದೊಲವಿಂ ನಮಸ್ಕರಿಸಿ
ಜವನಿಕೆಗೆ ಕಿವಿಗೊಟ್ಟು ನೃಪನಾಲಿಸುತ್ತುಮಿರೆ
ಸವಿವದನಿಗಳನೆಂದಿನಂತೆ ಹಾರುತ್ತುಮಿರೆ
ಹರನಲ್ಲಿ ಏನುವಂ ಮುಟ್ಟದಾರೈಸದಿರೆ
ಪರಿಕಿಸದೆ ಲೆಕ್ಕಿಸದೆ ಕಂಪಿಸದೆ ಸುಮ್ಮನಿರೆ
ತೊಟ್ಟನಾ ಜವನಿಕೆಯನೋಸರಿಸಿ ಕಾಣುತುಂ
ಕೆಟ್ಟೆನಿಂತೇಕಾಯ್ತೆನುತ್ತೆಯುರವಣಿಸುತುಂ





ಕೆತ್ತಲಗನೆತ್ತಿಕೊಂಡಮುದು ಕೊರಲಿಗೆ ಹೂಡಿ
ತಪ್ತು ಹೂಡುತ್ತುವಿರೆ ಶಂಕರಂ ತಾ ನೋಡಿ

ಓಹೋ ವಿಚಾರವಿಲ್ಲದೆ ಇಂತು ಮಾಳ್ಪರೆ
ಆಹಾಹ ನಿನ್ನರಸುತನವೆನಗೆ ಮಾಳ್ಪರೆ
ಕಂಡಯ್ಯ ಜೋಳ ನಿನಗಿನ್ನಿತು ಸೈರಣೆಯಿಲ್ಲ
ಉಂಡೆಪಾ ಚನ್ನನೊಡನೆಮಗಿಂದು ಪಸಿವಿಲ್ಲ
ಪೂತು ಮಾದರ ಚನ್ನನೊಡನುಂಡೆವೆಲೆ ಜೋಳ
ಕೂತು ಮಾದರ ಚನ್ನನೊಡನುಂಡೆವೆಲೆ ಜೋಳ
ಕೇಳೆಂಬಕಳದ ಸವಿಯುವನೇನನೆಂದಪೆಂ
ಜೋಳಾದಿಗಳ್ಪಡೆಯರದನೆಂತು ಬಣ್ಣಿಪೆಂ
ಪಾಕದಿಂದಪ್ಪ ವಸ್ತುಗಳೆದಕೆ ಪಡಿಯಿಲ್ಲ
ಲೋಕದೊಳ್ಪೊಣೆನಾಂ ಪೇಳ್ವೊಡಂ ಪ್ರತಿಯಿಲ್ಲ.
ದೇವಾನ್ನ ದಿವ್ಯಾನ್ನವೆಂಬುದಂನೇಳಿಪುದು
ಭಾವಿಸುವೊಡಿನ್ನವಂ ಪೆಸರಿಡಲ್ಕೇನರಿದು
ಕ್ಷೀರ ಮಧುಗಳ ರುಚಿಯುದಕ್ಕೆ ಕೇಳ್ಸರಿಯಲ್ಲ,
ಹಾರಯಿಸಿ ಸವಿಯುಳ್ಳ ಸಕ್ಕರೆಯುಮೆಣೆಯಲ್ಲ
ಎಂದು ಶಿವನಾ ಲಿಂಗದೊಳ್ಪೈಕ್ಯನಾ ಕ್ಷಣಂ
ನಿಂದು ಜೋಳಂ ಕೌತುಕಂಬಟ್ಟನಾಕ್ಷಣಂ

ಬೆರಗಾಗಿ ಬೆಂಡಾಗಿ ಚನ್ನನಂ ಚಿಂತಿಸುತೆ
ಕರೆಗೊರಲನಿಂತುಂಬನೇ ಎಂದು ಪುರಡಿಸುತೆ
ಪರಮುನಿಗೆಯುಣಲಿತ್ತ ಶರಣನಂ ನೋಡುವೆಂ
ಹರುಷದಿಂದೂನವನ ಚರಣಮಂ ಸೂಡುವೆಂ
ನಡೆ ಯೆನುತೆ ಪೊರಮಟ್ಟನಲ್ಲಿ ಜೋಳೋರ್ವಿಪಂ
ನಡೆತರ್ಪ ಪರಿಜನ ಸ್ತೋಮದಿಂ ಭೂಮಿಪಂ
ನಡೆವರಿಯದಚ್ಚ ಸುಖಿ ಕಾಲ್ನಡೆಯೊಳೈತರುತೆ
ಎಡಬಲದ ಮುಕುಟ ವರ್ಧನರೊಳಗೆ ನಡೆತರುತೆ
ಚನ್ನನಂ ನೋಡುವಾತುರ ಚಿತ್ತದೊಳ್ಪವಿದು
ತನ್ನ ಮನದೊಳಗೆ ಚನ್ನನ ಮೂರ್ತಿ ಇಡಿದಿಡಿದು
ನಿಂದವರಂ ನೆರೆವರಂ ಚನ್ನನಂ ಕೇಳುತುಂ,



ಬಂದರಂ ಸಾರ್ದರಂ ಚನ್ನನಂ ಕೇಳುತುಂ
ಸಕಲಗುಣ ಜಲಧಿ ಚನ್ನಯ್ಯನಂ ಕಂಡಿರೇ
ಅಕಳಂಕ ಚರಿತ ಚನ್ನಯ್ಯನಂ ಕಂಡಿರೇ
ಎನ್ನಗತಿ ಎನ್ನಮತಿ ಚನ್ನವಂ ಕಂಡಿರೇ
ಎನ್ನ ನಿಧಿ_ಎನ್ನ_ಸುಧೆ ಚನ್ನನಂ ಕಂಡಿರೇ
ಶಿವನ ಸದ್ಭಕ್ತನಂ ಚನ್ನನಂ ಕಂಡಿರೇ
ಶಿವನಂತರಂಗದೊಳಭಿನ್ನನಂ ಚನ್ನನಂ
ಗುರುಲಿಂಗದೊಡನುಂಡ ಚನ್ನನಂ ಕಾಣಿರೇ
ಪುರಹರಂಗುಣಲಿತ್ತ ಚನ್ನನಂ ತೋರಿರೇ
ನಲಿದು ಹರನೊಡನೆ ರಂಜಿಸುವನಂ ತೋರಿರೇ
ಸಲೆದುರಿತ ಕುಲವ ಭಂಜಿಸುವನಂ ಕಾಣಿರೇ
ಹರಿಯಜರ ಪದವಿಗಳನೇಳಿಸುವ ಚನ್ನನಂ
ಧರಣಿಯಂ ಶಾಂತಿಯುಂ ಪಾಲಿಸುವ ಚನ್ನನಂ
ತೋರಿರೇ ಚಂದ್ರಮೌಲಿಯ ಭಕ್ತ ಚನ್ನನಂ
ತೋರಿರೇ. ಪಸ್ವರ್ಗ ಕರ್ಣನಂ ಚನ್ನನಂ
ಚನ್ನನಂ ತೋರಿ ಎನ್ನಂ ಕಾಯ್ದುಕೊಳ್ಳಿರೇ
ಚನ್ನಯ್ಯನೆನ್ನಯ್ಯನಿರ್ದೆಡೆಯನೆರುಪಿರೇ
ಚನ್ನಯ್ಯನಿರ್ಪ ಗುಡಿ ಇದೆ ಎಂದು ತೋರಿರೇ
ಚನ್ನಯ್ಯ ಭಕ್ತನೆನ್ನಯ್ಯನಂ ತೋರಿರೇ
ಅಯ್ಯೋ ಮಹಾದೇವ ಆವೊಳ್ತು ಕಾಣ್ಬೆನೇ
ಅಯ್ಯೋ ಪದದ್ವಯವನೆಂದಪ್ಪಿಕೊಳ್ವೆನೇ
ಎಂದಲ್ಲಿ ಚಿತ್ತದನುತಾಪದಿಂ ಪೊರಳುತುಂ
ಅಂದಲ್ಲಿ ದೆಸೆದೆಸೆಗೆ ಚಾರರಂ ಕಳಿಪುತುಂ
ಇರೆ ಮುಂದೆ ಪಡಿಯರರ್ಪರಿದರಸುತಲಿ ಬಂದು
ಹಿರಿಯ ಕೇರಿಯನುರವಣಿಸಿ ಪೊಕ್ಕು ನಡೆತಂದು
ಚನ್ನನೆಂಬನ ನಿಳಯವಾವುದೆಂದರಸುತಿರೆ
ಚನ್ನಯ್ಯನಿರ್ಪ ಗುಡಿಯಿದೆ ಎಂದು ತೋರುತಿರೆ,

ಒಳಗೆ ಚನ್ನಯ್ಯನತಿ ಕಂದುತುಂ ಕುಂದುತುಂ
ತಿಳಿವಳಿದುದೇನೆನುತೆ ನೋಡುತುಂ ಬಾಡುತುಂ,

ಅರಮನೆಯು ಚಾರರೇ, ತಾನೇಕೆ ಶಂಕರಾ
ಅರಸನೇಕೆನ್ನ ಮನೆಯೇಕೆ ಶಶಿಶೇಖರಾ
ಭಕ್ತನೆಂದೆರಿಯದಿರ್ದೊಡೆ ಲೇಸು ಬದುಕುವೆಂ
ಭಕ್ತನೆಂದರಿದ ಬಳಿಕಾನೆಂತು ಬದುಕುವೆಂ
ಶಿವ ಶಿವ ಮಹಾದೇವ ಶಿವಕೆ ಏನಪ್ಪುದೋ
ಶಿವನೆ ಬಲ್ಲಂ ವಿಚಾರಿಪೊಡೆ ಏನಪ್ಪುದೋ
ಅವಿಚಾರದಿಂದೆಂತು ಮಾಳ್ಪರೇ ಶಂಕರಾ
ಭವನೆಬಲ್ಲಂ ಇಂತು ಮಾಳ್ಪರೇ ಪುರಹರಾ
ಎಂದು ಚನ್ನಯ್ಯ ಮನದೊಳ್ನೊಂದು ನುಡಿವುತಿರೆ
ಮಂದಮತಿಯಾದೆನೆನ್ನೇವೆನೆಂದೆನುತುಮಿರೆ

ಎನುತುಮಿರೆ ಬಂದು ಗುಡಿಲಂ ಸುತ್ತಿ ಮುತ್ತುತಂ
ತನತನಗೆ ಜಯಜಯಾ ಎಂದು ಕೈಮುಗಿವುತಂ,
ಇರೆ ಚೋಳರಾಯನತಿ ಭಕ್ತಿಯಿಂ ಬರುತಿರ್ದ
ಅರರೆ ಸವ್ಯಜ್ಞಾನಿ ಸತ್ಯನಿಧಿ ಬರುತಿರ್ದ
ಎಡಬಲದೊಳೊಗ್ಗಡಿಪ ರಾಜಪುತ್ರರ ನಡುವೆ
ಗಡಣದಿಂ ಬರುತಿರ್ದ ಚೋಳ ಗೋವರ ನಡುವೆ,
ಗಳಗಳನೆ ನಡೆತರುತೆ ಚನ್ನಯ್ಯನಂ ಕಂಡು
ಬಳಸಿ ಗಣಪದವಿ ಬಂದೆಳಸಿರ್ಪನಂ ಕಂಡು
ಭಕ್ತಿ ಗುಡಿಸಿರ್ದಗುಡಿಸಲೊಳಿರ್ಪನಂ ಕಂಡು
ಮುಕ್ತಿ ಮೂವಡಿಸಿ ಮುಂದಡಸಿರ್ದನಂ ಕಂಡು
ಪುಳಕಿಸುತೆ ಪುಟವೇರುತುಬ್ಬುತುಂ ಕೊಬ್ಬುತುಂ
ಇಳಿವಶ್ರು ಜಲದಿಂದೆ ಮೂಡುತುಂ ಮುಳುಗುತುಂ
ಎನ್ನೊಡೆಯನಿವನಿವನೆ ಚನ್ನಯ್ಯನೆಂದೆನುತೆ
ಎನ್ನ ಸುಧೆ ಇವನಿವನೆ ಚನ್ನಯ್ಯನೆಂದೆನುತೆ
ಎನ್ನ ಗತಿ ಇವನಿವನೆ ಚನ್ನಯ್ಯನೆಂದೆನುತೆ
ಎನ್ನ ಮತಿ ಇವನಿವನೆ ಚನ್ನಯ್ಯನೆಂದೆನುತೆ
ಇಳುಪಿದಂ ಸರ್ವಾಂಗಮಂ ಚನ್ನನಂಘ್ರಿಯೊಳ್
ತೊಳತೊಳಗೆ ಮಣಿಮಕುಟಕಾಂತಿಪದ ಭೂಮಿಯೊಳ್



ಪಾದರಜಮಂ ಕಣ್ಗಳೊಳಗೊತ್ತಿ ತಣಿಯದಿರೆ
ಪಾದಮಂ ಬಲ್ಪಿಡಿದು ಬಿಡೆನೆಂದು ಹೆಣಗುತಿರೆ

ಏನಯ್ಯ ಚೋಳನೃಪ ನೀನಿಂತು ಬರ್ಪರೇ
ಭಾನುಕುಲ ದರ್ಪಣನೆ ನೀನಿಂತು ಬರ್ಪರೇ
ಎನ್ನ ಕುಲಮಂ ನೋಡದಿಂತು ಬರ್ಪರೆ ಚೋಳ
ಎನ್ನ ಜಾತಿಯನರಿಯದಿಂತು ಮಾಳ್ಪರೆ ಚೋಳ
ರಾಜ್ಯಾಂತರಂ ನರಕಮೆಂಬುದಿಲ್ಲದ ಚೋಳ
ಪೂಜ್ಯನಮರಾಳಿಯೊಳಗೆನಿಸಿ ಬರ್ದುಕುವ ಚೋಳ
ಎನುತೆ ಗದ್ಗದಿಸಿ ಕಂಪಿಸಿ ಕಾಲ ಬಿಡು ಚೋಳ
ನಿನಗೆ ನಿನ್ನಾಣೆ ಎನ್ನಾಣೆ ಬಿಡುಬಿಡು ಚೋಳ

ಎನೆ ದೇವ ದೇವನೊಲ್ದನ ಕುಲಂ ಸತ್ಕುಲಂ
ಘನಮಹಿಮನೊಲ್ದ ಜಾತಿಯೇ ಜಾತಿ ನಿರ್ಮಲಂ.
ಶರ್ವನೊಡನುಂಡ ನಿಮ್ಮಯ ಜಾತಿಗೆಂ ಸರಿಯೆ
ಸರ್ವಜ್ಞ ನಿಮ್ಮ ಕೆರವಿಂಗೆನ್ನ ಶಿರ ಸರಿಯೆ
ಬಿಡೆನಯ್ಯ ನಿಮ್ಮ ಪದವಂ ಬಿಟ್ಟು ಬಾಳ್ವೆನೇ
ಮೃಡಮೂರ್ತಿಯಂ ಬಿಟ್ಟು ಸಂಸೃತಿಯೊಳಾಳ್ವೆನೇ
ಪಲವು ಮಾತೇಕೆ ಶಿವನಲ್ಲಿಗೈತನ್ನಿರೇ
ಕುಲಗೋತ್ರದಿರವನೀಶ್ವರನೊಡನೆ ಪೇಳಿರೇ

ನಡೆಯಿಮೆಂದಲ್ಲಿ ಗಜಮಸ್ತಕವನೇರಿಸುತೆ
ಗುಡಿಗಟ್ಟಿಪೇಳೆಂದು ಪುರದೊಳಗೆ ಸಾರಿಸುತೆ
ಮುಂದೆ ತುರಗವನೇರಿ ಕೆಲ ಬಲಕೆ ತೋರುತುಂ
ಮುಂದೈಪ ಪುಳಕದಿಂ ಬೆಳೆದು ದಳವೇರುತುಂ
ಚನ್ನಯ್ಯನಂ, ನೋಡಿ ನೋಡಿ, ಕೈಮುಗಿವುತುಂ
ಉನ್ನತಂ ಜ್ಞಾನಿ ಚೋಳಂ, ಹೆಚ್ಚಿ ಹಿಗ್ಗುತುಂ,
ನಡೆತಂದು ಮೃಡನಾಲಯದ ಮುಂದೆ ನಿಂದಿರ್ದು,
ಕಡುನೇಹದಿಂ ಗಜದ ಮಗ್ಗುಲತ್ತಂ ಸಾರ್ದು
ಆನೆಯಿಂದಿಳಿಪಿ ಮೆಲ್ಲನೆ ಬಂದು ಕಯ್ಗೊಟ್ಟು
ದಾನನಿಧಿ ಚನ್ನಂ ಸಂತಸದೆ ಮುಂದಿಟ್ಟು

ಒಡಗೊಂಡು ಬಂದೊಳಗೆ ಶಿವಲಿಂಗವಂ ತೋರಿ
ಮೃಡನೊಡನೆ ತಾರ್ಕಣೆಯ ಕೊಡುತ ಚೋಳಂ ತೋರಿ
ಭಕ್ತಜನ ಕಲಹ ಲೀಲಾ ಲೋಲನಂ ತೋರಿ
ಭಕ್ತಜನ ವನಧಿ ವರ್ಧನ ಚಂದ್ರನಂ ತೋರಿ

ಕಂಡು ಚನ್ನಯ್ಯನಭವಂಗೆ ನೆರೆ ಮುಳಿವುತುಂ
ಕಂಡಯ್ಯ ನೀನಿಂತು ದೂರುವರೆ, ಪೇಳುತುಂ
ಚೋಳನಿಂ ಪಿಡಿಸಿ ತರಿಸಲ್ತಪ್ಪ ಮಾಡಿದೆನೆ
ಪೇಳಯ್ಯ ನಿಮ್ಮಲ್ಲಿ ಪದವಿಯಂ ಬೇಡಿದೆನೆ
ಅರಿಯದಂಬಲಿಯನರ್ಪಿಸಿದೊಡಿಂತಿರಿವರೇ
ಹೆರೆ ಸೂಡಿದನೆ ತೋರಿ ಮಾರಿ ನೆರೆ ದೂರುವರೆ
ಮೇದಿನಿಗೆ ಬೀರಿ ಗರುವಾಯಿತೆನ್ನಯ ಭಕ್ತಿ
ವಾದಕ್ಕೆ ಹರಲೆಯಂ ತಂದಿಕ್ಕಿತೀ ಭಕ್ತಿ
ಇನ್ನೀಳೆಯೊಳಿರೆನೆನುತ್ತತಿಭಾಷೆಯಂ ಮಾಡೆ
ಚನ್ನಯ್ಯನೆಂದಲಗ ಕಿಳ್ತು ಕೊರಳೊಳ್ಪೂಡೆ

ಶಿವಲಿಂಗದಿಂದೆ ಶಿವ ಬಂದು ಕರವಂ ಪಿಡಿದು
ಅವಿಚಾರದಿಂದಿಂತು ಮಾಳ್ಪರೇ ನೀನರಿದು
ಮರೆದು ಚೋಳಂಗೆ ಪೇಳ್ದೊಡೆ ಕೋಪವಿನಿತೇಕೆ
ಅರಿಯದೆಂದೆನು ಚನ್ನ ಸೈರಿಸಾಸುರವೇಕೆ,
ನೋಡಯ್ಯ ಚೋಳ ಗುಪ್ತಾರ್ಚನೆಯ ಮಾನಿಯಂ
ಆಡಂಬರವನೊಲ್ಲದ ಭಕ್ತಿಯಭಿಮಾನಿಯಂ
ಭಾಪು ಮಾದರ ಚನ್ನ ಪೂತು ಮಾದರ ಚನ್ನ
ಸೋಪಾಧಿಕಂ ಪುಗದ ಶೈವ ಮಾದರ ಚನ್ನ
ಗುಪ್ತಪೂಜೆಯ ಚನ್ನ ಗುರುತರಾಜ್ಞೆಯ ಚನ್ನ
ಆಪ್ತಗುಣನಿಧಿ ಚನ್ನ ಎನ್ನ ಭಕ್ತಿಯ ಚನ್ನ।

ಎಂದು ಕೊಂಡಾಡುತಿರೆ ಪೂಮಳೆಗಳೆರಗಿದವು
ನಿಂದು ದುಂದುಭಿ ಕಹಳೆ ಗಗನದೊಳು ಮೊಳಗಿದವು
ನಂದೀಶ್ವರಾದಿ ಗಣ ಸಂದೋಹದೊಡನೊಡನೆ
ಬಂದುವಾಗಳೆ ಪುಷ್ಪಕಂ ಕಾಂತಿಯೊಡನೊಡನೆ



ಬಂದುಪುಷ್ಪಕದೊಳಗೆ ಚನ್ನನಂ ಕುಳ್ಳಿರಿಸಿ
ಇಂದುಧರನಾನಂದದಿಂದೆ ನಭಕವತರಿಸಿ
ಚೋಳನಂ ಬೀಳ್ಕೊಟ್ಟು ನೆಗೆದನಾಕಾಶಕ್ಕೆ
ಶೂಲಧರನಹಿ ಕಟಕನೆಯ್ದಿದಂ ನಿಮಿಷಕ್ಕೆ
ಕೈಲಾಸಮಂ ಪೊಕ್ಕು ಸಿಂಹಾಸನವನೇರಿ
ಶೈಲಜೆಗೆ ಚನ್ನನಂ ಸಂತೋಷದಿಂ ತೋರಿ
ಚನ್ನಂಗೆ ಗಣಪದವಿಯಂ ಕೊಟ್ಟು ರಾಗದಿಂ
ಚನ್ನಯ್ಯನಂ ಹರುಷದಿಂದಿರಿಸಿ ರಾಗದಿಂ
ಪನ್ನಗಾಭರಣನೊಪ್ಪಿದನಖಿಳನೊಪ್ಪಿದಂ
ಉನ್ನತೈಶ್ವರ್ಯ ಘನನಿಧಿ ಶಂಭು ವೊಪ್ಪಿದಂ
ಗುರುವೊಪ್ಪಿದಂ ಉರುತರಜ್ಞಾನಿಯೊಪ್ಪಿದಂ
ಪರಮನೊಪ್ಪಿದನತುಳವರ ಹಸ್ತನೊಪ್ಪಿದಂ
ಕುಲತಿಲಕನೊಪ್ಪಿದಂ ಕುಲಹೀನನೊಪ್ಪಿದಂ
ಹೊಲೆಗಲಸಿ ಭಕ್ತರೊಳ್ನಿಲಸಿರ್ಪನೊಪ್ಪಿದಂ
ಉಲಿವ ವೇದಂಗಳ ಶಿಖಾರತ್ನನೊಪ್ಪಿದಂ
ಸಲೆ ಪೊಗಳ್ವ ಶರಣರ ಸುಖಾಂಬೋಧಿಯೊಪ್ಪಿದಂ
ಚನ್ನನ ಮಹಾನಿಧಿ ಮಹಾದಾನಿಯೊಪ್ಪಿದಂ
ಚನ್ನ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂದ॥ ಚನ್ನನ ನಿಧಿ ಚನ್ನನ ಸುಧೆ
ಚನ್ನನ ಸಕಳಾಯು ಚನ್ನನಮೃತಸಮುದ್ರಂ॥
ಚನ್ನಂ ರಕ್ಷಿಸುಗೆನ್ನಂ
ಚನ್ನನ ಸುತನೆಂದು ಹಂಪೆಯ ವಿರೂಪಾಕ್ಷಂ

**ಸಮಾಪ್ತ.**

# ಯಿಳೆಯಾಂಡ ಗುಡಿಮಾರರ ಮಹಾತ್ಮೆ.

ಕಂದ॥ ಇಂದುಧರ ನಿನ್ನ ಬೆರಸಿ ।
ದಂದಿನ ಇಳೆಯಾಂಡ ಗುಡಿಮಾರರ ಚರಿತೆಯ ।
ಸಂದಣಿಪ ಮಧುರ ವಚನಂಗ ।
ಳಿಂದೊರವೆಂ ಕೇಳಯ್ಯ ಹಂಪೆಯ ವಿರೂಪಾಕ್ಷ ॥

## ಲಗಳೆ.

ಶ್ರೀ ಶಿವನ ಸಿಜ್ಜೆಯೆನಿಸುವ ಚೋಳ ದೇಶದೊಳ್
ಭಾಸುರಮೆನಿಸಿ ಮೆರೆವುದೊಂದು ಪುರವೊಪ್ಪದೊಳ್
ಯಿಳೆಯಾಂಡ ಗುಡಿಯೆಂಬುದದರೊಳನುರಾಗದಿಂ
ಯಿಳೆಯಾಂಡ ಗುಡಿಮಾರನಾರ್ರೆಂಬ ನಾಮದಿಂ
ಎಸೆದಿರ್ಪನೊರ್ವ ಭಕ್ತಂ ಶಿವನ ಕುಡಿಮಗಂ
ವಸುಧೆಗೊಪ್ಪುವ ಮಹಾದೇವನೊಕ್ಕಲ ಮಗಂ
ಇಂತಿರಲ್ಕಿವಭಕ್ತಿ ಚಿತ್ತದೊಳ್ನಳನಳಿಸೆ
ಸಂತತಂ ಹರನೊಲವು ಕರುಣದೊಳ್ಪಲ್ಲವಿಸೆ
ಸಮಚಿತ್ತವೆಂಬ ಭೂಮಿಯುನೆ ಹಸನಾಗಿರಿಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿಷಟ್ಕಮಂ ತಂದು ಹೂಡುವೆತ್ತಂ ಮಾಡಿ
ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶನಿಷ್ಠೆಯಂ ತಳಿವ ಬೀಜಂ ಮಾಡಿ
ಸುರುಚಿರ ಶಿವಜ್ಞಾನ ಸಸಿಗಳಂಕುರಿಸುತಿರೆ
ಹರನ ಪರಮಾನಂದರಸದ ಮಳೆ ಕರೆವುತಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ
ಕಿತ್ತು ಕಳೆವಂ ಕ್ಷುತ್ಪಿಪಾಸಾದಿ ಕಳೆಗಳಂ



ಇಂತೊಳಗೆ ಭವನ ಭಕ್ತ್ಯಾರಂಭಮಂ ಮಾಳ್ಪ
ಅಂತೆಲ್ಲರರಿಯೆ ಹೊರಗಾರಂಬಮಂ ಮಾಳ್ಪ

ಏನೆಂಬೆನತಿಭಕ್ತಿ ಸಸಿಯ ಬೆಳೆ ಸಿರಿವಂತ
ಆನಂದದಿಂ ಶರಣತತಿಗೀವ ಮತಿವಂತ
ಎನಿತು ಭಕ್ತರ್ಬಂದೊಡನಿತು ಹೊರೆಯೇರುವಂ
ಮನದೊಳಗೆ ಹೆಚ್ಚಿ ಕಿಂಕರತೆಯಂ ತೋರುವಂ
ಧರೆಯೆನಿತು ಉಂಟನಿತು ಭೂಮಿಯಾತಂಗುಂಟು
ಹರನ ಕರುಣಂ ಆತನಲ್ಲಿ ಪಿರಿದಾಗುಂಟು
ಆದರೊಳಾದ ಬೆಳಸನೀವ ಶರಣರ ಬಂಟ
ಮದಮುಖಮದೊಂದಿಲ್ಲದೀವ ಭಕ್ತರ ನಂಟ
ಒಳ್ಳಿತಂ ಸೊಗಸಿತಂ ಶಿವನ ಭಕ್ತರ್ಗೀವ
ಉಳ್ಳ ದ್ರವ್ಯಂಗಳಂ ಭುವನ ಭಕ್ತರ್ಗೀವ
ಎಲ್ಲ ತೇಜಂಗಳಂ ಶರಣತತಿಗೀವುತಂ
ಎಲ್ಲ ಮಾನ್ಯಂಗಳಂ ಭಕ್ತರ್ಗೆ ಸಾರ್ಚುತಂ
ಬಿಟ್ಟಿ ಬೆಸನಂ ಶಿವನ ಭಕ್ತರ್ಗೆ ಮಾಡುವಂ
ಕೊಟ್ಟು ತಣಿವಿಲ್ಲದನುತಾಪದಿಂ ಬಾಡುವಂ
ಇಂತು ಜಂಗಮಕೆ ಮಾಳ್ಪುದು ಕರಂ ಪಿರಿದಾಗೆ

ಸಂತತಂ ಭಕ್ತಕುಲವರಿದು ಸಂತಸವಾಗೆ
ನೆರೆಯತೊಡಗಿತು ಹರನ ಶರಣಕುಲವಳ್ತಿಯಿಂ
ಬರುತಮಿರ್ದುದು ಭೂತಳದ ಭಕ್ತರೊಲ್ಮೆಯಿಂ
ಮೇರೆದಪ್ಪಿದ ವಾರ್ಧಿಯೆಂತಂತೆ ಕವಿವುತಿರೆ
ಧೀರನೋಸರಿಸದೆ ಮಹಾಗಣಂ ಪೊಗಳುತಿರೆ
ತನ್ನರ್ಥವುಂ ತೀರೆ ಭಕ್ತರ್ಗೆ ನೆರೆ ಮಾಡಿ
ಇನ್ನುಳ್ಳುದೇನೆಂದು ನೆನೆದು ಭಕ್ತಂ ನೋಡಿ
ಮಾರಿ ಶರಣರ್ಗಿತ್ತನುಳ್ಳನಿತು ಭೂಮಿಯಂ
ಬೀರುತಿರ್ದಂ ಶರಣ ಜನರ ಮನದೀಪ್ಸೆಯಂ
ಎನಿತೆನಿತು ಭೂಮಿ ಕ್ರಮದಿಂ ಮಾರಿಕಿರಿದಾಗೆ
ಅನಿತನಿತು ತನ್ನಯ ಮನಂ ಪೆರ್ಚಿ ಪಿರಿದಾಗೆ
ಇತ್ತನೆಲ್ಲಾ ಭೂಮಿಯಂ ಮಾರಿ ಭಕ್ತರ್ಗೇ

ಚಿತ್ತದೊಳ್ಹಿಗ್ಗಿ ಹೆಚ್ಚುತ್ತೆ ಶಿವನಣುಗರ್ಗೆ
ಕುಡುತಮಿರೆ ಭೂಮಿ ತೀರ್ದೊಡೆ ತೀರಲೇನೆಂದು
ಕಡುಹಾಗಿ ತೋಟಮುಂ ಮಾರತೊಡಗಿದನಂದು
ಅದು ತೀರೆ ತನ್ನ ಮನೆಯೊಳಗರ್ಥಮಂ ಮಾರಿ
ಸದಮಳ ಶಿವಾರ್ಚಕರ್ಗಿತ್ತನುತ್ಸಹವೇರಿ
ಇಂತು ಕುಡುತಿರೆ ಮಿಕ್ಕುದಂತೊಂದು ತೋಲ್ನೆಲಂ
ಸಂತತಂ ಶಿವಭಕ್ತಿ ಬೀಜ ಬಿತ್ತುವ ನೆಲಂ
ಆ ನೆಲದೊಳುಳ್ಳುದೊಮ್ಮನ ಬೀಜಮುಂ ತಳೆದು
ಏನಾದುದಂ ಕೊಂಡು ಬಂದು ಹರುಷಂದಳೆದು
ಅಲ್ಲಿ ಭಕ್ತರ್ಬಂದೊಡುಳ್ಳುದಂ ಹಂಚಿಕ್ಕಿ
ಸಲ್ಲೀಲೆ ಹೆಚ್ಚಿ ಪರಮಾನಂದದಿಂದುಕ್ಕಿ
ಮತ್ತೆ ಶರಣರ್ಬಂದೊಡುಟ್ಟುದಂ ಹೊದೆದುದಂ
ಉತ್ತಮ ಶಿವಾಚಾರಿ ಕೊಟ್ಟಿರ್ಪನಿರ್ವಾಣನಂ
ಸತಿಗೊಂದು ಕಪ್ಪಟಂ ತನಗೊಂದು ಕೋವಣಂ
ಸುತನೆನಿಸುವಾತಂಗೆ ಮತ್ತೊಂದು ಕೋವಣಂ
ಮೂವರುಂ ನಿಂದಿರ್ಪರನಿತು ಮನೆ ತಮಗುಳಿಯೆ
ಈವಡಂತೇನುಮಿಲ್ಲದೆ ನಿಜದ ಮನ ಉಳಿಯೆ
ಅವರೊಳಗೆ ಯಿಳೆಯಾಂಡ ಕುಡುತುಮಿರ್ದಂ ನೋಡ
ಮದನಹರಭಕ್ತರ್ಗೆ ಕುಡುತಮಿರ್ದಂ ನೋಡ
ಇನಿತುಳಿಯೆ ಭಕ್ತರ್ಗೆ ಮಾಡುತಿರ್ಪಂ ನೋಡ
ಅನಿತನಿತು ಭಕ್ತಿ ಹೆಚ್ಚುತ್ತಮಿರ್ದುದು ನೋಡ
ಅನಿತವಸ್ತೆಯೊಳಿರ್ದು ಸುಮ್ಮನಿರ್ದನೆ ನೋಡ
ಅನುಪಮದ ಭಕ್ತಂಗೆ ಲೀಲೆ ಮಿಕ್ಕುದು ನೋಡ
ಧನವಿಲ್ಲದೊಡೆ ಏನು ಧಾನ್ಯವಿಲ್ಲದೊಡೇನು
ಮನೆಯುಲ್ಲದೊಡೆ ಏನು ಏನುವಿಲ್ಲದೊಡೇನು
ತನುವಿರ್ದಪುದು ತನುವಿನೊಳಗರ್ಥವಿತ್ತಪೇಂ
ಮನವಿರ್ದಪುದು ಮನದೊಳರ್ಥಮುಂ ಇತ್ತಪೇಂ
ಹರಣವಿದೆ ಹರಣದೊಳಗರ್ಥಮುಂ ಕೊಟ್ಟಪೇಂ
ಎರಡು ಕಣ್ಣಿವೆ ಎರಡರೊಳಗೊಂದ ಕೊಟ್ಟಪೇಂ



ಇಂತು ಶರಣರ್ಗೀವ ಚಿಂತೆಯಂ ಚಿಂತಿಸುತೆ
ಮುಂತೆ ತನಗೇನಾದುದಂ ಕುಡಲ್ಚಿಂತಿಸುತೆ

ಇಂತು ತೊಂಬತ್ತೈದು ಬರಿಸಂಬರಂ ಮಾಡಿ
ಚಿಂತಿಸಿದನೀಶ್ವರಂ ತನ್ನೊಳೊಂದಂ ನೋಡಿ
ಈ ಭಕ್ತನಾ ಮನವನೊರೆದು ನೋಡುವೆನೆಂದು
ವೈಭವಂ ಮಿಗೆ ನೋಡಿಕೊಂಡು ಪೋಗುವೆನೆಂದು
ಅಳವಡಿಸಿಕೊಂಡನೊಲ್ದಂತೊಂದು ಜೋಹಮುಂ
ಇಳೆಗೆ ಮಿಗೆ ಪೊಸತೆನಿಪ ಶತವೃದ್ಧಭಾವಮುಂ
ಶಿರವ ನೆರೆ ಮೆಯ್ಯ ತೆರೆ ಕರದ ಕೋಲಿಂದೆಸೆದು
ಸುರುಳ್ದ ತನು ಕೂತ ಬೆನ್ನೋಲ್ದ ಮುರ್ಬಿಂದೆಸೆದು
ಚೋಳದೇಶ ಪ್ರಾಂತಮುಂ ಹರ್ಷದಿಂ ಪೊಕ್ಕು
ಶೂಲಿಭಕ್ತನ ಮನವ ನೋಡಲ್ಮನಂ ಮಿಕ್ಕು

ಯಿಳೆಯಾಂಡಗುಡಿಯ ಹತ್ತಿರ್ನಟ್ಟಿರುಳ್ಬಂದು
ಜಲದಂಗಳಂ ನೆನೆದನದ್ಭುತಂ ಮಿಗಿಲಂದು
ನೆನೆಯೆ ತುಂಬಿದವು ನಭಮಂ ಮೇಘಸಂಕುಳಂ
ತನತನಗೆ ತೀವಿ ತೀಡಿತ್ತು ನೀರದ ಬಳಂ
ಗಗನಂ ಘನೀಭೂತವಾದುದೆಂಬಂದದಿಂ
ಮಿಗೆ ತೀವಿ ಸೂಸಿತ್ತು ಸಲಿಲಮುತ್ಸಾಹದಿಂ
ಮಳೆಗರೆದುದಾಗಸಂ ಜಲವಾದುದೆಂಬಂತೆ
ಇಳೆ ಜಲದ ಮೇಲೆ ತೇಂಕಾಡಿದುದು ಎಂಬಂತೆ
ಬಂದ ಮಳೆಯೊಳ್ಕವಿದ ಕತ್ತಲೆ ಕರಂ ಪೆಚ್ಚಿ
ಸಂದಣಿಸಿ ದಿಙ್ಮುಖಂಗೆಡಿಸಿ ಜಗಮುಂ ಮುಚ್ಚಿ
ಮಿಂಚುವೆಳಗುಚ್ಚಳಿಸಿದಂತೆ ದಟ್ಟಯಿಸಿ ಬರೆ
ಸಂಚಳಿಪ ಮನಮನಿಕ್ಕಲ್ತೆರಪನೀಯದಿರೆ

ಇಂತಿಡಿದ ಕತ್ತಲೆಯೊಳಭವನೂರಂ ಪೊಕ್ಕು
ಕಂತುಹರ ತುಂತುರೊಳ್ನಡುಗುತೂರಂ ಪೊಕ್ಕು
ಯಿಳೆಯಾಂಡಗುಡಿಯಮಾರನ ಮನೆಗೆ ನಡೆತಂದು

ಚಳಿ ಹತ್ತೆ ಮಳೆಯೊಳಗೆ ಘಾಸಿಯಾಗುತೆ ಬಂದು
ನಡುಗಿ ಪಲ್ಪಿರಿಗುಟ್ಟೆ ಬಾಗಿಲೊಳ್ನಿಂದಿರಲ್
ಕಡು ಸೀತದಿಂದಳ್ಕಿ ಬಳ್ಕುತುಂ ಬಂದಿರಲ್

ಒಳಗೆ ಚಳಿ ಹತ್ತಿ ಯಿಳೆಯಾಂಡ ಗುಡಿಮಾರನಿರೆ
ಬಳಲುತುಂ ಮೂರುನಾಲ್ಕುಪವಾಸದಿಂದಲಿರೆ
ಹಾಸಲುಂ ಹೊದೆಯಲುಂ ಹರನ ನಾಮಂ ತನಗೆ
ಆಸುರದ ಚಳಿಗೆ ಮರೆ ಈಶ ನಾಮವೆ ತನಗೆ
ಒಳಗೆ ಫಾಳೇಕ್ಷಣನ ನಾಮ ತೀವಿರೆ ಕರಂ
ಚಳಿ ಹೊದ್ದದಂತಿರ್ದನಭವಭಕ್ತಂ ಕರಂ
ಇರಲವರ ಮನೆಯ ಬಾಗಿಲ ಹತ್ತೆ ಸಾರುತುಂ

ಹರಹರ ನಮಃಶಿವಾಯೆಂಬ ದನಿದೋರುತುಂ
ಇರೆ ಕೇಳುತಿಳೆಯಾಂಡಗುಡಿಮಾರನಾರೆಂದು
ಕರ ಬಳಲ್ದಿಲೆಲೆ ಎನ್ನಾಳ್ದರ ಧ್ವನಿ ಎಂದು
ಕೆಟ್ಟೆ ಕತ್ತಲೆಯೊಳೆಯ್ತಪ್ಪರೇ ಎಲೆ ದೇವ
ನಟ್ಟಿರುಳ್ಕಳೆಯೊಳೆಯ್ತಪ್ಪರೇ ಎಲೆ ದೇವ
ಬಂದು ಗಳಗಳನೆ ಕದವಂ ತೆರೆದು ಕಾಣುತುಂ
ಬಂದು ಚರಣದ ಮೇಲೆ ಬೀಳ್ದು ಭಯವೇರುತುಂ
ಇರೆ ಕರಂ ನಡು ನಡುಗಿ ಚಳಿ ಹೊಡೆದುದೆಲೆ ಮಗನೆ
ಹರಣಮಂ ಹತ್ತಿತ್ತು ಸೀತ ಹೂ ಹೂ ಮಗನೆ
ನಿಲಲಾರೆ ನಿನ್ನೆಂತು ಕೈಕಾಲ್ಸುರುಳ್ದಪವು
ಪಲವು ಮಾತೇನವಯವಂಗಳೆಲ್ಲರಳ್ದಪವು
ತನು ಒಡೆದಪುದು ಚಳಿಗೆ ಮನ ಸೀಳ್ದಪುದು ಚಳಿಗೆ

ಎನೆ ಕೇಳ್ದು ಭಯಭಕ್ತಿಯಿಂ ನಡುಗಿ ಬಂದೊಳಗೆ
ಇರ್ಬರಿಪ್ಪೆಡೆಯ ಮಾಳಿಗೆಯ ಜಂತೆಯನುರ್ಚಿ
ಒರ್ಬನಂ ಕುಳ್ಳಿರಿಸಲಭವ ತಾಂ ಮೈಯ್ವೆರ್ಚಿ
ಪಟು ಮಾಡಿದಂ ಬೆಂಕಿಯಂ ಶಿವನ ಚಳಿಗೆಂದು
ನಟಿಸುತಿರ್ಪಂ ಪರಮನತುಳ ಸೀತಮನಂದು



ತೊಡೆಗಳಂ ತೋಳ್ಗಳಂ ಚರಣದ್ವಯಂಗಳಂ
ನಡು ಬೆನ್ನುರಸ್ಥಳಂ ವದನವಿರ್ಬದಿಗಳಂ
ಸೀತವಿರದಂತೆ ಮೆಲ್ಲನೆ ಕಾಸಿಯೊತ್ತುತಿರೆ
ಭೂತೇಶ್ವರಂ ನೋಡಿ ಕೌತುಕಂಬಡುತಮಿರೆ
ಎನಿತನಿತು ಚಳಿ ಹೋಗಲನಿತನಿತು ಪಸಿವಡಸೆ
ಅನುಮಿಸುತೆ ಪಸಿದೆ ಪಸಿದೇಂ ಎಂದು ಲವಲವಿಸೆ

ಕೇಳುತಿಳೆಯಾಂಡಗುಡಿಮಾರನಾರುಮ್ಮಳಿಸಿ
ಬೇಳಾಗಿ ಮೂರುಪಾಸದೊಳಿರ್ದು ಬೆಬ್ಬಳಿಸಿ
ಇಂತು ತಮ್ಮರಸಿಯರ ಮೊಗಂ ನೋಡುತ್ತಲಿರೆ
ಚಿಂತಿಸಿದಳೊಂದು ತೆರನಂ ಶಿವಂ ಮೆಚ್ಚುತಿರೆ
ಮೊನ್ನೆ ಬಿತ್ತಿರ್ದ ಮೊಳೆವಿತ್ತನೆತ್ತಿಯೆ ತಂದು
ಪನ್ನಗಾಭರಣಂಗೆ ಪಸಿವನಾರಿಪುದೆಂದು
ಅರುಪೆ ಹರುಷಂದಳೆದು ಪರಮಭಕ್ತಂ ಮೆಚ್ಚಿ
ಪೊರಮಟ್ಟನೊಲ್ದು ಮಧ್ಯಮ ರಾತ್ರಿಯೊಳ್ಪೆಚ್ಚಿ

ಮತ್ತೆ ಮಳೆ ಪಿರಿದಾಗೆ ಮತ್ತೆ ಚಳಿ ಪಿರಿದಾಗೆ
ಮತ್ತೆ ಕತ್ತಲೆ ಸುತ್ತಿ ಮುತ್ತಿಯುನ್ನತವಾಗೆ
ಬರುತಿರ್ದನಪ್ರತಿಮ ಶಿವಭಕ್ತನುರವಣಿಸಿ
ಪುರದ ಹೊಲಗಳ ದಾಂಟಿ ಕತ್ತಲೆಯನುತ್ತರಿಸಿ
ಹಳ್ಳಂಗಳಂ ಕೆರೆಗಳಂ ತೊರೆಗಳಂ ದಾಂಟಿ
ಕೊಳ್ಳಂಗಳಂ ಕೊಳಗಳಂ ಲಂಘಿಸುತೆ ದಾಂಟಿ
ಹೋಗಿ ಗರ್ದೆಯೊಳಿರ್ದ ಮೊಳೆವಿತ್ತನೆತ್ತಿದಂ
ರಾಗದಿಂ ತಂದವಂ ಗೂಡೆಯೊಳಗಿಕ್ಕಿದಂ
ತಿರುಗಿ ಬರುತಿರ್ದಂ ಹರಂ ಹಸಿದನೆಂದೆನುತೆ
ಉರವಣಿಸಿ ಬರುತುಂ ಬಳಲ್ದನೀಶ್ವರನೆನುತೆ

ಬಂದು ತಮ್ಮರಸಿಯರ ಮುಂದಿಳುಪಿ ನಲಿನಲಿದು
ತಂದ ಮೊಳೆವಿತ್ತನಾನಂದದಿಂದಂ ಹುರಿದು
ಅಮೃತಾನ್ನವೆನಿಪ ಓಗರವ ನಲವಿಂ ಮಾಡಿ
ಸವಿದ ಕೀರೆಯ ತಂದು ಮೇಲೋಗರಂ ಮಾಡಿ

ಅನುವಿಸುತೆ ಭಕ್ತನಾರೋಗಣೆಗೆ ಎಡೆಮಾಡಿ
ತನಯನಂ ಕದಳೀದಳಕ್ಕೆ ಕಳುಪಲೋಡಿ
ನಿಂದಿರ್ದ ಬಾಳೆಯೆಲೆಯಂ ಕೊಯ್ದು ತರಲಲ್ಲಿ
ಇಂದುಧರನಾಜ್ಞೆಯಿಂದುರಗಂ ಪಿಡಿಯಲಲ್ಲಿ
ಮರೆದೊರಗಿದಂತಲ್ಲಿ ದೀರ್ಘನಿದ್ರೆಯೊಳಿರಲ್
ಸೊಂಗೆ ಶಶಿಧರನತ್ತ ಪಸಿದೆನೆಂದೆನುತಿರಲ್
ತಡೆದನೆಂದಿಳೆಯಾಂಡಗುಡಿಮಾರನೆಯ್ತಂದು
ಪಿಡಿದುರಗನಿಂ ಮಡಿದ ಮಗನನೀಕ್ಷಿಸುತಂದು

ಇದನರಿದೊಡೀತನುಣಲೊಲ್ಲನೇವೇಳುವೇಂ
ಇದನರುಪದುಣಲಿಕ್ಕಿ ಸಂತಸಂ ಮಾಡುವೇಂ
ಎಂದೆಲೆಗಳಂ ಕೊಯ್ದು ತಂದು ಭಕ್ತನ ಮುಂದೆ
ಚಂದಚಂದದೊಳು ಹಾಸುತ್ತೆ ಸಂತಸದಿಂದೆ
ತಿಳಿನೀರ್ಗಳಂ ತಳಿದು ತೊಳಪ ಓಗರವಿಕ್ಕಿ
ಎಳೆಯ ಕೀರೆಯ ಸಮೆದ ಮೇಲೋಗರವನಿಕ್ಕಿ
ಆರಯ್ವುವುದು ಸದಾಶಿವ ಕರುಣದಿಂದೆನುತೆ
ಹಾರಯ್ಸುತುಂ ಶಂಭುವೆ ಕರುಣಿಸು ಎಂದೆನುತೆ
ಪುರಹರಂ ಜಿಸಸುತ್ತಲಾಪೂರ್ಬರುಣ್ಣೆವೆನೆ
ಹರಭಕ್ತರ ಸಹಪಙ್ತಿಯಲುಣ್ಣಾವೇಳ್ಕುಮೆನೆ
ತಂದೆ ಮಕ್ಕಳೆಲ್ಲರ್ಕುಳ್ಳಿರ್ದುದೆನೆ ಕೇಳ್ದು

ನೊಂದು ಹರನುಣಲೊಲ್ಲನಿನ್ನೇವೆನೆನುತೇಳ್ದು
ಮಗನಳಿದುದಂ ಅರುಪಬಾರದೇವೇಂ ಶಿವನೆ
ಮಗನಿಲ್ಲದಿರ್ದೊಡುಣಲೊಲ್ಲನೇವೇಂ ಭವನೆ
ಕರೆದು ನೋಡುವೆನೇಳದಿರ್ದೊಡಿಂದಭವಂಗೆ
ಶಿರವನೊಪ್ಪಿಸುವೆನುಣಲೊಲ್ಲದ ಮಹೇಶಂಗೆ
ಎನುತೆ ನಡೆತಂದು ತತ್ಸ್ಥತನ ಹತ್ತಿರೆ ನಿಂದು
ತನುಜನೇಳ್ಮಗನೆ ಹರನುಣಲೊಲ್ಲನೇಳೆಂದು
ಕರೆಯಲಾಗಳೆ ನಿದ್ರೆ ತಿಳಿದೇಳ್ವರಂದದಿಂ
ಚರಿತದಿಂದೇಳ್ದ ಮಗನಂ ಕೊಂಡು ರಾಗದಿಂ
ಬರೆ ಜಗಜ್ಜ್ಯೋತಿರ್ಮಯಂ ಬೆಳಗುತಿರಲೊಳಗೆ



ಪುರಹರಂ ವೃದ್ಧವೇಷವನಿಳುಪಿ ತೊಳತೊಳಗೆ
ಜಡೆ ಚಂದ್ರಕಳೆ ನೊಸಲಕಣ್ನಾಗಕುಂಡಲಂ
ತೊಡಿಗೆಯಹಿ ಕರಿಗೊರಲ್ಮಿಸುಪ ಮುಖಮಂಡಲಂ
ದಶಭುಜಂ ಡಮರುಗ ತ್ರಿಶೂಲಂ ಗಜಾಜಿನಂ
ದಿಸೆವೆಸೆಯು ಬೆಳಪ ಪುಲಿದೊವಲು ಪಂಚಾನನಂ
ತಾನೊಪ್ಪಿ ರವಿಕೋಟಿತೇಜಮಂ ಮಸುಳಿಸುತೆ
ನಾನಾ ಸುಧಾಕರ ಪ್ರಭೆಗಳಂ ರಂಜಿಸುತೆ

ಇರೆ ಕಾಣುತಿಳೆಯಾಂಡಗುಡಿಮಾರರೆಯ್ತಂದು
ಚರಣತಳದೊಳ್ಬಿದ್ದು ನೆರೆ ಪುಳುಕಿಸುತ್ತಂದು
ದೇವಾ ಜರಾಜೀರ್ಣ ವೇಷಮಂ ಕೆಯ್ಕೊಂಡು
ದೇವಾ ಮಳೆಯೊಳ್ಚಳಿಯೊಳೆನ್ನ ಮನಂಗೊಂಡು
ಬಪ್ಪುದೇ ಇಂತಿರುಳು ಕರುಣಿ ಕರುಣಿಗಳರಸ
ಒಪ್ಪವಾಯ್ತೆನ್ನ ಮಾಟಂ ಹೈಮವತಿಯರಸ
ಚಳಿ ಹತ್ತಿತೇ ಪತ್ತಿತೇ ತಂದೆ ಹೇಳಯ್ಯ
ಮಳೆಯೊಳಗೆ ತನು ನೆನೆದು ಕೊರಗಿತೇ ಹೇಳಯ್ಯ

ಎನುತಿರೆ ಗಣೇಶ್ವರರ್ನಡೆತಂದರುರವಣಿಸಿ
ತಮ ತಮಗೆ ಶಿವನನರಸುತ್ತಲ್ಲಿ ಸಂದಣಿಸಿ
ನಂದೀಶ ವೀರಭದ್ರಾದಿ ಗಣಸಂಕುಳಂ
ಬಂದು ರುದ್ರಂಗೆರಗಿ ನಿಂದಿರೆ ನಿರಾಕುಳಂ
ಕಂಡು ಶಿವನೆಂದನೆಲೆ ನಂದೀಶ ಕೇಳಯ್ಯ
ಕಂಡೆನಿಲ್ಲಿಂತಪ್ಪ ನೇಹಮಂ ಪೊಸತಯ್ಯ
ಈ ಮಳೆಯೊಳೀ ಚಳಿಯೊಳಿಂತು ಪೋದವರುಂಟೆ
ಪಮಾತೊ ಮೊಳೆವಿತ್ತನೆತ್ತಿ ತಂದವರುಂಟೆ
ಮಗನ ಸಾವಂ ನೋಡದುಣಲಿಕ್ಕಿದವರುಂಟೆ
ಜಗದೊಳಗೆ ವಾಂಛಿತವನುಳಿದು ಮಾಳ್ಪವರುಂಟೆ
ಎಂದು ಕೊಂಡಾಡುತಿರೆ ಪೂಮಳೆಗಳೆರಗಿದವು
ಅಂದು ನಾಕದ ದುಂದುಭಿಸ್ವನಂ ಮೊಳಗಿದವು

ಆಗಳಾ ಯಿಳೆಯಾಂಡಗುಡಿವಾರನಭವಂಗೆ
ಹೋಗಲೀವೆನೆ ದೇವನಾರೋಗಿಸಿಂದಿಂಗೆ
ಎನೆ ನಸುನಗುತೆ ಭಕ್ತನಿಚ್ಛೆಯಂ ನೆರೆ ಸಲಿಸಿ
ವನಿತೆ ಪಾರ್ವತಿದೇವಿ ಗಣಸಂಕುಳಂವೆರಸಿ
ಆರೈಸಿದಂ ಕರುಣದಿಂದ ಶಶಿಶೇಖರಂ
ಹಾರೈಸಿ ಮೊಳೆವಿತ್ತನೋಗರವನೀಶ್ವರಂ
ಆ ಸಮಯದೊಳ್ಗಂಡಹೆಂಡಿರ್ಗೆ ತನಯಂಗೆ
ಭಾಸುರದ ಪುಷ್ಪಕಂಗಳು ಬಂದವನುವಿಂಗೆ
ಬರಲವರನಾ ಪುಷ್ಪಕಂಗಳೊಳಗಿರಿಸುತುಂ
ಹರುಷದಿಂ ದೇವ ದುಂದುಭಿಗಳಂ ಹೊಯ್ಸುತುಂ
ಕರೆದು ತುಂಬುರ ನಾರದರನೊಲ್ದು ಪಾಡಿಸುತೆ
ಬರಿಸಿ ವರ ಚಂಡಕೀರ್ತಿಗಳಿಂದ ಪೊಗಳಿಸುತೆ
ಕೈಲಾಸಪುರಕೆ ಕೊಂಡೊಯ್ದನುತ್ಸಾಹದಿಂ
ಶೈಲಜಾಪತಿ ಕರುಣ ಉಬ್ಬರಿಸಿ ನೇಹದಿಂ
ಕೊಂಡೊಯ್ದು ಗಣಪದವಿಯೊಳಗವರನೊಲ್ದಿರಿಸಿ
ಖಂಡೇಂದುಮೌಳಿ ತನ್ನಯ ಕರುಣದೊಳಗಿರಿಸಿ
ತಾನಾದಿಮಧ್ಯಾಂತಶೂನ್ಯನಿಂತೊಪ್ಪಿದಂ
ನಾನಾಶರಣವೃಂದಮಾನ್ಯನಿಂತೊಪ್ಪಿದಂ
ಶರಣ ಜನ ಹೃದಯ ಮಧ್ಯಜ್ಯೋತಿಯೊಪ್ಪಿದಂ
ನಿರುಪಾಧಿಕಪ್ರಮೋದಾಂಬೋಧಿಯೊಪ್ಪಿದಂ
ಸತ್ವಾದಿಗುಣಧರಾರ್ಜಿತರೂಪನೊಪ್ಪಿದಂ
ತತ್ವನಿಧಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ದೃಢದಿಂ ಮೆರೆದಿಳೆಯಾಂಡ।
ಗುಡಿವಾರರ ಕಂದನೆಂದು ಸದ್ಭಕ್ತಿಯನಿತ್ತಡೆ॥
ಬಿಡದೆ ಕರುಣಿಸುದು ನೀಂ।
ಕಡೆಗಣಿಸದೆ ದೇವ ಹಂಪೆಯ ವಿರೂಪಾಕ್ಷಾ॥

**ಸಮಾಪ್ತ.**